# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಗುರುವಾರ, ನವೆಂಬರ್ 07, 2024

ಸಂಪುಟ : 51 ಸಂಚಿಕೆ : 174 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


# ಅಮೆರಿಕದಲ್ಲಿ ಮತ್ತೆ ಟ್ರಂಪ್ ಸರ್ಕಾರ



ವಾಷಿಂಗ್ಟನ್, ನ. 6 - 2020 ರ ಚುನಾವಣಾ ಸೋಲಿನಿಂದ ಪುಟಿದೆದ್ದಿರುವ ಡೊನಾಲ್ಡ್ ಟ್ರಂಪ್, 2024ರಲ್ಲಿ ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಆ ಮೂಲಕ ಟ್ರಂಪ್ ಅಮೆರಿಕದ ರಾಜಕೀಯ ಇತಿಹಾಸದಲ್ಲಿ ಅಪರೂಪದ ಸಾಧನೆ ಮಾಡಿದ್ದಾರೆ.

78 ವರ್ಷದ ರಿಪಬ್ಲಿಕನ್ ನಾಯಕ ಟ್ರಂಪ್ ಗಂಭೀರ ಅಪರಾಧ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದಾರೆ ಹಾಗೂ ನ್ಯೂಯಾರ್ಕ್‌ನಲ್ಲಿ ಅಕ್ರಮ ಹಣ ಪ್ರಕರಣವೊಂದನ್ನೂ ಎದುರಿಸುತ್ತಿದ್ದಾರೆ. ಅವರು ಡೆಮಾಕ್ರಟಿಕ್ ಅಭ್ಯರ್ಥಿಯೂ ಆಗಿರುವ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್‌ಗೆ ಕಹಿ ಸೋಲುಣಿಸಿದ್ದಾರೆ.

ಇತ್ತೀಚಿನ ವರದಿಗಳ ಪ್ರಕಾರ ಡೊನಾಲ್ಡ್ ಟ್ರಂಪ್ ಅವರು 277 ಸ್ಥಾನಗಳನ್ನು ಪಡೆದಿದ್ದಾರೆ. ಅಧ್ಯಕ್ಷ ಗಾದಿ ಹಿಡಿಯಲು 270 ಸ್ಥಾನಗಳ ಅಗತ್ಯವಿದೆ. ಹ್ಯಾರಿಸ್ ಅವರು 224 ಸ್ಥಾನ ಪಡೆದಿದ್ದಾರೆ.

ಟ್ರಂಪ್ ಅವರು ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಬಂದ ಅತ್ಯಂತ ಹಿರಿಯ ವಯಸ್ಸಿನವರಾಗಿದ್ದಾರೆ. ಗೆಲುವಿನ ನಂತರ ಮಾತನಾಡಿರುವ ಅವರು , ಈ ಬಾರಿಯ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಪಡೆದಿರುವ ಗೆಲುವು ಅಭೂತಪೂರ್ವ ಹಾಗೂ (2ನೇ ಪುಟಕ್ಕೆ)

## ಟ್ರಂಪ್ ಗೆಲುವಿನ ನಂತರ ಷೇರುಪೇಟೆಯಲ್ಲಿ ಉತ್ಸಾಹ

ಮುಂಬೈ, ನ. 6 – ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲುವು ಸಾಧಿಸಿದ ನಂತರ ಮುಂಬೈ ಷೇರುಪೇಟೆಯಲ್ಲಿ 901 ಅಂಕಗಳ ಏರಿಕೆ ಕಂಡು ಬಂದಿದೆ. ಐ.ಟಿ. ಹಾಗೂ ಫಾರ್ಮಾ ಷೇರುಗಳ ಬೆಲೆಯಲ್ಲಿ ಗಣನೀಯ ಏರಿಕೆಯಾಗಿದೆ.

ಷೇರುಪೇಟೆಯಲ್ಲಿ ಶೇ.1.13ರ ಏರಿಕೆಯಾಗಿದ್ದು, ಸೂಚ್ಯಂಕ 80,378.13ಕ್ಕೆ ತಲುಪಿದೆ. ಎನ್.ಎಸ್.ಇ. ನಿಫ್ಟಿ ಸಹ ಶೇ.1.12ರ ಏರಿಕೆ ಕಂಡು 24,484.05ಕ್ಕೆ ತಲುಪಿದೆ.

ಟಿಸಿಎಸ್ ಹಾಗೂ ಇನ್ಫೋಸಿಸ್ ಷೇರುಗಳ ಮೌಲ್ಯ ಶೇ.4ಕ್ಕಿಂತಲೂ ಹೆಚ್ಚು ಏರಿಕೆಯಾಗಿದೆ. ಹೆಚ್.ಸಿ.ಎಲ್. ಟೆಕ್ನಾಲಜೀಸ್, ಟೆಕ್ ಮಹೀಂದ್ರ, ಅದಾನಿ ಪೋರ್ಟ್ಸ್, ಲಾರ್ಸೆನ್ ಹಾಗೂ ಟಬ್ರೋ, ಮಾರುತಿ ಹಾಗೂ ರಿಲೈಯನ್ಸ್ ಇಂಡಸ್ಟ್ರೀಸ್ ಷೇರುಗಳ ಬೆಲೆಗಳೂ ಏರಿಕೆಯಾಗಿವೆ.

ಇಂಡಸ್‌ಇಂಡ್ ಬ್ಯಾಂಕ್, ಹಿಂದೂಸ್ತಾನ್ ಯುನಿಲಿವರ್, ಆಕ್ಸಿಸ್ ಬ್ಯಾಂಕ್ ಹಾಗೂ ಹೆಚ್.ಡಿ.ಎಫ್.ಸಿ ಬ್ಯಾಂಕುಗಳ ಷೇರುಗಳು ಹಿಂದೆ ಬಿದ್ದಿವೆ. ಅಮೆರಿಕದ ಚುನಾವಣಾ ಫಲಿತಾಂಶ ಹೊರ ಬಿದ್ದ ನಂತರ ರಾಜಕೀಯ ಅನಿಶ್ಚಿತತೆಗೆ ತೆರೆ ಬಿದ್ದಿದೆ. ಟ್ರಂಪ್ ಅವರಿಗೆ ಬಲಿಷ್ಠ ಜನಾದೇಶ ದೊರೆತಿದೆ. ಇದರಿಂದಾಗಿ ತೆರಿಗೆ ಕಡಿತ (2ನೇ ಪುಟಕ್ಕೆ)

## ಟ್ರಂಪ್ ಗೆಲುವಿನಿಂದ ಕ್ರಿಪ್ಟೋ ಬೇಡಿಕೆ ಹೆಚ್ಚಳ

ಲಂಡನ್, ನ. 6 - ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಆಯ್ಕೆಯಾದ ನಂತರ ಕ್ರಿಪ್ಟೋ ಕರೆನ್ಸಿ ಬೇಡಿಕೆ ಹೆಚ್ಚಾಗಿದೆ. ಇದರಿಂದಾಗಿ ಬಿಟ್‌ಕಾಯಿನ್ ಮೌಲ್ಯ 75 ಸಾವಿರ ಡಾಲರ್ ಹಂತವನ್ನು ದಾಟಿದೆ. ಎದರ್ ಕ್ರಿಪ್ಟೋ ಕರೆನ್ಸಿ ಮೌಲ್ಯ ಸಹ ಶೇ.8ರಷ್ಟು ಹೆಚ್ಚಾಗಿದೆ. ಚುನಾವಣೆಗೆ ಮುಂಚೆ ಟ್ರಂಪ್ ಅವರು ಕ್ರಿಪ್ಟೋ ಕರೆನ್ಸಿ ಪರ ಧೋರಣೆ ತಳೆದಿದ್ದರು. ಈ ವರ್ಷ ಬಿಟ್‌ಕಾಯಿನ್ ಮೌಲ್ಯ ಶೇ.77ರಷ್ಟು ಹೆಚ್ಚಾಗಿದೆ.

## ಟ್ರಂಪ್ ಗೆಲುವಿನಿಂದ ದಾಖಲೆ ಹಂತಕ್ಕೆ ಕುಸಿದ ಇರಾನ್ ಹಣದ ಮೌಲ್ಯ

ತೆಹರಾನ್, ನ. 6 - ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಆಯ್ಕೆಯಾದ ನಂತರ ಇರಾನ್ ಹಣವಾದ ರಿಯಾಲ್ ಮೌಲ್ಯ ದಾಖಲೆ ಹಂತಕ್ಕೆ ಕುಸಿದಿದೆ. ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ಇರಾನ್‌ಗೆ ಹೊಸ ಸವಾಲು ಎದುರಾಗಿದೆ.

ಡಾಲರ್ ಎದುರು ರಿಯಾಲ್ ಮೌಲ್ಯ 7,03,000 ಹಂತಕ್ಕೆ ಕುಸಿದಿದೆ. ಬೆಲೆ ಸ್ಥಿರೀಕರಿಸಲು ಇರಾನ್ ಕೇಂದ್ರ ಬ್ಯಾಂಕ್ ಹೆಚ್ಚು ಡಾಲರ್‌ಗಳನ್ನು ಬಿಡುಗಡೆ ಮಾಡುತ್ತಿದೆ.

ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾದ ನಂತರ ಇರಾನ್ ಮೇಲಿನ ನಿರ್ಬಂಧಗಳನ್ನು ಇನ್ನಷ್ಟು ಹೆಚ್ಚಿಸಲಿದ್ದಾರೆ. ಇದರಿಂದ ಇರಾನ್ ಆರ್ಥಿಕ ಸಂಕಷ್ಟ ಇನ್ನಷ್ಟು ಹೆಚ್ಚಾಗಲಿದೆ ಎಂಬ ಭಾವನೆಗಳಿವೆ.

# ಲೋಕಾ ಎದುರು ಸಿಎಂ ಹಾಜರಿ

### ಮೊದಲ ಬಾರಿ ಭ್ರಷ್ಟಾಚಾರ ಆರೋಪದ ವಿಚಾರಣೆ ಎದುರಿಸಿದ ಸಿದ್ದರಾಮಯ್ಯ

ಬೆಂಗಳೂರು, ನ. 6- ಮೈಸೂರು ನಗರಾಭಿವೃದ್ಧಿಯಿಂದ ತಮ್ಮ ಕುಟುಂಬದ ಹೆಸರಿಗೆ 14 ಬಿಡಿ ನಿವೇಶನ ಪಡೆದ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾಯುಕ್ತದ ಮುಂದೆ ಹಾಜರಾಗಿ ತನಿಖೆ ಎದುರಿಸಿದರು.

ನಲವತ್ತು ವರ್ಷಗಳ ರಾಜಕೀಯ ಬದುಕಿನಲ್ಲಿ ಸಿದ್ದರಾಮಯ್ಯ ಇದೇ ಮೊದಲ ಬಾರಿಗೆ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಒಳಪಟ್ಟರು.

ಮೈಸೂರಿಗೆ ಧಾವಿಸಿದ ಮುಖ್ಯಮಂತ್ರಿ ಅವರು ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ಮುಂದೆ ಹಾಜರಾದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಸಿದ್ಧಪಡಿಸಿದ ಪ್ರಶ್ನೆಗಳನ್ನು ಮುಖ್ಯಮಂತ್ರಿ ಅವರಿಗೆ ಕೇಳಿ ಉತ್ತರಗಳನ್ನು ದಾಖಲಿಸಿಕೊಳ್ಳಲಾಯಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಮೊದಲ ಆರೋಪಿಯಾಗಿದ್ದು, ಅವರ ಪತ್ನಿ ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ, ದೇವರಾಜ್ ಅವರುಗಳನ್ನು ಇತರೆ ಆರೋಪಿಗಳನ್ನಾಗಿ ಮಾಡಲಾಗಿದೆ. ಮೊದಲ ಆರೋಪಿ ಹೊರತುಪಡಿಸಿ ಉಳಿದ ಆರೋಪಿಗಳನ್ನು ಈಗಾಗಲೇ ವಿಚಾರಣೆ ಮಾಡಲಾಗಿದೆ, ಅಲ್ಲದೆ, ದೂರುದಾರರಾದ ಸ್ನೇಹಮಯಿ ಕೃಷ್ಣ ಮತ್ತು ಇತರರ ವಿಚಾರಣೆಯನ್ನೂ ಮಾಡಲಾಗಿದೆ. ನವೆಂಬರ್ 25ರೊಳಗೆ ಲೋಕಾಯುಕ್ತ ತನಿಖೆ ಪೂರ್ಣಗೊಳಿಸಿ, ಹೈಕೋರ್ಟ್‌ಗೆ ವರದಿ ಸಲ್ಲಿಸಬೇಕಾಗಿದೆ.



**ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿದೆ, ಲೋಕಾಯುಕ್ತ ವಿಚಾರಣೆಯಲ್ಲಿ ಸತ್ಯವನ್ನು ತಿಳಿಸಲಾಗಿದೆ.**

ವಿಚಾರಣೆಗೆ ಹಾಜರಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಲೋಕಾಯುಕ್ತ ಅಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಇದರಿಂದ ನನಗೆ ಮುಜುಗರವಾಗಿಲ್ಲ, ನನ್ನ ವಿರುದ್ಧ ಮಾಡಿರುವುದು ಸುಳ್ಳು ಆರೋಪ. ಇಂತಹ ಆರೋಪ ಬಂದಾಗ ತನಿಖೆ ಎದುರಿಸಬೇಕಾಗುತ್ತದೆ ಎಂದು ಹೇಳಿದರು.

ಲೋಕಾಯುಕ್ತ ವರದಿ ನೀಡಲಿ, ನಾವು ನ್ಯಾಯಾಲಯದಲ್ಲಿ ಹೋರಾಟ ಮಾಡಿ, ನಮ್ಮ ಮೇಲಿನ ಆರೋಪಕ್ಕೆ ನ್ಯಾಯ ಪಡೆದುಕೊಳ್ಳುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು.

ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿದೆ, ಲೋಕಾಯುಕ್ತ ವಿಚಾರಣೆಯಲ್ಲಿ ಸತ್ಯವನ್ನು ತಿಳಿಸಲಾಗಿದೆ. ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಒಂದೂ (2ನೇ ಪುಟಕ್ಕೆ)

# ಕಾನೂನು ಬಾಹಿರ ಅಂಬಿಕಾ ಬಡಾವಣೆಯ ನಕ್ಷೆ ರದ್ದು

ದಾವಣಗೆರೆ, ನ.6- ಸರ್ಕಾರದ ದೂಡಾ ನಿಯಮ ಉಲ್ಲಂಘಿಸಿ, ನಗರದ ಹೊರವಲಯದ ಆವರಗೆರೆಯಲ್ಲಿ ನಿರ್ಮಾಣಗೊಂಡ ಅಂಬಿಕಾ ಬಡಾವಣೆಯ ನಕ್ಷೆಯನ್ನು ರದ್ದು ಪಡಿಸಲಾಗಿದೆ ಎಂದು ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ದೂಡಾ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬಿಕಾ ಬಡಾವಣೆಯ ನಕ್ಷೆಯಲ್ಲಿ ನಿಯಮಾವಳಿ ಉಲ್ಲಂಘನೆ ಹಾಗೂ ಉದ್ಯಾನವನ ಜಾಗ ಕಾಯ್ದಿರಿಸದಿರುವುದು ಮತ್ತು ಸಿಎ ಸೈಟ್‌ಗಳನ್ನು ಅವರೇ ಮಾರಾಟ ಮಾಡಿದ್ದರಿಂದ ಸಂಪೂರ್ಣ ಬಡಾವಣೆಯ ನಕ್ಷೆಯನ್ನು ದೂಡಾ ರದ್ದುಗೊಳಿಸಿದೆ ಎಂದರು. ಹರಿಹರದ ಗ್ರೀನ್ ಸಿಟಿ ಬಡಾವಣೆಯಲ್ಲಿ ಚಿರಂತನಾ ಸಂಸ್ಥೆಗೆ ಮಂಜೂರಾಗಿದ್ದ ಸಿಎ ಸೈಟ್ (ನಾಗರಿಕ ಸೌಲಭ್ಯ ನಿವೇಶನ) ಒತ್ತುವರಿಯಾಗಿದ್ದರಿಂದ ಬಡಾವಣೆ ಅಭಿವೃದ್ಧಿಗೊಳಿಸಿದ ಗ್ರೀನ್ ಸಿಟಿ ಮಾಲೀಕರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.



**ದಾವಣಗೆರೆ - ಹರಿಹರಗಳಲ್ಲಿನ ಪ್ರಮುಖ ವೃತ್ತಗಳ ಅಭಿವೃದ್ಧಿಗೆ 1.226 ಕೋಟಿ ರೂ. ಹಣ ಬಿಡುಗಡೆಗೆ ಮುಖ್ಯಮಂತ್ರಿಗಳು ಸಮ್ಮತಿ ನೀಡಿದ್ದಾರೆ.**

**- ದಿನೇಶ್ ಕೆ. ಶೆಟ್ಟಿ, ಅಧ್ಯಕ್ಷರು, ದೂಡಾ**

ಈ ನಿವೇಶನವನ್ನು ಅತಿಕ್ರಮಗೊಳಿಸಿ ಅನಧಿಕೃತವಾಗಿ ಪವರ್ ಗ್ರಿಡ್ ನಿರ್ಮಿಸಿದ್ದನ್ನು ತೆರವುಗೊಳಿಸುವಂತೆ 2 ಬಾರಿ ನೋಟಿಸ್ ನೀಡಿದ್ದು, ಇದಕ್ಕೆ ಅವರು ಪ್ರತಿಕ್ರಿಯಿಸದೇ ಇರುವುದರಿಂದ ದೂಡಾ ನಿಯಮಾನುಸಾರ ಕ್ರಮ ಕೈಗೊಳ್ಳಲಿದ್ದೇವೆ ಎಂದರು. ಅನಧಿಕೃತ ಹಾಗೂ ಕಾನೂನು ಬಾಹಿರವಾಗಿ ನಿರ್ಮಾಣಗೊಂಡ ನಿವೇಶನಗಳನ್ನು ನಾಗರಿಕರು ಖರೀದಿಸಬಾರದು ಮತ್ತು ಅನಧಿಕೃತ ಹಾಗೂ ಕಾನೂನು ಬಾಹಿರವಾಗಿ ನಿರ್ಮಾಣಗೊಳ್ಳುತ್ತಿರುವ (2ನೇ ಪುಟಕ್ಕೆ)

## ವಿದ್ಯಾಲಕ್ಷ್ಮಿ ಯೋಜನೆಗೆ ಸಮ್ಮತಿ

ನವದೆಹಲಿ, ನ. 6 – ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಣಕಾಸು ಬೆಂಬಲ ನೀಡುವ ಪಿಎಂ – ವಿದ್ಯಾಲಕ್ಷ್ಮಿ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಉನ್ನತ ಶಿಕ್ಷಣಕ್ಕೆ ನೆರವಾಗಲು ಈ ಯೋಜನೆ ರೂಪಿಸಲಾಗಿದೆ. ಕೇಂದ್ರ ಸಂಪುಟ ಸಭೆಯ ನಂತರ ಈ ಬಗ್ಗೆ ಮಾಹಿತಿ ನೀಡಿರುವ ಸಚಿವ ಅಶ್ವಿನಿ ವೈಷ್ಣವ್, ಗುಣಮಟ್ಟದ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವವರು ಬ್ಯಾಂಕುಗಳಿಂದ ಅಡಮಾನ ರಹಿತ, ಗ್ಯಾರಂಟಿ ರಹಿತ ಸಾಲ ಪಡೆಯಬಹುದು. ಅಧ್ಯಯನ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಭರಿಸಲು ಈ ಸಾಲ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಎನ್.ಐ.ಆರ್.ಎಫ್. ಶ್ರೇಯಾಂಕದಲ್ಲಿ (2ನೇ ಪುಟಕ್ಕೆ)

## ಎಫ್‌ಐಆರ್ ರದ್ದತಿಗೆ ಕುಮಾರ ಮನವಿ



ಬೆಂಗಳೂರು, ನ. 7 - ಬೆಂಗಳೂರು ಪೊಲೀಸರು ತಮ್ಮ ವಿರುದ್ಧ ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕರ್ನಾಟಕ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಎ.ಡಿ.ಜಿ.ಪಿ. ಚಂದ್ರಶೇಖರ್ ಅವರು ತಮ್ಮ ವಿರುದ್ಧ ದುರುದ್ದೇಶ ಹಾಗೂ ರಾಜಕೀಯ ಪ್ರೇರಿತ ದೂರು ದಾಖಲಿಸಿದ್ದಾರೆ. ಇದರ ಆಧಾರದ ಮೇಲೆ ಬೆಂಗಳೂರು ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ತಮ್ಮ ಹಾಗೂ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ಸಹಚರ ಸುರೇಶ್ ಬಾಬು ವಿರುದ್ಧ ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸಬೇಕು ಎಂದು ಕುಮಾರಸ್ವಾಮಿ ಮನವಿ ಮಾಡಿಕೊಂಡಿದ್ದಾರೆ.

## ರಾತ್ರಿ ಕಟ್ಟಡ ಧ್ವಂಸ ಸಲ್ಲದು

### ರಸ್ತೆ ಅಗಲೀಕರಣದ ವೇಳೆ ಒತ್ತುವರಿ ತೆರವಿಗೆ ಉ.ಪ್ರ. ಸರ್ಕಾರಕ್ಕೆ ಸುಪ್ರೀಂ ನಿರ್ದೇಶನ

ನವದೆಹಲಿ, ನ. 6- ರಸ್ತೆ ಅಗಲೀಕರಣ ಹಾಗೂ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಪ್ರಕಟಿಸಿದೆ.

2019ರಲ್ಲಿ ಉತ್ತರ ಪ್ರದೇಶ ಸರ್ಕಾರ 'ಅಕ್ರಮ'ವಾಗಿ ಧ್ವಂಸ ಕಾರ್ಯಾಚರಣೆ ನಡೆಸಿದ ಬಗ್ಗೆ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಈ ನಿರ್ದೇಶನಗಳನ್ನು ನೀಡಿದೆ.

2019ರಲ್ಲಿ ರಸ್ತೆ ಅಗಲೀಕರಣದ ಕಾಮಗಾರಿ ಕೈಗೊಳ್ಳುವಾಗ ಮನೆ ಕಳೆದುಕೊಂಡ ವ್ಯಕ್ತಿಗೆ ಉತ್ತರ ಪ್ರದೇಶ ಸರ್ಕಾರ 25 ಲಕ್ಷ ರೂ. ಪರಿಹಾರ ನೀಡಬೇಕು ಎಂದೂ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

**ಬುಲ್ಡೋಜರ್ ಹರಿಸಿದ ಸರ್ಕಾರಕ್ಕೆ 25 ಲಕ್ಷ ರೂ. ಪರಿಹಾರ ನೀಡುವಂತೆ ಆದೇಶ**

ನೀವು ರಾತ್ರೋರಾತ್ರಿ ಬುಲ್ಡೋಜರ್ ತಂದು ಕಟ್ಟಡಗಳನ್ನು ಧ್ವಂಸಗೊಳಿಸಲಾಗದು. ನೀವು ಮನೆ ತೆರವುಗೊಳಿಸಲು ಕುಟುಂಬಕ್ಕೆ ಸಮಯ ನೀಡಿಲ್ಲ. ಮನೆಯಲ್ಲಿರುವ ಪಾತ್ರೆ – ಪಡಗಗಳ ಗತಿ ಏನು? ಎಂದು ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ವಕೀಲರಿಗೆ (2ನೇ ಪುಟಕ್ಕೆ)

## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಎಂ.ಹೆಚ್. ವಿಜಯಲಕ್ಷ್ಮೀಯವರು**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳು ಕಳೆದರೂ ನಿಮ್ಮ ನೆನಪು
ಸದಾ ನಮ್ಮ ಮನದಲ್ಲಿ ಶಾಶ್ವತವಾಗಿದೆ. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ

ಡಾ. ವೈ.ರಾಮಪ್ಪನವರು ಮಕ್ಕಳಾದ ಕು.ಜಾಹ್ನವಿ, ವಿನಯ್ ವಿ.ಆರ್, ಶ್ರೀಮತಿ ರಾಜಲಕ್ಷ್ಮೀ ವಿನಯ್,
ಶ್ರೀ ಕುಲುಮಿ ಯಲ್ಲಪ್ಪ ಕುಟುಂಬ ವರ್ಗದವರು ನೇರ್ಲಿಗೆ, ಶ್ರೀಮತಿ ರಂಗಮ್ಮ ಹನುಮಂತಪ್ಪನವರು,
ಶ್ರೀ ಮಂಜರಿ ಹನುಮಂತಪ್ಪನವರು, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ಶ್ರೀಮತಿ ಎಂ. ಹೆಚ್. ಗಾಯತ್ರಿದೇವಿ ತಿಮ್ಮಪ್ಪನವರು, ಶ್ರೀಮತಿ ಮಂಜುಳಾದೇವಿ ವೆಂಕಟಪ್ಪನವರು,
ಶ್ರೀ ಎಂ. ಹೆಚ್. ಆಂಜನೇಯ ಗಂಗಮ್ಮನವರು, ಡಾ. ಎಂ.ಹೆಚ್. ಕೃಷ್ಣವೇಣಿ ರವಿಕುಮಾರ್‌ರವರು,
ಶ್ರೀಮತಿ ಎಂ. ಹೆಚ್. ರೇಣುಕಾದೇವಿ ಮಲ್ಲೇಶ್ ಬಾಬುರವರು, ಡಾ ಎಂ. ಹೆಚ್.ಭೂದೇವಿ ಕುಮಾರೇಶ್‌ರವರು,
ಶ್ರೀ ಎಂ. ಹೆಚ್. ದಿವಾಕರ್ ಮಮತಾರವರು, ಡಾ ಎಂ. ಹೆಚ್. ಸತ್ಯಲಕ್ಷ್ಮಿ ಗಿರೀಶ್‌ರವರು,
ಶ್ರೀಮತಿ ಲಕ್ಷ್ಮೀ. ಕೆ. ಯಲ್ಲಪ್ಪನವರು, ಶ್ರೀಮತಿ ಪಾರ್ವತಮ್ಮ ಬಸವರಾಜಪ್ಪನವರು,
ಶ್ರೀಮತಿ ಮಂಜುಳಾ ಗಂಗಾಧರರವರು, ಗದಗ,
ಶ್ರೀಮತಿ ಅನಿತಾ ಬಿ. ಶ್ರೀ ಬಸವರಾಜ್ ವೈ. ಬಂಡಿವಡ್ಡರ್‌ರವರು, ಧಾರವಾಡ.

ಈ ಪುಣ್ಯಾರಾಧನೆಯಲ್ಲಿ ಸಹೃದಯಿಗಳಾದ ತಾವುಗಳು ಪಾಲ್ಗೊಂಡು
ಇವರ ಆತ್ಮಕ್ಕೆ ಶಾಂತಿ ಕೋರಬೇಕೆಂದು ಬಯಸುತ್ತೇವೆ.

**ದಿನಾಂಕ : 07-11-2024 ಗುರುವಾರ ಬೆಳಿಗ್ಗೆ 10:30ಕ್ಕೆ ದಾವಣಗೆರೆಯ ತರಳಬಾಳು ಬಡಾವಣೆಯಲ್ಲಿರುವ ನಮ್ಮ ಸ್ವಗೃಹದಲ್ಲಿ ಆಯೋಜಿಸಲಾಗಿದೆ.**

## ದೇಹದಾನಿ ಶ್ರೀಮತಿ ಸಾವಿತ್ರಮ್ಮ ನಿಧನ



ದಾವಣಗೆರೆ ಸಿಟಿ ವಿನೋಬನಗರ ವಾಸಿ
ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ, ನಿವೃತ್ತ ಶಿಕ್ಷಕರಾದ
ಸಿದ್ಧರಾಮಪ್ಪನವರ ಧರ್ಮಪತ್ನಿ

**ಶ್ರೀಮತಿ ಸಾವಿತ್ರಮ್ಮ**

ಇವರು, ದಿನಾಂಕ 06.11.2024ರ ಬುಧವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು SSIMS ಮತ್ತು RC ಆಸ್ಪತ್ರೆಗೆ ದೇಹದಾನವನ್ನು ಮಾಡಲಾಗಿದೆ.

**ದುಃಖತಪ್ತ ಕುಟುಂಬ ವರ್ಗ**

ಪತಿ : ಸಿದ್ದರಾಮಪ್ಪ

ಪುತ್ರರಾದ : ಶ್ರೀ ಮಧು ಪಿ.ಎಸ್. ಶ್ರೀಮತಿ ನೇತ್ರಾ
ಚಿ|| ಶಿವಕುಮಾರ್

ಮೊ. : 97415 59576, 97313 38780

## ಲೋಕಾ ಎದುರು ಸಿಎಂ ಹಾಜರಿ

**(1ನೇ ಪುಟದಿಂದ)** ಹಗರಣವನ್ನೂ ಸಿಬಿಐಗೆ ವಹಿಸಲಿಲ್ಲ, ಇದೀಗ ಅವರಿಗೆ ಅದರ ಮೇಲೆ ಭಾರೀ ನಂಬಿಕೆ ಬಂದಿದೆ.

ಲೋಕಾಯುಕ್ತ ಸಂಸ್ಥೆಯನ್ನು ಮರುಹುಟ್ಟು ಹಾಕಿದವರೇ ಬಿಜೆಪಿ, ಅದು ಸ್ವತಂತ್ರ ತನಿಖಾ ಸಂಸ್ಥೆ. ಇದರ ಮೇಲೆ ನಂಬಿಕೆ ಇಲ್ಲದೆ, ಅವರು ಪ್ರತ್ಯೇಕ ತನಿಖೆಗೆ ಒತ್ತಾಯಿಸುತ್ತಿದ್ದಾರೆ ಎಂದು ಟೀಕಿಸಿದರು.

ಅವರಿಗೆ ಕಾನೂನಿನ ಬಗ್ಗೆ ಗೌರವವಿಲ್ಲ, ರಾಜ್ಯಪಾಲರೂ ಲೋಕಾಯುಕ್ತದಿಂದಲೇ ತನಿಖೆ ಆಗಬೇಕೆಂದು ಸೂಚಿಸಿದ್ದರು, ಅದರಂತೆ ನಡೆಯುತ್ತಿದೆ. ನಮ್ಮ ಕುಟುಂಬಕ್ಕೆ ಮಂಜೂರು ಮಾಡಿದ್ದ 14 ನಿವೇಶನ ಕ್ರಮಬದ್ಧವಾಗಿತ್ತು, ಈ ಸಂಬಂಧ ನಾವು ಕಾನೂನು ರೀತ್ಯ ಹೋರಾಟ ಮುಂದುವರೆಸುತ್ತೇವೆ ಎಂದರು.

ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗೆ ನನ್ನ ರಾಜಕೀಯ ಜೀವನಕ್ಕೆ ಯಾವುದೇ ಕಪ್ಪುಮಸಿ ಇಲ್ಲ. ನನ್ನ ಮೇಲೆ ಮಾಡಲಾಗಿರುವ ಸುಳ್ಳು ಆರೋಪಕ್ಕೆ ನ್ಯಾಯಾಲಯದಲ್ಲಿ ತಕ್ಕ ಉತ್ತರ ನೀಡಲಿದ್ದೇವೆ ಎಂದರು.

# ನಂಬಿಕೆಯಿಲ್ಲದ ಸಂಬಂಧ ಜೀವನದಲ್ಲಿ ತೃಪ್ತಿ ಕೊಡದು



ಹೊಳಲ್ಕೆರೆ, ನ. 6 - ಆಧುನಿಕ ಕಾಲದಲ್ಲಿ ಮಾನವೀಯ ಸಂಬಂಧಗಳು ಕಣ್ಮರೆಯಾಗುತ್ತಿವೆ. ಸ್ವಾರ್ಥಯಿಲ್ಲದ ನಿಲುವು ಕಷ್ಟಪಡದೇ ಸಿಗುವ ಹಣ ನಂಬಿಕೆಯಿಲ್ಲದ ಸಂಬಂಧ ಎಂದೆಂದಿಗೂ ಜೀವನದಲ್ಲಿ ತೃಪ್ತಿಯನ್ನು ಕೊಡುವುದಿಲ್ಲವೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಮದ್ದೇರು ಗ್ರಾಮದಲ್ಲಿ ಪುರಾತನ ಈಶ್ವರ ದೇವಸ್ಥಾನ ಮತ್ತು ಬಸವಣ್ಣ ದೇವಸ್ಥಾನದ ಉದ್ಘಾಟನೆ ಅಂಗವಾಗಿ ನಿನ್ನೆ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಭಾರತ ಧರ್ಮ ಭೂಮಿಯಲ್ಲಿ ಹಲವಾರು ಧರ್ಮಗಳು ಮತ್ತು ಸಂಪ್ರದಾಯಗಳು ಬೆಳೆದುಕೊಂಡು ಬಂದಿವೆ. ಅವೆಲ್ಲ ಧರ್ಮಗಳ ಗುರಿ ಮಾನವ ಜೀವಾತ್ಮರನ್ನು ಉದ್ಧರಿಸುವ ಗುರಿ ಹೊಂದಿವೆ. ಮನುಷ್ಯ ಜೀವನದಲ್ಲಿ ಧರ್ಮ ದೇವರು ಮತ್ತು ಗುರುವನ್ನು ಎಂದಿಗೂ ಮರೆಯಬಾರದು. ಬದುಕಿಗೆ ಭಗವಂತನ ಕೊಡುಗೆ ಅಪಾರವಾದುದು. ನಂಬಿ ನಡೆದ ಭಕ್ತನಿಗೆ ಕಲ್ಲು ಕೂಡಾ ದೇವರಾಗಿ ಕಾಣುತ್ತದೆ. ನಂಬಿಗೆ ಇಲ್ಲದವರಿಗೆ ಸಾಕ್ಷಾತ್ ದೇವರು ಪ್ರತ್ಯಕ್ಷನಾದರೂ ದೇವರ ಮಹಿಮೆ ಅರಿಯಲಾರ. ಶ್ರೀ ಜಗದ್ಗುರು ರೇಣುಕಾಚಾರ್ಯರು ಬದುಕಿ ಬಾಳುವ ಜೀವಾತ್ಮರಿಗೆ ಜೀವನ ದರ್ಶನದ ಹತ್ತು ಅಮೂಲ್ಯವಾದ ಧರ್ಮ ಸೂತ್ರಗಳನ್ನು ಬೋಧಿಸಿದ್ದಾರೆ. ಅವರ ಆ ವಿಚಾರ ಧಾರೆಗಳು ಅಂದಿಗಷ್ಟೇ ಅಲ್ಲ ಇಂದಿಗೂ ಅನ್ವಯಿಸುತ್ತವೆ. ಮನಸ್ಸನ್ನು ನಿಯಂತ್ರಿಸುವ ಸಾಮರ್ಥ್ಯಯಿದ್ದರೆ ಬದುಕನ್ನು ಬದಲಾಯಿಸುವ ಸಾಮರ್ಥ್ಯ ನಮ್ಮಲ್ಲಿಯೇ ಇರುತ್ತದೆ. ಸಾಧನೆಯಿಂದ ಸಂತೋಷ ಸಿಗುತ್ತದೆ ಎಂದು ಹೇಳಲಾಗದು. ಆದರೆ ಸಂತೋಷವು ಸಾಧನೆಗೆ ದಾರಿಯಾಗುತ್ತದೆ ಎನ್ನುವುದು ಸತ್ಯ ಎಂದರು.

**ರಂಭಾಪುರಿ ಜಗದ್ಗುರುಗಳ ಅಭಿಮತ**

ಸಮಾರಂಭವನ್ನು ಉದ್ಘಾಟಿಸಿದ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಧರ್ಮದ ದಿಕ್ಸೂಚಿ ಬಾಳಿಗೆ ಬಲವನ್ನು ತಂದು ಕೊಡುತ್ತದೆ. ಜೀವನದ ಆದರ್ಶ ಮೌಲ್ಯಗಳನ್ನು ಪರಿಪಾಲಿಸುವುದರಿಂದ ಸುಖ ಶಾಂತಿ ಪ್ರಾಪ್ತಿಯಾಗುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ತೋರಿದ ದಾರಿ ಕೊಟ್ಟ ಸಂದೇಶ ನಮ್ಮೆಲ್ಲರ ಬಾಳ ಬದುಕಿಗೆ ಶ್ರೇಯಸ್ಸನ್ನು ಉಂಟು ಮಾಡುತ್ತದೆ ಎಂದರು.

ಬಿಳಕಿ ಹಿರೇಮಠದ ರಾಚೋಟೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಮನುಷ್ಯ ಜೀವನದಲ್ಲಿ ದೇವರು ಮತ್ತು ಮರಣ ಇದೆ ಎಂಬುದನ್ನು ಯಾರೂ ಮರೆಯಬಾರದು. ನಾವು ಮಾಡಿದ ಉಪಕಾರ ಪರರು ಮಾಡಿದ ಅಪಕಾರ ಮರೆತು ಬಾಳುವುದು ಮನಸ್ಸಿನ ನೆಮ್ಮದಿಗೆ ಕಾರಣವಾಗುತ್ತದೆ ಎಂದರು.

ಮಳಲಿ ಸಂಸ್ಥಾನಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವೀರಶೈವ ಧರ್ಮ ಉದಾತ್ತವಾದ ಮೌಲ್ಯಗಳನ್ನು ಪ್ರತಿಪಾದಿಸಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ತತ್ವ ಸಿದ್ಧಾಂತಗಳು ಜೀವನದ ಉನ್ನತಿಗೆ ಅಡಿಪಾಯವಾಗಿವೆ. ಸತ್ಯ, ಶುದ್ಧ, ಧರ್ಮ, ಮಾರ್ಗದಲ್ಲಿ ನಡೆದು ಜೀವನದಲ್ಲಿ ಶಾಂತಿ ನೆಮ್ಮದಿ ಕಾಣಬೇಕೆಂದರು.

ಮಾಜಿ ಶಾಸಕ ರಮೇಶ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಸಿದ್ದೇಶ್, ಮಾಜಿ ಜಿ.ಪಂ. ಸದಸ್ಯ ಶಿವಕುಮಾರ, ಬಿಜೆಪಿ ಧುರೀಣ ಹೊಸದುರ್ಗದ ಲಿಂಗಮೂರ್ತಿ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಪಡೆದರು. ದೇವಸ್ಥಾನ ಸಮಿತಿ ಮುಖ್ಯಸ್ಥ ರಾಜಣ್ಣ ಪ್ರಾಸ್ತಾವಿಕ ಮಾತನಾಡಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ, ಸ್ವಾಮಿ ಇವರಿಂದ ಸ್ವಾಗತ, ವಿಠಲಾಪುರ ಗಂಗಾಧರ ಹಿರೇಮಠ ಇವರಿಂದ ಪ್ರಾರ್ಥನೆ ಜರುಗಿತು. ಕುಮಾರಿ ಶ್ರೇಯ ಜಿ.ಎಂ. ಇವರಿಂದ ಭರತ ನಾಟ್ಯ ಜರುಗಿತು. ಶಿವಮೊಗ್ಗದ ಹೆಚ್. ಶಾಂತಾ ಆನಂದ ನಿರೂಪಿಸಿದರು.

ಸಮಾರಂಭಕ್ಕೂ ಮುನ್ನ ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರುಗಳವರ ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು.

## ನ್ಯಾಯಾಂಗ ಇಲಾಖೆಯ ನೌಕರರ ವಾರ್ಷಿಕ ಮಹಾಸಭೆಯಲ್ಲಿ ಮನೋಹರ್‌ಗೆ ಸನ್ಮಾನ



ದಾವಣಗೆರೆ, ನ.6- ಜಿಲ್ಲಾ ನ್ಯಾಯಾಂಗ ಇಲಾಖೆಯ ವಿವಿಧೋದ್ದೇಶ ಸಹಕಾರ ಸಂಘದ 14ನೇ ವಾರ್ಷಿಕ ಮಹಾಸಭೆಯಲ್ಲಿ ಹೈಕೋರ್ಟ್ ನ್ಯಾಯಾಂಗ ಸೊಸೈಟಿಯ ಚುನಾವಣೆಯಲ್ಲಿ ಅತ್ಯಧಿಕ ಮತವನ್ನು ಪಡೆದು, ರಾಜ್ಯದಲ್ಲಿಯೇ ಎರಡನೇ ಸ್ಥಾನದಲ್ಲಿ ದಾವಣಗೆರೆಯಿಂದ ಪ್ರಪ್ರಥಮ ಬಾರಿಗೆ ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾಗಿರುವ ಮನೋಹರ್ ಅವರಿಗೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ ಅವರು ಸನ್ಮಾನ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯದ ಆಡಳಿತ ಅಧಿಕಾರಿ ಶ್ರೀನಿವಾಸ್, ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್, ಸೊಸೈಟಿ ಅಧ್ಯಕ್ಷ ಶಂಕರ್ ಮೂರ್ತಿ, ಉಪಾಧ್ಯಕ್ಷ ಶೇಖರಪ್ಪ ಹಾಗೂ ಸದಸ್ಯರಾದ ಕರಿಸಿದ್ದಪ್ಪ, ಹನುಮಂತಮ್ಮ ಕೃಷ್ಣಮೂರ್ತಿ, ಜಗನ್ನಾಥ್, ಸುಭಾನ್, ಕೊಟ್ರೇಶ್ ಮತ್ತಿತರರಿದ್ದರು.

## ಕನ್ನಡ ಭವನಕ್ಕೆ ಅನುದಾನ ಕೋರಿ ಸಂಸದರಿಗೆ ಹೊನ್ನಾಳಿ ಕಸಾಪ ಮನವಿ



ಹೊನ್ನಾಳಿ, ನ.6- ಇಲ್ಲಿನ ಪುರಸಭಾ ವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ಕನ್ನಡ ಭವನಕ್ಕೆ 1 ಕೋಟಿ ರೂಗಳ ಅನುದಾನ ನೀಡುವಂತೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಲೋಕಸಭಾ ಸದಸ್ಯರಲ್ಲಿ ಮನವಿ ಮಾಡಿದೆ.

ಪಟ್ಟಣದಲ್ಲಿ ನಿರಂತರ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ನಡೆಯತ್ತಿರುತ್ತವೆ. ಆದರೆ ಪರಿಷತ್ತಿಗೆ ತನ್ನದೇ ಆದ ಸ್ವಂತ ಕಟ್ಟಡ ಇಲ್ಲದೇ ತೊಂದರೆ ಆಗಿದ್ದು, ಸಾಂಸ್ಕೃತಿಕ ಭವನ ನಿರ್ಮಿಸಲು ಹಿರೇಕಲ್ಮಠದ ಸ್ವಾಮೀಜಿಯವರು 30x 60 ನಿವೇಶನ ನೀಡಿ ಕಟ್ಟಡದ ತಳಹದಿ ಮುಗಿಯುವವರಿಗೂ ಸಹಕಾರ ನೀಡಿದ್ದಾರೆ.

ಹಣಕಾಸಿನ ತೊಂದರೆಯಿಂದಾಗಿ ಕಟ್ಟಡದ ಕೆಲಸ ನಿಂತು ಹೋಗಿರುವುದರಿಂದಾಗಿ ತಾವುಗಳು ಸಹಕಾರ ನೀಡಬೇಕು ಎಂದು ಕಸಾಪ ಅಧ್ಯಕ್ಷ ಜಿ.ಮುರಿಗೆಪ್ಪ ಗೌಡ ಮತ್ತು ಸಮಿತಿಯ ಪದಾಧಿಕಾರಿಗಳು ಸಂಸದರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

## ಯೋಗ ಸಾಧಕಿ ಎಸ್.ಪಿ. ಲಾವಣ್ಯ ಶ್ರೀಧರ್ ಅವರಿಗೆ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ



ದಾವಣಗೆರೆ, ನ. 6 - ನಗರದ ಎಸ್.ಎ.ಎಸ್. ಎಸ್ ಯೋಗ ಕೇಂದ್ರದ ಶ್ರೀಮತಿ ಎಸ್.ಪಿ. ಲಾವಣ್ಯ ಶ್ರೀಧರ್ ಅವರಿಗೆ ಜಿಲ್ಲಾ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ಲಭಿಸಿದೆ. ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಡಾ. ಜಿ.ಎಂ. ಗಂಗಾಧರಸ್ವಾಮಿ, ಎಸ್.ಪಿ. ಶ್ರೀಮತಿ ಉಮಾ ಪ್ರಶಾಂತ್, ಮೇಯರ್ ಚಮನ್ ಸಾಬ್, ಮಾಯಕೊಂಡ ಶಾಸಕ ಬಸವಂತಪ್ಪ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವೃತ್ತಿರಂಗ ಗೀತೆಗಳ ಕಲಿಕಾ ಕಾರ್ಯಾಗಾರ ಸಮಾರೋಪ

ವೃತ್ತಿ ರಂಗಭೂಮಿ ರಂಗಾಯಣದ ವತಿಯಿಂದ ನಗರದ ಜಯದೇವ ವೃತ್ತದ ಶಿವಯೋಗ ಮಂದಿರದಲ್ಲಿ ಇಂದು ಸಂಜೆ 6ಕ್ಕೆ ರಂಗ ಸಂಗೀತ : ವೃತ್ತಿರಂಗ ಗೀತೆಗಳ ಕಲಿಕಾ ಕಾರ್ಯಾಗಾರದ ಸಮಾರೋಪ ಮತ್ತು ಅಭಿನಯ ಸಂಗೀತ ಪ್ರದರ್ಶನ ನಡೆಯಲಿದೆ ಎಂದು ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ್ ಕಡಕೋಳ ತಿಳಿಸಿದ್ದಾರೆ. ತುಮಕೂರಿನ ಕೇಂದ್ರ ಸಂಗೀತ-ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ. ಲಕ್ಷ್ಮಣದಾಸ್ ಸಮಾರೋಪ ನುಡಿಗಳನ್ನಾಡಲಿದ್ದು, ಹಿರಿಯ ರಂಗಕರ್ಮಿ ಬಾ.ಮ. ಬಸವರಾಜಯ್ಯ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಇದೇ ವೇಳೆ ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತೆ ಸಾವಿತ್ರಿ ರಿತ್ತಿ, ಹಿರಿಯ ರಂಗ ನಿರ್ದೇಶಕ ಡಾ. ಪ್ರಕಾಶ್ ಗರುಡ ಮತ್ತು ಕಾರ್ಯಾಗಾರದ ನಿರ್ದೇಶಕ ರಾಘವ ಕಮ್ಮಾರ್ ಅವರುಗಳನ್ನು ಸನ್ಮಾನಿಸಲಾಗುವುದು. ವೃತ್ತಿರಂಗ ಗೀತೆಗಳ ಕಲಿಕಾ ಕಾರ್ಯಾಗಾರಕ್ಕೆ 39 ಜನ ಅರ್ಜಿ ಸಲ್ಲಿಸಿದ್ದು, ಅದರಲ್ಲಿ 18 ಜನರನ್ನು ಆಯ್ಕೆಗೊಳಿಸಿ ಅವರೆಲ್ಲರಿಗೂ ವೃತ್ತಿ ರಂಗ ಗೀತೆಗಳ ಕಲಿಕಾ ಕಾರ್ಯಾಗಾರ ಆಯೋಜಿಸಲಾಗಿದೆ.

# ಕಾನೂನು ಬಾಹಿರ ಬಡಾವಣೆ ನಕ್ಷೆ ರದ್ದು

**(1ನೇ ಪುಟದಿಂದ)** ಬಡಾವಣೆಗಳು ಕಂಡು ಬಂದಲ್ಲಿ ಇಲಾಖೆ ಗಮನಕ್ಕೆ ತರುವಂತೆ ನಾಗರಿಕರಿಗೆ ಸೂಚಿಸಿದರು.

ಹರಿಹರ ಮತ್ತು ದಾವಣಗೆರೆ ವ್ಯಾಪ್ತಿ ಯಲ್ಲಿ ಒಟ್ಟು 21 ಸಿಎ ನಿವೇಶನಗಳಿದ್ದು, ಹರಿಹರದಲ್ಲಿ 5, ದಾವಣಗೆರೆಯಲ್ಲಿ 15 ನಿವೇಶನಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ವಿವಿಧ ಸಂಘ-ಸಂಸ್ಥೆಗಳು ಅಗತ್ಯ ದಾಖಲೆಯೊಂದಿಗೆ ಅರ್ಜಿ ಸಲ್ಲಿಸಬಹುದು ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದಿಂದ ಮುಂದಿನ 15 ದಿನಗಳಲ್ಲಿ ದಾವಣಗೆರೆ ಯಲ್ಲಿ ವಿವಿಧ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು ಎಂದ ಅವರು, ಇಲ್ಲಿನ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಅಪಾರ್ಟ್‌ಮೆಂಟ್ ಹಾಗೂ ಮಾಲ್ ನಿರ್ಮಿಸಲು ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ತೀರ್ಮಾನಿಸಲಾಗಿದೆ ಎಂದರು.

ದಾವಣಗೆರೆ ಮತ್ತು ಹರಿಹರ ನಗರದಲ್ಲಿ ವಿವಿಧ ಸರ್ಕಲ್‌ಗಳ ಅಭಿವೃದ್ಧಿಗೆ 1226 ಕೋಟಿ ರೂ. ಹಣ ಬಿಡುಗಡೆಗಾಗಿ ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಇದಕ್ಕೆ ಸಮ್ಮತಿಸಿದ ಮುಖ್ಯಮಂತ್ರಿಗಳು ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡುವ ಭರವಸೆ ನೀಡಿದ್ದಾರೆ ಎಂದು ಹೇಳಿದರು.

50:50 ಅನುಪಾತದ ಆಧಾರದಲ್ಲಿ ರೈತರ ಜಮೀನುಗಳನ್ನು ಖರೀದಿಸಿ ಬಡಾವಣೆ ನಿರ್ಮಿಸಲು ಯೋಜನೆ ರೂಪಿಸಿಕೊಂಡಿದ್ದು, ಹರಿಹರ, ಬಾತಿ ಮತ್ತು ಬೂದಾಳ್ ರಸ್ತೆ ಸೇರಿದಂತೆ ಕೆಲವೆಡೆ ರೈತರು ಜಮೀನುಗಳನ್ನು ನೀಡಲು ಮುಂದೆ ಬರಬೇಕು ಎಂದು ಮನವಿ ಮಾಡಿದರು.

ರೈತರಿಗೆ ನಷ್ಟವಾಗುವುದಿಲ್ಲ. ರೈತರು ಜಮೀನು ನೀಡಲು ಮುಂದೆ ಬಂದಾಗ ನಿವೇಶನ ಹಂಚಿಕೆಗೆ ಅನುಕೂಲವಾಗ ಲಿದೆ ಎಂದು ಹೇಳಿದರು.

ಈ ವೇಳೆ ದೂಡಾ ಆಯುಕ್ತ ಹುಲ್ಲುಮನಿ ತಿಮ್ಮಣ್ಣ, ಸದಸ್ಯರಾದ ವಾಣಿ ಬಕ್ಕೇಶ್, ಅಬ್ದುಲ್ ಜಬ್ಬಾರ್ ಖಾನ್, ಇಂಜಿನಿಯರ್ ರವಿ, ದೇವರಾಜ್, ಪರಮೇಶ್ವರ್ ಸೇರಿದಂತೆ ಸಿಬ್ಬಂದಿಗಳು ಸುದ್ದಿಗೋಷ್ಠಿಯಲ್ಲಿದ್ದರು.

### 11ಕ್ಕೆ ಹರಿಹರದಲ್ಲಿ ದೂಡಾ ಕಚೇರಿ ಉದ್ಘಾಟನೆ

**ತಾಲ್ಲೂಕಿನ ಹರಿಹರದಲ್ಲಿ ಜನರ ಅಲೆದಾಟ ತಪ್ಪಿಸಲು ಅಲ್ಲಿನ ನಗರಸಭೆಯಲ್ಲೇ ನ.11ರ ಸೋಮವಾರ ಬೆಳಗ್ಗೆ 11ಕ್ಕೆ ನೂತನ ದೂಡಾ ಕಚೇರಿ ಉದ್ಘಾಟಿಸಲಾಗುವುದು ಎಂದು ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು. ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕಚೇರಿ ಉದ್ಘಾಟಿಸಲಿದ್ದು, ಸ್ಥಳೀಯ ಶಾಸಕ ಬಿ.ಪಿ. ಹರೀಶ್, ನಗರ ಸಭೆ ಆಯುಕ್ತರು ಹಾಗೂ ಅಧ್ಯಕ್ಷರು ಉಪಸ್ಥಿತರಿರುವರು ಎಂದು ಹೇಳಿದರು.**

**ರಿಂಗ್ ರಸ್ತೆಯ ಅಭಿವೃದ್ಧಿಗೆ ದೂಡಾದ ವತಿಯಿಂದ 5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು ಮುಂದಿನ ವಾರ ಪ್ರಾರಂಭವಾಗಲಿವೆ.**

**-ಹುಲ್ಲುಮನಿ ತಿಮ್ಮಣ್ಣ., ದೂಡಾ ಆಯುಕ್ತ**

## ವಿದ್ಯಾಲಕ್ಷ್ಮಿ ಯೋಜನೆಗೆ ಸಮ್ಮತಿ

**(1ನೇ ಪುಟದಿಂದ)** ವರ್ಗವಾರು ಮತ್ತು ರಾಜ್ಯವಾರು ಉನ್ನತ 100 ಸ್ಥಾನ ಪಡೆದಿರುವ ಶಿಕ್ಷಣ ಸಂಸ್ಥೆಗಳು ಹಾಗೂ ಎಲ್ಲಾ ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವವರಿಗೆ ಈ ನೆರವು ಸಿಗಲಿದೆ. ಈ ವರ್ಷ 860 ಉನ್ನತ ಶಿಕ್ಷಣ ಸಂಸ್ಥೆಗಳ 22 ಲಕ್ಷ ವಿದ್ಯಾರ್ಥಿಗಳು ಪಿಎಂ – ವಿದ್ಯಾಲಕ್ಷ್ಮಿ ಗೆ ಅರ್ಹರಾಗಿದ್ದಾರೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ರಾಣೇಬೆನ್ನೂರಿನಲ್ಲಿ ಇಂದು ನೀರು ಪೂರೈಕೆಯಲ್ಲಿ ವ್ಯತ್ಯಯ

ನೀರು ಸರಬರಾಜು ಮುಖ್ಯ ಕೊಳವೆ ಮಾರ್ಗದ ದುರಸ್ತಿ ಕಾಮಗಾರಿ ಪ್ರಯುಕ್ತ ಇಂದು ನಗರಕ್ಕೆ 24/7 ನಿರಂತರ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

## ಶಿಕ್ಷಕ ದಂಡಿ ತಿಪ್ಪೇಸ್ವಾಮಿಗೆ ದ್ವಿತೀಯ ಸ್ಥಾನ




ಮಲೇಬೆನ್ನೂರು, ನ.6- ಇಲ್ಲಿನ ಎಸ್.ಬಿ.ಕೆ.ಎಂ. ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಇವರು ಹರಿಹರದಲ್ಲಿ ಬುಧವಾರ ನಡೆದ ಶಿಕ್ಷಕರ ಸಹ ಪಠ್ಯ ಚಟುವಟಿಕೆ ಕಾರ್ಯಕ್ರಮದಲ್ಲಿ ರಸಪ್ರಶ್ನೆ ವಿಭಾಗದಲ್ಲಿ ಭಾಗವಹಿಸಿ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದರು. ಶಿಕ್ಷಕರಿಗೆ ಇದು ಸ್ಫೂರ್ತಿದಾಯಕವಾಗಿದ್ದು, ಎಲ್ಲಾ ಶಿಕ್ಷಕರು ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವಂತಾಗಲಿ ಎಂದು ನಿವೃತ್ತಿಯ ಅಂಚಿನಲ್ಲಿರುವ ದಂಡಿ ತಿಪ್ಪೇಸ್ವಾಮಿ ಮನವಿ ಮಾಡಿದ್ದಾರೆ.

## ಶಿಗ್ಗಾಂವಿ ಉಪ ಚುನಾವಣೆ : ಕಾಂಗ್ರೆಸ್ ಅಭ್ಯರ್ಥಿ ಪರ ಶಾಸಕ ಬಸವಂತಪ್ಪ ಪ್ರಚಾರ



ದಾವಣಗೆರೆ, ನ.6- ಶಿಗ್ಗಾಂವಿ - ಸವಣೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸಿರ್ ಅಹಮದ್ ಖಾನ್ ಪಠಾಣ್ ಪರವಾಗಿ ಕ್ಷೇತ್ರದ ವ್ಯಾಪ್ತಿಯ ಬಂಕಾಪುರ ಹಾಗೂ ಹುಣಸಿಕಟ್ಟಿ ಹರಿಜನ ಕೇರಿಯಲ್ಲಿ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಮತ ಯಾಚಿಸಿದರು.

## ಶ್ರೀ ಕಾಸಲ್ ಜಿ. ರಾಧಾಕೃಷ್ಣ ಗುಪ್ತ ನಿಧನ



ದಾವಣಗೆರೆ ನಗರದ ಚೌಕಿಪೇಟೆಯಲ್ಲಿರುವ
**ಕಾಸಲ್ ಗೋವಿಂದಪ್ಪ ಅಂಡ್ ಕೋ ಅಂಗಡಿಯ ಮಾಲೀಕರಾದ**
**ಶ್ರೀ ಕಾಸಲ್ ಜಿ. ರಾಧಾಕೃಷ್ಣ ಗುಪ್ತ**

(90 ವರ್ಷ) ಇವರು ಬುಧವಾರ ಮಧ್ಯಾಹ್ನ 01.55ಕ್ಕೆ ದೈವಾಧೀನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ. **ಇವರ ಪಾರ್ಥಿವ ಶರೀರವನ್ನು ದಿನಾಂಕ : 7.11.2024ರ ಗುರುವಾರ ಮಧ್ಯಾಹ್ನ 12 ಗಂಟೆಯವರೆಗೆ ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ 6ನೇ ಮುಖ್ಯರಸ್ತೆ, ಸದ್ಯೋಜಾತ ಸ್ವಾಮಿ ಮಠದ ಪಕ್ಕದಲ್ಲೇ ಇರುವ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ಅಂದೇ ಮೃತರ ಅಂತ್ಯಕ್ರಿಯೆಯನ್ನು ಪಿ.ಬಿ ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ಮಧ್ಯಾಹ್ನ 01 ಗಂಟೆಗೆ ನೆರವೇರಿಸಲಾಗುವುದು.**

**ಇಂತಿ ದುಃಖತಪ್ತ ಕುಟುಂಬ ವರ್ಗ**

# ಅಮೆರಿಕದಲ್ಲಿ ಮತ್ತೆ ಟ್ರಂಪ್ ಸರ್ಕಾರ

**(1ನೇ ಪುಟದಿಂದ)** ಶಕ್ತಿಶಾಲಿಯಾಗಿದೆ ಎಂದಿದ್ದಾರೆ. ಚುನಾವಣಾ ಅಭಿಯಾನದ ವೇಳೆ ಟ್ರಂಪ್ ಹತ್ಯೆಗಾಗಿ ಎರಡು ಪ್ರಯತ್ನಗಳು ನಡೆದಿದ್ದವು. ಇದನ್ನು ಪ್ರಸ್ತಾಪಿಸಿದ ಟ್ರಂಪ್, ದೇವರು ಯಾವುದೋ ಒಂದು ಕಾರಣಕ್ಕಾಗಿ ನನ್ನನ್ನು ಬದುಕಿಸಿದ್ದಾನೆ ಎಂದು ಹಲವರು ತಿಳಿಸಿದ್ದಾರೆ ಎಂದರು.

ಫ್ಲೋರಿಡಾದ ಕಡಲ ತೀರದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತಾಡಿದ ಅವರು, ಅಮೆರಿಕದ ಸ್ವರ್ಣ ಯುಗ ಮತ್ತೆ ಮರಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಗೆಲುವು ನಿಶ್ಚಿತವಾಗುತ್ತಿದ್ದಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ ವಿಶ್ವದ ಹಲವು ಹಿರಿಯ ನಾಯಕರು ಟ್ರಂಪ್‌ಗೆ ಅಭಿನಂದಿಸಿದ್ದಾರೆ.

ನಾಲ್ಕು ವರ್ಷದ ಅಂತರದ ನಂತರ ಅಧ್ಯಕ್ಷ ಸ್ಥಾನಕ್ಕೆ ಮರಳಿರುವ ಎರಡನೇ ವ್ಯಕ್ತಿ ಟ್ರಂಪ್ ಆಗಿದ್ದಾರೆ. ಈ ಹಿಂದೆ ಗ್ರೋವರ್ ಕ್ಲೀವ್‌ಲ್ಯಾಂಡ್ ಅವರು 1893ರಲ್ಲಿ ನಾಲ್ಕು ವರ್ಷಗಳ ಅಂತರದಲ್ಲಿ ಅಧ್ಯಕ್ಷರಾಗಿದ್ದರು.

2020ರಲ್ಲಿ ಜೋ ಬಿಡೆನ್ ವಿರುದ್ಧ ಟ್ರಂಪ್ ಸೋತ ನಂತರ, ಅವರ ರಾಜಕೀಯ ಭವಿಷ್ಯ ಅಂತ್ಯವಾಯಿತು ಎಂಬ ಭಾವನೆಗಳು ವ್ಯಕ್ತವಾಗಿದ್ದವು. ಈ ಚುನಾವಣಾ ಫಲಿತಾಂಶವನ್ನು ಪ್ರಶ್ನಿಸಿದ್ದ ಟ್ರಂಪ್, ಯು.ಎಸ್. ಕ್ಯಾಪಿಟಲ್‌ಗೆ ಮುತ್ತಿಗೆ ಹಾಕುವ ಅಭಿಯಾನಕ್ಕೆ ಪರೋಕ್ಷವಾಗಿ ಕರೆ ನೀಡಿದ್ದರು. ಈ ಸಂದರ್ಭದಲ್ಲಿ ನಡೆದ ಘರ್ಷಣೆಗಳು ಅಮೆರಿಕದ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಕಪ್ಪು ಚುಕ್ಕೆ ಎಂದು ಪರಿಗಣಿಸಲಾಗಿತ್ತು. ಈ ಚುನಾವಣಾ ಫಲಿತಾಂಶ ಪ್ರಶ್ನಿಸಿ ಟ್ರಂಪ್ ಕೋರ್ಟ್ ಮೊರೆ ಹೋಗಿದ್ದರು. ಆದರೆ, ನ್ಯಾಯಾಲಯ ಅವರ ಅರ್ಜಿ ತಳ್ಳಿ ಹಾಕಿತ್ತು.

ಪೆನ್ಸಿಲ್ವೇನಿಯ, ಜಾರ್ಜಿಯ, ಉತ್ತರ ಕೊರೊಲಿನ ಹಾಗೂ ವಿಸ್ಕೊಸಿನ್ ರಾಜ್ಯಗಳು ಡೋಲಾಯಮಾನವಾಗಿದ್ದವು. ಇಲ್ಲಿ ಟ್ರಂಪ್ ಮುನ್ನಡೆ ಪಡೆದಿದ್ದು ಗೆಲುವಿಗೆ ಕಾರಣವಾಗಿದೆ. ಅರಿಜೋನಾ, ಮಿಚಿಗನ್ ಹಾಗೂ ನೆವಾಡಾಗಳಲ್ಲಿ ಮತಗಳ ಎಣಿಕೆ ಮುಂದುವರೆದಿದೆ.

ಅಧ್ಯಕ್ಷ ಜೋ ಬಿಡೆನ್ ಅವರು ಮತ್ತೊಂದು ಅವಧಿಗೆ ಸ್ಪರ್ಧಿಸಿದ್ದರು. ಆದರೆ, ಜುಲೈನಲ್ಲಿ ಅವರು ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ನಂತರ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಅಭ್ಯರ್ಥಿಯಾಗಿದ್ದರು.

### ಷೇರುಪೇಟೆಯಲ್ಲಿ ಉತ್ಸಾಹ

**(1ನೇ ಪುಟದಿಂದ)** ಹಾಗೂ ಸರ್ಕಾರಿ ವೆಚ್ಚ ಹೆಚ್ಚಳದ ಬಾಗಿಲು ತೆರೆದಿದೆ ಎಂದು ಜಿಯೋಜಿತ್ ಫೈನಾನ್ಷಿಯಲ್ ಸರ್ವಿಸಸ್ ಮುಖ್ಯ ಸಂಶೋಧಕ ವಿನೋದ್ ನಾಯರ್ ಹೇಳಿದ್ದಾರೆ.

## ಕೈಗೆ ಸಿಕ್ಕ 1.20 ಲಕ್ಷ ಹಣ ಹಿಂದಿರುಗಿಸಿದ ಶಾಸಕ ಬಸವಂತಪ್ಪ



ದಾವಣಗೆರೆ, ನ.5- ಮಗನ ಕಾಲೇಜು ಶುಲ್ಕ ಕಟ್ಟಲು ಬಂದು ಜ್ಯೂಸ್ ಅಂಗಡಿಯಲ್ಲಿ ಬಿಟ್ಟು ಹೋಗಿದ್ದ ಹಣ ಶಾಸಕ ಕೆ.ಎಸ್. ಬಸವಂತಪ್ಪ ಅವರ ಕೈಗೆ ಸಿಕ್ಕಿದ್ದು, ಸಿಕ್ಕಿದ್ದ ಹಣವನ್ನು ಕಳೆದುಕೊಂಡ ಮಾಲೀಕನಿಗೆ ಹಿಂದಿರುಗಿಸಿ ಮಾನವೀಯತೆ ಮೆರೆದಿದ್ದಾರೆ.

ರಾಣೆಬೇನ್ನೂರು ಮೂಲದ ಕಿರಾಣಿ ಅಂಗಡಿ ಮಾಲೀಕ ವೆಂಕಟೇಶ್ ಎಂಬುವವರು ಮಗನನ್ನು ಶಿರಮಗೊಂಡನಹಳ್ಳಿ ಬಳಿ ಇರುವ ಅನ್‌ಮೋಲ್ ಕಾಲೇಜಿಗೆ ಸೇರಿಸಿದ್ದು, ಕಾಲೇಜು ಶುಲ್ಕ ಕಟ್ಟಲು ಕಾರಿನಲ್ಲಿ ನಗರಕ್ಕೆ ಬಂದಿದ್ದಾರೆ. ರಾಂ ಅಂಡ್ ಕೋ ವೃತ್ತದಲ್ಲಿರುವ ರಸವಂತಿ ಜ್ಯೂಸ್ ಸೆಂಟರ್‌ನಲ್ಲಿ ಜ್ಯೂಸ್ ಕುಡಿದು ಹಣವಿದ್ದ ಬ್ಯಾಗನ್ನು ಅಲ್ಲಿಯೇ ಬಿಟ್ಟು ಹೋಗಿದ್ದರು.

## ಕುಣೆಬೆಳಕೆರೆ ಗ್ರಾಮದ ಹಂಚಿನಮನೆ ಶಾಂತಪ್ಪ ನಿಧನ



ಹರಿಹರ ತಾ. ಕುಣೆಬೆಳಕೆರೆ ಗ್ರಾಮದ
**ಹಂಚಿನಮನೆ ಶಾಂತಪ್ಪ (70 ವರ್ಷ)**
ಅವರು ದಿನಾಂಕ: 06-11-2024 ರ ಬುಧವಾರ
ಮಧ್ಯಾಹ್ನ 3:40ಕ್ಕೆ ನಿಧನರಾದರು.
ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು,
ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ
ಮೃತರ ಅಂತ್ಯಕ್ರಿಯೆಯು ದಿನಾಂಕ: 07-11-2024ರ
ಗುರುವಾರ ಮಧ್ಯಾಹ್ನ 12:00 ಗಂಟೆಗೆ
ಕುಣೆಬೆಳಕೆರೆ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತರು :
ಪತ್ನಿ: **ಶ್ರೀಮತಿ ರೇಣುಕಮ್ಮ ಶಾಂತಪ್ಪ**, ಗ್ರಾ.ಪಂ. ಮಾಜಿ ಅಧ್ಯಕ್ಷರು, ಕುಣೆಬೆಳಕೆರೆ.
ಪುತ್ರ : **ಶ್ರೀಮತಿ ಶಶಿಕಲಾ ಶ್ರೀ ಹೆಚ್.ಎಸ್. ಸಿದ್ದೇಶ್**
ಪುತ್ರಿಯರಾದ: **ಶ್ರೀಮತಿ ವನಿತಾ ಎಂ. ವಿಲಾಸಗೌಡ** ನಿಟ್ಟೂರು, ಸದಸ್ಯರು, ಗ್ರಾ.ಪಂ., ಕುಂಬಳೂರು
**ಶ್ರೀಮತಿ ಸುನೀತಾ ಹೆಚ್.ಎಂ. ನಾಗರಾಜ್,** ಕುಂಬಳೂರು
**ಮೊಮ್ಮಕ್ಕಳು ಮತ್ತು ಕುಣೆಬೆಳಕೆರೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

## ರಾತ್ರಿ ಕಟ್ಟಡ ಧ್ವಂಸ ಸಲ್ಲದು

**(1ನೇ ಪುಟದಿಂದ)** ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ಸರ್ಕಾರ ಇಲ್ಲವೇ ಸರ್ಕಾರಿ ಸಂಸ್ಥೆಗಳು ರಸ್ತೆ ಅಗಲೀಕರಣ ಯೋಜನೆ ಕೈಗೊಳ್ಳುವಾಗ ಪಾಲಿಸಬೇಕಾದ ಕ್ರಮಗಳ ಬಗ್ಗೆ ಸುಪ್ರೀಂ ಕೋರ್ಟ್ ವಿವರವಾದ ನಿರ್ದೇಶನಗಳನ್ನು ನೀಡಿದೆ.

ರಾಜ್ಯಗಳು ಸರ್ವೆ ನಡೆಸುವ ಮೂಲಕ ಈಗಿರುವ ರಸ್ತೆಗಳ ಅಳತೆ ಹಾಗೂ ನಕ್ಷೆಗಳ ವಿವರ ಪಡೆಯಬೇಕು. ಆ ಮೂಲಕ ರಸ್ತೆಯಲ್ಲಿ ಒತ್ತುವರಿ ಆಗಿದೆಯೇ ಎಂಬುದನ್ನು ನಿರ್ಧರಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಒತ್ತುವರಿ ಕಂಡು ಬಂದಲ್ಲಿ, ಆ ಭಾಗವನ್ನು ತೆರವುಗೊಳಿಸಲು ನೋಟಿಸ್ ನೀಡಬೇಕು. ನೋಟಿಸ್ ಸತ್ಯಾಸತ್ಯತೆಯ ಬಗ್ಗೆ ಆಕ್ಷೇಪಗಳು ಕೇಳಿ ಬಂದರೆ, ನೈಸರ್ಗಿಕ ನ್ಯಾಯವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಗಳು ಆದೇಶಗಳನ್ನು ಹೊರಡಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ವ್ಯಕ್ತಿಯು ಸಲ್ಲಿಸಿದ ಆಕ್ಷೇಪಣೆಗಳನ್ನು ತಳ್ಳಿ ಹಾಕಿದರೆ, ನಂತರದಲ್ಲಿ ಒತ್ತುವರಿ ತೆರವಿಗಾಗಿ ಸೂಕ್ತ ನೋಟಿಸ್ ನೀಡಬೇಕು. ಇಷ್ಟಾದರೂ ವ್ಯಕ್ತಿ ಒತ್ತುವರಿ ತೆರವುಗೊಳಿಸದೇ ಇದ್ದರೆ ಹಾಗೂ ನ್ಯಾಯಾಲಯ ಮತ್ತಿತರೆ ಸಂಸ್ಥೆಗಳಿಂದ ತಡೆಯಾಜ್ಞೆ ಇಲ್ಲದೇ ಇದ್ದರೆ, ಸೂಕ್ತ ಪ್ರಾಧಿಕಾರವು ಒತ್ತುವರಿ ತೆರವಿಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶನಗಳಲ್ಲಿ ತಿಳಿಸಲಾಗಿದೆ.

## ವಕ್ಫ್ ಮಂಡಳಿ ರದ್ದಾಗಲಿ: ಪೇಜಾವರ ಶ್ರೀ

ದಾವಣಗೆರೆ, ನ.6- ಎಲ್ಲರೂ ನೆಮ್ಮದಿಯಾಗಿ ಬದುಕುವಂತೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ವಕ್ಫ್ ಮಂಡಳಿ ರದ್ದು ಮಾಡುವ ಬಗ್ಗೆ ಸರ್ಕಾರ ಕೂಲಂಕುಶವಾಗಿ ಪರಿಶೀಲಿಸಿ ಕ್ರಮ ವಹಿಸಲಿ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಮಂಗಳವಾರ ನಗರದ ತೊಗಟವೀರ ಕಲ್ಯಾಣ ಮಂಟಪದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಕ್ಫ್ ಮಂಡಳಿ ಆಸ್ತಿಯ ಕುರಿತು ರೈತರಿಗೆ ನೀಡಿರುವ ನೋಟಿಸ್ ವಾಪಸ್ ಪಡೆದರೆ ಸಾಲದು. ಬದಲಿಗೆ, ಪಹಣಿಯಲ್ಲಿ ಹೆಸರು ಬದಲಾವಣೆ ಮಾಡಬೇಕು. ರೈತರಲ್ಲಿ ಭಯ ಸೃಷ್ಟಿಸುವ ಕೆಲಸ ಆಗಬಾರದು.

ಹಗಲು ದರೋಡೆ ಆಗಬಾರದು. ಎಲ್ಲರೂ ನೆಮ್ಮದಿಯಾಗಿ ಬದುಕುವಂತೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ವಕ್ಫ್ ಮಂಡಳಿ ರದ್ದು ಮಾಡುವ ಬಗ್ಗೆ ಸರ್ಕಾರ ಕೂಲಂಕುಶವಾಗಿ ಪರಿಶೀಲಿಸಿ ಕ್ರಮ ವಹಿಸಲಿ ಎಂದು ಅವರು ಆಗ್ರಹಿಸಿದರು.

ಅವರವರ ಆಸ್ತಿಯು ಅವರಿಗೆ ಸೇರಬೇಕು. ತಲೆತಲಾಂತರದಿಂದ ಒಬ್ಬರ ಹೆಸರಿನಲ್ಲಿ ಇದ್ದ ಆಸ್ತಿಯು ಇದ್ದಕ್ಕಿದ್ದಂತೆ ಬೇರೊಬ್ಬರಿಗೆ ಸೇರಿದ್ದು ಎನ್ನುವುದು ಸರಿಯಲ್ಲ. ಇಂತಹದ್ದೊಂದು ಕಾನೂನು ಯಾವಾಗ ಬಂತು? ಹೇಗೆ ಬಂತು? ಎಂಬ ಬಗ್ಗೆ ತನಿಖೆ ನಡೆಯಲಿ ಎಂದರು.

'ಧಾರ್ಮಿಕ ದತ್ತಿ ಇಲಾಖೆಯು ದೇವಾಲಯಗಳ ಆಸ್ತಿ ರಕ್ಷಣೆಗೆ ಮುಂದಾಗಬೇಕು. ದೇವರ ಹೆಸರಿನಲ್ಲಿರುವ ಆಸ್ತಿಗಳನ್ನು ನೋಂದಣಿ ಮಾಡುವ ಕೆಲಸವನ್ನು ಅಧಿಕಾರಿಗಳು ಅಗತ್ಯವಾಗಿ ಮಾಡಬೇಕು ಎಂದರು.

## ಸಂಕ್ಷಿಪ್ತ ಸುದ್ದಿ

**ಕಾಳಿ ಪೂಜೆ ಪೆಂಡಾಲ್ ಧ್ವಂಸಗೊಳಿಸುವ ವಿಡಿಯೋ ಪ್ರಸಾರ ಮಾಡಿದ ಪತ್ರಕರ್ತರ ಬಂಧನ**

ಕೊಲ್ಕೊತಾ : ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಕಾಳಿ ಪೂಜೆ ಪೆಂಡಾಲ್ ಧ್ವಂಸಗೊಳಿಸುವ ವಿಡಿಯೋ ಪ್ರಸಾರ ಮಾಡಿದ ಇಬ್ಬರು ಸ್ಥಳೀಯ ನ್ಯೂಸ್ ಪೋರ್ಟಲ್ ಪತ್ರಕರ್ತರನ್ನು ಪಶ್ಚಿಮ ಬಂಗಾಳದ ಪೊಲೀಸರು ಬಂಧಿಸಿದ್ದಾರೆ. ಈ ಪತ್ರಕರ್ತರು ವಿಡಿಯೋ ಪ್ರಸಾರ ಮಾಡಿದ್ದು ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದಿದೆ, ಈ ಬಗ್ಗೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

**ಜಮ್ಮು ಮತ್ತು ಕಾಶ್ಮೀರದ ರಾಜ್ಯ ಸ್ಥಾನಮಾನಕ್ಕಾಗಿ ವಿಧಾನಸಭೆಯಲ್ಲಿ ನಿರ್ಣಯ**

ಶ್ರೀನಗರ : ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡುವ ಬಗ್ಗೆ ಕೇಂದ್ರ ಸರ್ಕಾರವು ಚುನಾಯಿತ ಪ್ರತಿನಿಧಿಗಳ ಜೊತೆ ಚರ್ಚೆ ನಡೆಸಬೇಕು ಎಂಬ ನಿರ್ಣಯವನ್ನು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಅಂಗೀಕರಿಸಲಾಗಿದೆ. ಈ ನಿರ್ಣಯವನ್ನು ವಿರೋಧಿಸಿದ ಬಿಜೆಪಿ ಶಾಸಕರು, ನಿರ್ಣಯದ ಕಡತಗಳನ್ನು ಹರಿದು ತೂರಿದ್ದಾರೆ.

**ತೆಲಂಗಾಣದಲ್ಲಿ ಜಾತಿ ಗಣತಿಗೆ ಚಾಲನೆ**

ಹೈದರಾಬಾದ್ : ತೆಲಂಗಾಣ ಸರ್ಕಾರವು ಸಾಮಾಜಿಕ, ಆರ್ಥಿಕ, ಉದ್ಯೋಗ,ರಾಜಕೀಯ ಹಾಗೂ ಜಾತಿ ಗಣತಿಗೆ ಚಾಲನೆ ನೀಡಿದೆ. ತೆಲಂಗಾಣ ಚುನಾವಣೆಯಲ್ಲಿ ಗೆಲುವು ಸಾಧಿಸಿದರೆ ಜಾತಿ ಗಣತಿ ನಡೆಸಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದ್ದರು.

**21 ಸಿ.ಬಿ.ಎಸ್.ಇ. ಶಾಲೆಗಳ ಮಾನ್ಯತೆ ರದ್ದು**

ನವದೆಹಲಿ : ಡಮ್ಮಿ ಶಾಲೆಗಳ ವಿರುದ್ಧ ಕ್ರಮಕ್ಕೆ ಮುಂದಾಗಿರುವ ಸಿ.ಬಿ.ಎಸ್.ಇ., 21 ಶಾಲೆಗಳ ಮಾನ್ಯತೆ ವಾಪಸ್ ಪಡೆದಿದೆ ಹಾಗೂ ಆರು ಶಾಲೆಗಳ ಮಾನ್ಯತೆ ಮಟ್ಟವನ್ನು ಇಳಿಕೆ ಮಾಡಿದೆ. ರಾಜಸ್ಥಾನ ಹಾಗೂ ದೆಹಲಿಯಲ್ಲಿರುವ ಶಾಲೆಗಳಿಗೆ ಹಠಾತ್ ಭೇಟಿ ನೀಡಿ ಪರಿಶೀಲಿಸಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಎಫ್.ಸಿ.ಐ.ಗೆ 10,700 ಕೋಟಿ ರೂ. ಆವರ್ತ ನಿಧಿ**

ನವದೆಹಲಿ : ಸರ್ಕಾರಿ ಸ್ವಾಮ್ಯದ ಎಫ್.ಸಿ.ಐ.ಗೆ 10,700 ಕೋಟಿ ರೂ.ಗಳ ಆವರ್ತ ನಿಧಿ ನೀಡಲು ಕೇಂದ್ರ ಸರ್ಕಾರ ಸಮ್ಮತಿಸಿದೆ. ಆಹಾರ ಧಾನ್ಯ ಖರೀದಿಸುವ ಹಾಗೂ ವಿತರಿಸುವ ಕಾರ್ಯವನ್ನು ಎಫ್.ಸಿ.ಐ. ನಿರ್ವಹಿಸುತ್ತದೆ.

**ಐ.ಎ.ಡಿ.ಐ.ಎ. ಬಣದ ವಿರುದ್ಧ ಸಿಪಿಐ (ಎಂ) ದೂರು**

ರಾಂಚಿ : ಜಾರ್ಖಂಡ್ ವಿಧಾನಸಭಾ ಚುನಾವಣೆಯಲ್ಲಿ ತನ್ನ ಚಿಹ್ನೆಯನ್ನು ಐ.ಎನ್.ಡಿ.ಐ.ಎ. ಮೈತ್ರಿಕೂಟದ ಸದಸ್ಯರು ಬಳಸಿಕೊಳ್ಳುತ್ತಿದ್ದು, ಇದನ್ನು ತಡೆಯಬೇಕು ಎಂದು ಚುನಾವಣಾ ಆಯೋಗಕ್ಕೆ ಸಿಪಿಐ (ಎಂ) ದೂರು ನೀಡಿದೆ. ತಾನು ಐ.ಎನ್.ಡಿ.ಐ.ಎ. ಬಣದ ಸದಸ್ಯನಾಗಿರದೇ, ಸ್ವತಂತ್ರವಾಗಿ ಸ್ಪರ್ಧಿಸುತ್ತಿದ್ದರೂ ತನ್ನ ಚಿಹ್ನೆ ಬಳಸಿಕೊಳ್ಳಲಾಗುತ್ತಿದೆ ಎಂದು ದೂರಿನಲ್ಲಿ ಹೇಳಲಾಗಿದೆ.

**ನಟ ಮಿಥುನ್ ಚಕ್ರವರ್ತಿ ವಿರುದ್ಧ ಎಫ್.ಐ.ಆರ್.**

ಕೊಲ್ಕೊತಾ : ನಟ ಹಾಗೂ ಬಿಜೆಪಿ ನಾಯಕ ಮಿಥುನ್ ಚಕ್ರವರ್ತಿ ಅವರು ಕಳೆದ ತಿಂಗಳು ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಪ್ರಚೋದನಕಾರಿಯಾಗಿ ಭಾಷಣ ಮಾಡಿದ್ದಾರೆ ಎಂದು ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ. ಈ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರೂ ಪಾಲ್ಗೊಂಡಿದ್ದರು.

# ವೃತ್ತಿ ನಿಷ್ಠೆ, ಪ್ರಾಮಾಣಿಕ ಕರ್ತವ್ಯ ಅಗತ್ಯ

## ಇದೇ ದೇಶಕ್ಕೆ ನೀಡುವ ಕೊಡುಗೆ: ಪ್ರೊ.ಬಿ.ಡಿ. ಕುಂಬಾರ ಅಭಿಮತ



ದಾವಣಗೆರೆ, ನ.6- ವೃತ್ತಿ ನಿಷ್ಠೆ, ಪ್ರಾಮಾಣಿಕ ಕರ್ತವ್ಯ ಮತ್ತು ಜನಪರ ಕಾಳಜಿಯಿಂದ ಕೆಲಸ ಮಾಡುವುದೇ ದೇಶಕ್ಕೆ ನೀಡುವ ನಿಜವಾದ ಕೊಡುಗೆ. ಇದು ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಹಿರಿಯರಿಗೆ ಸಲ್ಲಿಸುವ ಗೌರವ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಅಭಿಪ್ರಾಯಪಟ್ಟರು.

ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯ ಬೆಂಗಳೂರು ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಮಂಗಳವಾರ ಎನ್‌ಎಸ್ ಎಸ್ ದಕ್ಷಿಣ ವಲಯ ಗಣರಾಜ್ಯೋತ್ಸವ ಪೂರ್ವ ಪರೇಡ್ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಸ್ವಾತಂತ್ರ್ಯಕ್ಕೆ ಬಲಿದಾನ ಮಾಡಿದ ಹಿರಿಯರ ಋಣ ನೆಮ್ಮೆಲ್ಲರ ಮೇಲಿದೆ. ಹೀಗಾಗಿ ದೇಶಕ್ಕಾಗಿ ಬದ್ಧತೆ, ಸಮ ರ್ಪಣಾ ಮನೋಭಾವ, ಆತ್ಮಸಾಕ್ಷಿಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಲು ಎಲ್ಲರೂ ಸಂಕಲ್ಪ ಮಾಡಬೇಕಾಗಿದೆ ಎಂದರು.

ಗ್ರಾಮೀಣ ಅಭಿವೃದ್ಧಿಯ ಜೊತೆಗೆ ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ನೀಡುವಲ್ಲಿ ರಾಷ್ಟ್ರೀಯ ಸೇವಾ ಸಂಸ್ಥೆಯು ಅಪಾರ ಕೊಡುಗೆ ನೀಡಿದೆ. ರಾಷ್ಟ್ರೀಯ ಸ್ವಯಂ ಸೇವಕರು ಕೇವಲ ನಗರ ಮಟ್ಟಕ್ಕೆ ಸೀಮಿತ ವಾಗದೆ ಭಾರತದ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುವ ಮೂಲಕ ಉತ್ತಮ ನಾಯಕ ರಾಗಿ ಹೊರಹೊಮ್ಮಲು ಅವಕಾಶವಿದೆ ಅದನ್ನು ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು. ಶಿಬಿರ ದಲ್ಲಿ ಭಾಗವಹಿಸುವ ವಿದ್ಯಾ ರ್ಥಿಗಳಿಗೆ ಕೌಶಲ್ಯಾಭಿವೃದ್ಧಿ, ನಾಯಕತ್ವ ಗುಣ, ಶಿಸ್ತು, ಸಂಯಮ ಬೆಳೆಸಿಕೊಂಡು ಇತರೆ ವಿದ್ಯಾರ್ಥಿ ಗಳಿಗೆ ಮಾದರಿ ವ್ಯಕ್ತಿಯಾಗಿ ಹೊರಹೊಮ್ಮುವ ಅವಕಾಶವಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಮಾತನಾಡಿ, ವಿದ್ಯಾರ್ಥಿಗಳಿಗೆ ವೃತ್ತಿಕೌಶಲ್ಯ ಮುಖ್ಯ. ಅದನ್ನು ರೂಢಿಸಿ ಕೊಂಡರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ. ದೇಶದ ಪ್ರತಿಯೊಬ್ಬ ಪ್ರಜೆಯಲ್ಲಿಯೂ ಕರ್ತವ್ಯ ಪ್ರಜ್ಞೆ, ದೇಶಾಭಿಮಾನ ಜಾಗೃತ ವಾದಾಗ ಸ್ವಾಭಿಮಾನ ನೆಲೆಗೊಳ್ಳುತ್ತದೆ.ಆಗ ದೇಶ ಉನ್ನತಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿರುವ ಹತ್ತು ದಿನದ ಶಿಬಿರದಲ್ಲಿ ಕೇರಳ, ತಮಿಳುನಾಡು ಹಾಗೂ ಕರ್ನಾಟಕ ಸೇರಿದಂತೆ ಪುದುಚರಿ, ಲಕ್ಷದ್ವೀಪ, ಅಂಡ ಮಾನ್ ಮತ್ತು ನಿಕೋಬಾರ್ ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 200 ರಾಷ್ಟ್ರೀಯ ಸ್ವಯಂ ಸೇವಕ ವಿದ್ಯಾರ್ಥಿಗಳು ಭಾಗವಹಿ ಸಿದ್ದು, ಅವರಲ್ಲಿ 40 ಸ್ವಯಂ ಸೇವಕರನ್ನು ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಭಾಗವಹಿಸಲು ಪಾರದರ್ಶಕವಾಗಿ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಡಿ.ಕಾರ್ತಿಗೇಯನ್ ಪ್ರಾದೇಶಿಕ ನಿರ್ದೇಶಕರು ಪ್ರಾದೇಶಿಕ ನಿರ್ದೇಶನಾಲಯ ಭಾರತ ಸರ್ಕಾರ ಹಾಗೂ ವಿಶ್ವವಿದ್ಯಾ ನಿಲಯದ ಕುಲಸಚಿವ ಪ್ರೊ. ಮಹಾಬಲೇಶ್ವರ ಯು.ಎಸ್, ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ. ಅಶೋಕ್ ಕುಮಾರ್ ವಿ. ಪಾಳೇದ ಮತ್ತಿತರರು ಉಪಸ್ಥಿತರಿದ್ದರು.

# ಮುಡಾ ಸಿಬಿಐಗೆ ವಹಿಸಿ

## ಮಾಜಿ ಸಿಎಂ ಬಿಎಸ್‌ವೈ ಆಗ್ರಹ

ಬೆಂಗಳೂರು, ನ. 6 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆ ಹಗರಣದ ಸತ್ಯ ಅರಿಯಲು ಸಿಬಿಐ ತನಿಖೆಗೆ ವಹಿಸಬೇಕೆಂದು ಬಿಜೆಪಿ ಹಿರಿಯ ಮುಖಂಡ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಇಂದಿಲ್ಲಿ ಆಗ್ರಹಿಸಿದ್ದಾರೆ.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಪ್ರಚಾರಕ್ಕೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದ ಮುಂದೆ ಹಾಜರಾಗಿರುವುದು ಒಂದು ನಾಟಕ. ಸರ್ಕಾರದ ಅಡಿಯಲ್ಲಿ ಬರುವ ಲೋಕಾಯುಕ್ತ ತನಿಖೆಯಿಂದ ಸತ್ಯಾಸತ್ಯತೆ ಹೊರಬರುವುದಿಲ್ಲ ಎಂದರು.

ಮುಖ್ಯಮಂತ್ರಿ ಅವರು ತಾವು, ಸಾಚಾ ಎಂದು ತೋರಿಸಿಕೊಳ್ಳಲು ಲೋಕಾಯುಕ್ತ ಮುಂದೆ ತನಿಖೆಗೆ ಹಾಜರಾಗಿದ್ದಾರೆ. ಅವರೇ ಹೇಳುವಂತೆ ತಮ್ಮ ಜೀವನ ತೆರೆದ ಪುಸ್ತಕ ಎಂದ ಮೇಲೆ ಸಿಬಿಐ ತನಿಖೆಗೆ ಅಂಜುವುದು ಏತಕ್ಕೆ? ಎಂದು ಪ್ರಶ್ನಿಸಿದರು.

ಮುಡಾ ಬಿಡಿ ನಿವೇಶನಗಳ ಹಂಚಿಕೆಯಲ್ಲಿ ಸಾವಿರಾರು ಕೋಟಿ ರೂ.ಗಳ ಹಗರಣ ನಡೆದಿದೆ. ಇದರ ಸತ್ಯಾಸತ್ಯತೆ ಹೊರಬರಬೇಕಾದರೆ ಸಿಬಿಐನಿಂದ ಮಾತ್ರ ಸಾಧ್ಯ. ಇದನ್ನು ನಾನೊಬ್ಬನೇ ಹೇಳುತ್ತಿಲ್ಲ, ಸಿದ್ದರಾಮಯ್ಯ ವಿರುದ್ಧ ದೂರು ನೀಡಿರುವವರೂ ಸಿಬಿಐ ತನಿಖೆಗೆ ಒತ್ತಾಯಿಸಿ ನ್ಯಾಯಾಲಯದ ಮೊರೆ ಹೋಗಿದ್ದಾರೆ ಎಂದು ಯಡಿಯೂರಪ್ಪ ಹೇಳಿದರು.

ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರಲ್ಲಿ ಮುಳುಗಿದೆ, ಹಗರಣಗಳ ಸರಮಾಲೆಯೇ ಇವರ ಕುತ್ತಿಗೆಗೆ ಸುತ್ತಿಕೊಂಡಿದೆ. ಈಗ ಮದ್ಯ ಮಾರಾಟಗಾರರೂ 150 ಕೋಟಿ ರೂ. ಭ್ರಷ್ಟಾಚಾರದ ಆರೋಪ ಹೊರಿಸಿದ್ದಾರೆ. ಇದರ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಹಾಗೂ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

# ಕೂನಬೇವು ರಸ್ತೆ ಸಮಸ್ಯೆ : ಶಾಸಕರ ತೀರ್ಮಾನಕ್ಕೆ ಹೋರಾಟಗಾರರ ಸಹಮತ

ರಾಣೇಬೆನ್ನೂರು, ನ. 6- ಪಟ್ಟಣದ ಹೊರವಲಯ ದಲ್ಲಿ ಕೂನಬೇವು ರಸ್ತೆಗೆ ಸುಸಜ್ಜಿತ ಅಂಡರ್‌ಬ್ರಿಡ್ಜ್ ಆಗಬೇಕು. ಇಲ್ಲವೇ 150 ಅಡಿ ರಿಂಗ್ ರಸ್ತೆ ನಿರ್ಮಿಸಬೇಕೆಂದು ಒತ್ತಾಯಿಸಿ, ಪ್ರತಿಭಟನೆ ಮಾಡುತ್ತಿರುವ ಕೂನಬೇವು ಗ್ರಾಮಸ್ಥರು ಮತ್ತು ರೆಲ್ವೆ ಮೇಲ್ಸೇತುವೆ ನಿರ್ಮಾಣ ಹೋರಾಟ ಸಮಿತಿಯವರು ಶಾಸಕರ ಮಾತಿಗೆ ಸಹಮತ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 57 ರ ಕೂನಬೇವು ರಸ್ತೆಯನ್ನು ದಾಟಿಹೋಗುವ ಸ್ಥಳದಲ್ಲಿ ಸಾರ್ವಜನಿಕರು ಮತ್ತು ಹೋರಾಟಗಾರರ ಬೇಡಿಕೆಯಂತೆ ರಸ್ತೆ ನಿರ್ಮಾಣ ವಾಗುತ್ತಿಲ್ಲ. ವೈಜ್ಞಾನಿಕವಾಗಿ ರಸ್ತೆ ನಿರ್ಮಿಸಿದರೆ ರಸ್ತೆ ಅಪಘಾತಗಳಾಗುವುದಿಲ್ಲ. ಅದನ್ನು ಬಿಟ್ಟು



ರಾಣೇಬೆನ್ನೂರು

ಅವೈಜ್ಞಾನಿಕವಾಗಿ ರಸ್ತೆ ನಿರ್ಮಿಸಿದರೆ ರಸ್ತೆ ಕ್ರಾಸಿಂಗ್ ಹತ್ತಿರ ದಿನನಿತ್ಯ ರಸ್ತೆ ಅಪಘಾತಗಳಾಗಿ ಅನೇಕ ಸಾವು ನೋವುಗಳಾಗುತ್ತವೆ.

ಸಾರ್ವಜನಿಕರ ವಾಹನಗಳ ಸುಗಮ ಸಂಚಾರಕ್ಕೆ ಈ ಸ್ಥಳದಲ್ಲಿ ಸುಸಜ್ಜಿತ ಅಂಡರ್‌ಬ್ರಿಡ್ಜ್ ಆಗಬೇಕು. ಇಲ್ಲವೇ ರಿಂಗ್ ರಸ್ತೆ ನಿರ್ಮಿಸಬೇಕೆಂದು ಈಗಾಗಲೇ 3-4 ಬಾರಿ ಪ್ರತಿಭಟನೆ ಮಾಡಿ ಕಳೆದ 2 ತಿಂಗಳಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು ಎಂದು ಪ್ರತಿಭಟನಕಾರರು ತಿಳಿಸಿದ್ದಾರೆ.

ಮೊನ್ನೆ ದಿವಸ ಶಾಸಕ ಬಸವರಾಜ ಶಿವಣ್ಣನವರ ಮಧ್ಯಸ್ಥಿಕೆಯಲ್ಲಿ ಹೋರಾಟಗಾರರು, ಗ್ರಾಮಸ್ಥರು, ಗುತ್ತಿಗೆದಾರರು, ತಹಶೀಲ್ದಾರರು, ಅಧಿಕಾರಿಗಳು ಮಧ್ಯ ಸುದೀರ್ಘ ಚರ್ಚೆ ಕೂಡಾ ನಡೆದಿದೆ.

ಅಂತಿಮವಾಗಿ ಶಾಸಕ ಬಸವರಾಜ ಶಿವಣ್ಣನವರ ತೀರ್ಮಾನಕ್ಕೆ ನಾವು ಬದ್ಧ ಎಂದು ಹೋರಾಟಗಾರರು ತಿಳಿಸಿದಾಗ ಶಾಸಕರು ಮಾತನಾಡಿ, ಅಂಡರ್‌ಬ್ರಿಡ್ಜ್ ಅಥವಾ ರಿಂಗ್ ರಸ್ತೆಗೆ ಎಸ್ಟಿಮೇಟ್ ಮಾಡಿಸಿ ಯಾವುದಕ್ಕೆ ತಾಂತ್ರಿಕ ಇಲಾಖೆ ಮಂಜೂರಾತಿ ಕೊಡುತ್ತದೆಯೋ ಅದನ್ನು ಮಾಡೋಣ. ಅಲ್ಲಿಯವರೆಗೂ ಈ ಸ್ಥಳದಲ್ಲಿ ಮಾತ್ರ ಕಾಮಗಾರಿ ಸ್ಥಗಿತಗೊಳಿಸಿ, ಮುಂದೆ ಕಾಮಗಾರಿ ಮುಂದುವರಿಸಿರಿ ಎಂದು ಗುತ್ತಿಗೆ ಪಡೆದ ಕಂಪನಿ ಮುಖ್ಯಸ್ಥರಿಗೆ ಸೂಚಿಸಿದರು. ಅದಕ್ಕೆ ಅಧಿಕಾರಿಗಳು, ತಾಂತ್ರಿಕ ವರ್ಗದವರು ಸಮ್ಮತಿ ಸೂಚಿಸಿದರು.

ಈ ಸಂದರ್ಭದಲ್ಲಿ ರೆಲ್ವೆ ಮೇಲ್ಸೇತುವೆ ನಿರ್ಮಾಣ ಹೋರಾಟ ಸಮಿತಿಯ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ, ತಹಶೀಲ್ದಾರ್ ಹೆಚ್.ಕೆ. ಭಗವಾನ್, ಎಪಿಎಂಸಿ ಮಾಜಿ ಅಧ್ಯಕ್ಷ ಏಕನಾಥ ಭಾನವಳ್ಳಿ, ಬಸವರಾಜ ಸವಣೂರ, ಮೈಲಾರಪ್ಪ ಮಾಳಗುಡ್ಡಪ್ಪನವರ, ಮಾಲತೇಶ ಮಾಸಣಗಿ, ಮಲ್ಲಿಕಾರ್ಜುನ ಗಾಣಗೇರ, ಶಿವಣ್ಣ ಬಡಪ್ಪನವರ, ಮೈಲಾರಪ್ಪ ನೆಗಳೂರು, ಧರ್ಮಣ್ಣ ಲಮಾಣಿ, ಗುತ್ತಿಗೆ ಪಡೆದಿರುವ ಸದ್ಭವ ಕಂಪನಿಯ ಇಂಜಿನಿಯರ್ ದೇವರಾಜ, ಕೆಶಿಪ್ ಅಧಿಕಾರಿಗಳು, ಕೂನಬೇವು ಗ್ರಾಮಸ್ಥರು, ಕಂದಾಯ ಮತ್ತು ಪೊಲೀಸ್ ಇಲಾಖೆಯವರು ಇದ್ದರು.



# ಮದುವೆಯ ಹಸೆ ಚಿತ್ತಾರ ಬಿಡಿಸುವಲ್ಲಿ ಸಿದ್ಧ ಹಸ್ತರು - ಜಗಳೂರು ಕಾಟಮ್ಮ

## ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ

ದಾವಣಗೆರೆ ಜಿಲ್ಲೆಯ ಜಗಳೂರು ಸೀಮೆ ಬುಡಕಟ್ಟು ಸಮುದಾಯಗಳ ನೆಲೆವೀಡು. ತಾಜಾ ಜಾನಪದ ಸಂಸ್ಕೃತಿಯು ಹಾಸುಹೊಕ್ಕಾದ ಸಮೃದ್ಧ ಹೊನ್ನ ಕಣಜ. ಜಗಳೂರು ತಾಲ್ಲೂಕಿನ ಹೆಗ್ಗುರುತಿನ ಊರಾದ ತೋರಣಗಟ್ಟೆಯ ಗೌಡ್ರ ಚಿಕ್ಕಪ್ಪ ಮತ್ತು ಗೌರಮ್ಮ ಇವರ ಪುತ್ರಿಯಾದ ಕಾಟಮ್ಮ ತನ್ನ ಬಾಲ್ಯದಲ್ಲೇ ಊರಿನ ಪರಿಸರಕ್ಕನುಗುಣವಾಗಿ ಹೊಲಗದ್ದೆಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ, ಊರ ದೇವರುಗಳ ಪರವು ಉತ್ಸವಗಳನ್ನು ಕಣ್ಣು ತುಂಬಿಸಿಕೊಳ್ಳುವಾಗ ವಾರಗಟ್ಟಲೇ ಜರುಗುತ್ತಿದ್ದ ಮದುವೆ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿರುವ ಊರಿನ ಹಿರಿಯರು ಹಾಡುತ್ತಿದ್ದ ಸೋಬಾನೆ ಪದಗಳು ದೇವರ ಪದಗಳು, ಕುಣಿತ ಮಣಿತಗಳ ಪದಗಳನ್ನು ಚಿತ್ತವಿಟ್ಟು ಆಲಿಸುತ್ತಲೇ ತಾನೂ ಅವುಗಳನ್ನು ಆಸ್ವಾದಿಸಿಕೊಂಡು ಸಹವರ್ತಿಯಾಗಿ ದನಿ ಸೇರಿಸಲು ಆರಂಭಿಸಿದರು.

ಹುಟ್ಟಿದ ಊರಿನಲ್ಲಿಯೇ ಬಾಲಪ್ಪನವರನ್ನು ವಿವಾಹವಾದ ಕಾಟಮ್ಮ ನಾಲ್ಕು ಮಕ್ಕಳ ತಾಯಿಯಾಗಿ ತುಂಬು ಸಂಸಾರವನ್ನು ನಿರ್ವಹಿಸುತ್ತಲೇ ತನ್ನ ಎದೆಯೊಳಗಿನ ಪದಗಳಿಗೆ ದನಿಯಾಗುತ್ತಾ ಬಂದರು. ತನ್ನ ಸೋದರಿ ಶಾಂತವೀರಮ್ಮ ಹಾಗೂ ಸಮೀಪದ ಬಂಧುಗಳಾದ ಬಾಲಮ್ಮ, ಬುಡಮ್ಮ ಮುಂತಾದವರ ತಂಡ ಕಟ್ಟಿಕೊಂಡು ಮಧ್ಯ ಕರ್ನಾಟಕದ ಪ್ರಸಿದ್ದ ಜಾನಪದ ಸಾಂಸ್ಕೃತಿಕ ವೀರರಾದ ಕಾಟಣ್ಣ, ದೊಡ್ಡಣ್ಣ, ಬಡಣ್ಣ, ಚಿಕ್ಕಣ್ಣ ಇವರ ಬಗ್ಗೆ ಸುದೀರ್ಘ ಕಥನ ಕಾವ್ಯಗಳನ್ನು ಕಟ್ಟಿ ನಿರರ್ಗಳವಾಗಿ ಹಾಡಬಲ್ಲವರಾಗಿದ್ದಾರೆ. ವಿಶೇಷವಾಗಿ ದಾವಣಗೆರೆ ಸೀಮೆಯಲ್ಲಿ 'ಮಳೆ ಮಲ್ಲಪ್ಪ' ನೆಂದೇ ಖ್ಯಾತನಾಮರಾಗಿ ಆರಾಧನೆಗೆ ಒಳಗಾಗಿರುವ ಅವಧೂತ ಪರಂಪರೆಯ "ಮೆಲ್ಲಜ್ಜ"ನ ಬಗ್ಗೆ ಈ ತಾಯಿ ಕಟ್ಟಿಕೊಡುವ ಪದಗಳು ಬಹು ಪ್ರಸಿದ್ದ ಪಡೆದಿವೆ. ಮೆಲ್ಲಜ್ಜ ಸುಮಾರು ನೂರಾ ಐವತ್ತು ವರ್ಷಗಳ ಹಿಂದೆ ತೋರಣಗಟ್ಟೆಯಲ್ಲಿ ಎಲ್ಲರಂತೆ ಬದುಕಿ ಬಾಳಿದ ವ್ಯಕ್ತಿ. ಆದರೆ ತನ್ನ ವಿಶಿಷ್ಟ ಅಧ್ಯಾತ್ಮಿಕ ಮನೋಪ್ರವೃತ್ತಿಯ ಅವಧೂತನಾಗಿ, ಹವಾಮಾನ ತಜ್ಞನಾಗಿ"ಮಳೆ ಮೆಲ್ಲಜ್ಜ" ಎಂದು ಪ್ರಸಿದ್ಧ ಪಡೆದು ಮರಣೋತ್ತರದಲ್ಲಿ ಜನ ಸಮುದಾಯದಿಂದ ಆರಾಧನೆಗೆ ಒಳಗಾಗುತ್ತಾನೆ. ಇಂತಹ ಅಸಾಮಾನ್ಯ ವ್ಯಕ್ತಿತ್ವದ ಮೆಲ್ಲಜ್ಜನ ಕುರಿತಂತೆ ಪದಗಾತಿ ಕಾಟಮ್ಮ ಸುದೀರ್ಘವಾಗಿ ಕಥನ ಕಟ್ಟಿ ಹಾಡುವ ಸೋಪಜ್ಞ ಕಲೆಗಾರಿಕೆಯನ್ನು ಹೊಂದಿದವರಾಗಿದ್ದಾರೆ. ಜಗಳೂರು ಸೀಮೆಯಲ್ಲಿ ಈ ಕಥನ ಮನೆಮಾತಾಗಿದೆ.

ಜಗಳೂರು ಸೀಮೆಯಲ್ಲಿ ಯಾರದೇ ಮದುವೆ ಸಂಬಂಧಿತ ಕಾರ್ಯಗಳಲ್ಲಿ ಶ್ರೀಮತಿ ಕಾಟಮ್ಮ ನವರ ಉಪಸ್ಥಿತಿ, ಸೋಬಾನೆ ಪದಗಾರಿಕೆ ಇರಲೇಬೇಕು. ಅಷ್ಟರಮಟ್ಟಿಗೆ ಇವರು ಸುಪ್ರಸಿದ್ಧರಾಗಿದ್ದಾರೆ.

ಮದುವೆಯ ಹಸೆ ಚಿತ್ತಾರ ಬಿಡಿಸುವಲ್ಲಿ ಸಿದ್ಧ ಹಸ್ತರು. ಬುಡಕಟ್ಟು ಸಮುದಾಯಗಳ ಮದುವೆಗಳಲ್ಲಿ ಹಾಕಲಾಗುವ ಹಾಲಸ್ತ ಹಸೆ, ಒಳ್ಳಕ್ಕಿ ಹಸೆ, ದೇವರ ಹಸೆ, ಭೂವದ ಹಸೆ, ಅರಿಣಿ ಹಸೆ ಮದುವೆ ಚಪ್ಪರದ ಹಸೆ ಮುಂತಾದ ಹಸೆಗಳನ್ನು ಕರಿಕಂಬಳಿಹಾಸು ಮೇಲೆ ತಾನೇ ಬಿಡಿಸಿ ಆಯಾ ಸಂದರ್ಭಗಳನ್ನು ಮಧುರವಾಗಿ ಹಾಡುವ ನಿಪುಣೆಯಾಗಿದ್ದಾರೆ. ಸಾಮಾನ್ಯವಾಗಿ ಹಸೆ ಬಿಡಿಸುವವರಿಗೆ ಹಾಡಲು ಬರುವುದಿಲ್ಲ. ಹಾಡುವವರು ಹಸೆ ಬಿಡಿಸುವುದಿಲ್ಲ. ಆದರೆ ಕಾಟಮ್ಮ ಇದಕ್ಕೆ ಭಿನ್ನ. ಎರಡನ್ನೂ ಅಚ್ಚುಕಟ್ಟಾಗಿ ನಿರ್ವಹಿಸುವ ಕಲಾಚತುರೆ. ಸುದೀರ್ಘ ನಲವತ್ತು ವರ್ಷಗಳಿಂದ ನಿರಂತರವಾಗಿ ಪದಗಂಗೆಯನ್ನು ಹರಿಸುತ್ತಿರುವ ಎಲೆಮರೆಯ ಪ್ರತಿಭೆ ಕಾಟಮ್ಮನವರನ್ನು ಯಾವ ಸಂಘ-ಸಂಸ್ಥೆಗಳೂ ಗುರುತಿಸದೇ ಹೋದ ಈ ಹೊತ್ತಿನಲ್ಲಿ ಮೊದಲ ಬಾರಿಗೆ ಕರ್ನಾಟಕ ಜಾನಪದ ಅಕಾಡೆಮಿ ಗುರುತಿಸಿ, ಗೌರವಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

**- ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ**
ಬೆಂಗಳೂರು.

# ಐದು ಕಂಪನಿಗಳ ಜೊತೆ ಜಿಎಂ ವಿವಿ ಒಡಂಬಡಿಕೆ



ದಾವಣಗೆರೆ, ನ.6- ನಗರದ ಜಿಎಂ ವಿಶ್ವವಿದ್ಯಾಲಯವು ಐದು ಪ್ರತಿಷ್ಠಿತ ಕಂಪನಿಗಳೊಡನೆ ಒಡಂಬಡಿಕೆ ಮಾಡಿಕೊಂಡಿದೆ.

ಈ ಸಂದರ್ಭದಲ್ಲಿ ಬೆಂಗಳೂರಿನ ಅಡ್ವಾನ್ಸ್ಡ್ ಎಲೆಕ್ಟ್ರಾನಿಕ್ ಸಿಸ್ಟಮ್ಸ್ ಅಂಡ್ ಸಲ್ಯೂಷನ್ ಮುಖ್ಯಸ್ಥ ಸುನಿಲ್ ಟಿ. ಶಂಬಟ್ಟಣ್ಣನವರ್, ಎಎಂಎಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಆಪರೇಷನ್ಸ್ ಹೆಡ್ ಶಶಿಕುಮಾರ್, ಸುಜ್ಲಾನ್ ಕಂಪನಿಯ ಕರ್ನಾಟಕ ವಿಭಾಗದ ಮುಖ್ಯಸ್ಥ ಜನಾರ್ ಮತ್ತು ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಜಗದೀಶ್, ನಮಸ್ಕಾರ ಮೀಡಿಯಾ ಪ್ರೈವೇಟ್ ಲಿಮಿಟೆಡ್ ವತಿಯಿಂದ ಗಣೇಶ್ ವಿ ಶೆಟ್ಟಿ ಮತ್ತು ಪಿ.ಎಸ್.ಕೆ ಫಾರ್ಮಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಬಸವರಾಜ್ ಉಪಸ್ಥಿತರಿದ್ದರು.

ಈ ಒಡಂಬಡಿಕೆಯಿಂದ ಮುಂದಿನ ದಿನಗಳಲ್ಲಿ ಸಂಶೋಧನಾ ವಿಭಾಗದಲ್ಲಿ ಜಂಟಿಯಾಗಿ ಕೆಲಸ ಮಾಡುವುದು, ವಿದ್ಯಾರ್ಥಿಗಳನ್ನು ಕೈಗಾರಿಕೆಗಳಿಗೆ ತಕ್ಕಂತೆ ತಯಾರು ಮಾಡುವುದು, ಪ್ಲೇಸ್ಮೆಂಟ್, ಇಂಟರ್ನ್‌ಶಿಪ್, ವಿವಿಧ ಇತರೆ ಚಟುವಟಿಕೆಗಳಿಗೆ ಸಮನ್ವಯ ಮತ್ತು ಬೆಂಬಲದೊಂದಿಗೆ ಕೆಲಸ ಮಾಡಬಹುದಾಗಿದೆ.

ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಆರ್. ಶಂಕಪಾಲ್, ಸಹ ಕುಲಪತಿ ಡಾ. ಎಚ್. ಡಿ. ಮಹೇಶಪ್ಪ, ಸೀನಿಯರ್ ಡೀನ್ ಡಾ. ಕರಿಬಸಪ್ಪ, ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ತೇಜಸ್ವಿ ಕಟ್ಟಿಮನಿ ಟಿ. ಆರ್, ಸಿಐಜಿಎಸ್‌ಆರ್‌ಡಿ ವಿಭಾಗದ ನಿರ್ದೇಶಕ ಡಾ. ರಾಜಕುಮಾರ್ ಡಿ.ಜಿ, ಸಹಾಯಕ ನಿರ್ದೇಶಕರಾದ ಡಾ.ಪೂಜಿತ ಬಿ.ಎಸ್ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.

## ಹೊನ್ನಾಳಿ ತಾ.ನಲ್ಲಿಂದು ಇಂಗ್ಲಿಷ್ ಕಾರ್ಯಾಗಾರ

ಮಾರಿಕೊಪ್ಪ ಗ್ರಾಮದ ಹತ್ತಿರವಿರುವ ವಿಜಯ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಇಂಗ್ಲಿಷ್ ವಿಷಯವಾರು ಶಿಕ್ಷಕರ ಕಾರ್ಯಾಗಾರ ನಡೆಯಲಿದೆ ಎಂದು ಕಾಲೇಜು ಪ್ರಾಂಶುಪಾಲ ವಸಂತ್‌ಕುಮಾರ್ ತಿಳಿಸಿದರು.

## ಈಸ್ಟ್ ಇಂಡಿಯಾ ಕಂಪನಿ ಜಾಗಕ್ಕೆ ಏಕಸ್ವಾಮ್ಯ ಕಂಪನಿ

**ರಾಹುಲ್ ಆರೋಪ**

ನವದೆಹಲಿ, ನ. 6 - ಮೂಲ ಈಸ್ಟ್ ಇಂಡಿಯಾ ಕಂಪನಿಯು 150 ವರ್ಷಗಳ ಹಿಂದೆಯೇ ಮುಚ್ಚಿದೆ. ಆದರೆ, ಅವರ ಜಾಗಕ್ಕೆ ಹೊಸ ಏಕಸ್ವಾಮ್ಯ ಕಂಪನಿಗಳು ಬಂದಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಈಸ್ಟ್ ಇಂಡಿಯಾ ಕಂಪನಿಯು ಭಾರತವನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡಿತ್ತು. ಇದಕ್ಕೆ ಕಾರಣ ಆ ಕಂಪನಿಯ ಉದ್ಯಮ ಸಾಮರ್ಥ್ಯವಲ್ಲ, ಅದರ ಕಬಂಧ ಬಾಹುಗಳಾಗಿದ್ದವು ಎಂದು ಗಾಂಧಿ ಹೇಳಿದ್ದಾರೆ.

ಲಂಚ ಹಾಗೂ ಮಹಾರಾಜರು ಮತ್ತು ನವಾಬರನ್ನು ಬೆದರಿಸುವ ಮೂಲಕ ಕಂಪನಿಯು ಭಾರತದ ಕುತ್ತಿಗೆಗೆ ಕೈ ಹಾಕಿತ್ತು. ಈ ಕಂಪನಿಯು ನಮ್ಮ ಬ್ಯಾಂಕಿಂಗ್, ಅಧಿಕಾರಶಾಹಿ ಹಾಗೂ ಮಾಹಿತಿ ಜಾಲವನ್ನು ಹಿಡಿತದಲ್ಲಿಟ್ಟಿತ್ತು. ನಾವು ಇನ್ನೊಂದು ದೇಶದಿಂದ ನಮ್ಮ ಸ್ವಾತಂತ್ರ್ಯ ಕಳೆದುಕೊಳ್ಳುವುದಿಲ್ಲ, ಆದರೆ ಏಕಸ್ವಾಮ್ಯದ ಕಾರ್ಪೊರೇಟ್‌ಗಳ ಕಾರಣದಿಂದ ಸ್ವಾತಂತ್ರ್ಯ ಕಳೆದುಕೊಳ್ಳುತ್ತೇವೆ ಎಂದವರು ತಿಳಿಸಿದ್ದಾರೆ.

ಮೂಲ ಈಸ್ಟ್ ಇಂಡಿಯಾ ಕಂಪನಿಯು 150 ವರ್ಷಗಳ ಹಿಂದೆಯೇ ಅಂತ್ಯವಾಗಿತ್ತು. ಆದರೆ, ಈಗ ಅದು ಮರು ಜನ್ಮ ಪಡೆಯುವ ಭೀತಿ ಇದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.


ಹೊಸ ರೀತಿಯ ಏಕಸ್ವಾಮ್ಯ ಕಂಪನಿಗಳು ಹುಟ್ಟಿಕೊಳ್ಳುತ್ತಿವೆ. ಇವು ಅಪಾರ ಸಂಪತ್ತು ಗಳಿಸುತ್ತಿವೆ. ಭಾರತದಲ್ಲಿ ಅಸಮಾನತೆ ಹಾಗೂ ಅನ್ಯಾಯ ಹೆಚ್ಚಾಗುತ್ತಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ನಮ್ಮ ಸಂಸ್ಥೆಗಳು ಈಗ ಜನರ ಪರವಾಗಿ ಉಳಿದಿಲ್ಲ. ಅವರು ಏಕಸ್ವಾಮ್ಯರ ಪರವಾಗಿವೆ. ಲಕ್ಷಾಂತರ ಉದ್ಯಮಗಳು ಈಗ ಯುವಕರಿಗೆ ಉದ್ಯೋಗ ಸೃಷ್ಟಿಸಲು ಸಾಧ್ಯವಾಗುತ್ತಿಲ್ಲ. ಉದ್ಯಮಗಳಿಗೆ ಹೊಸ ಹಾದಿ ನೀಡುವುದರಲ್ಲೇ ಭಾರತದ ಭವಿಷ್ಯ ಇದೆ ಎಂದೂ ಅವರು ಹೇಳಿದ್ದಾರೆ.

ದೇಶದ ನೂರಾರು ಪ್ರತಿಭಾವಂತ ಹಾಗೂ ಪ್ರಗತಿಶೀಲ ಉದ್ಯಮಗಳ ನಾಯಕರು ಏಕಸ್ವಾಮ್ಯಕ್ಕೆ ಹೆದರುತ್ತಿದ್ದಾರೆ. ಏಕಸ್ವಾಮ್ಯ ಕಂಪನಿಗಳು ಉತ್ತಮ ಉತ್ಪನ್ನಗಳನ್ನು ನೀಡುತ್ತಿಲ್ಲ. ಈ ಕಂಪನಿಗಳು ದೇಶದ ಸಂಸ್ಥೆಗಳು ಹಾಗೂ ನಿಯಂತ್ರಕರ ಮೇಲೆ ಹಿಡಿತ ಇಟ್ಟುಕೊಂಡಿವೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಈಗ ಮಾರುಕಟ್ಟೆ ಶಕ್ತಿಗಳು ಯಶಸ್ಸು ನಿರ್ಧರಿಸುತ್ತಿಲ್ಲ, ಅಧಿಕಾರಸ್ಥರ ಜೊತೆಗಿನ ಸಂಬಂಧಗಳ ಕಾರಣದಿಂದ ಯಶಸ್ಸು ನಿರ್ಧಾರವಾಗುತ್ತಿದೆ ಎಂದೂ ಅವರು ಹೇಳಿದ್ದಾರೆ.

# ಕ್ಯಾನ್ಸರ್ ಜಾಗೃತಿ ಮೂಡಿಸುವಲ್ಲಿ ಶಾಲೆ ಮತ್ತು ಶಿಕ್ಷಕರ ಪಾತ್ರ

ಕ್ಯಾನ್ಸರ್ ಜಾಗತಿಕ ಆರೋಗ್ಯ ಕಾಳಜಿಯಾಗಿದ್ದು, ಅದು ಪ್ರತಿ ವರ್ಷ ಲಕ್ಷಾಂತರ ವ್ಯಕ್ತಿಗಳು ಮತ್ತು ಕುಟುಂಬಗಳ ಮೇಲೆ ಪರಿಣಾಮ ಬೀರುತ್ತದೆ. ಭಾರತದಲ್ಲಿ, ಕ್ಯಾನ್ಸರ್ ಹೆಚ್ಚು ಪ್ರಚಲಿತದಲ್ಲಿರುವ ಕಾಯಿಲೆಯಾಗಿದೆ, ವಾರ್ಷಿಕವಾಗಿ 1.3 ಮಿಲಿಯನ್ ಹೊಸ ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ಪ್ರತಿ ವರ್ಷ ನವೆಂಬರ್ 7 ರಂದು ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವನ್ನಾಗಿಗಿ ಆಚರಿಸಲಾಗುತ್ತದೆ, ಕ್ಯಾನ್ಸರ್ ತಡೆಗಟ್ಟುವಿಕೆ, ಆರಂಭಿಕ ಪತ್ತೆ ಮತ್ತು ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸಲು ಒಂದು ಪ್ರಮುಖ ಅವಕಾಶವನ್ನು ಒದಗಿಸುತ್ತದೆ. ಭಾರತದಲ್ಲಿ ಬೆಳೆಯುತ್ತಿರುವ ಕ್ಯಾನ್ಸರ್‌ನ ಹೊರೆಯನ್ನು ಕಡಿಮೆ ಮಾಡುವುದು ಮತ್ತು ಕ್ಯಾನ್ಸರ್ ಪರೀಕ್ಷಿಸುವಿಕೆಯ ಪ್ರಾಮುಖ್ಯತೆ ಮತ್ತು ಆರೋಗ್ಯಕರ ಜೀವನ ಶೈಲಿಯ ಆಯ್ಕೆಗಳ ಬಗ್ಗೆ ಜನರಿಗೆ ತಿಳಿಸುವುದು ಈ ದಿನದ ಗುರಿಯಾಗಿದೆ. ಈ ಜಾಗೃತಿ ಅಭಿಯಾನದ ಪ್ರಮುಖ ಪ್ರತಿನಿಧಿಯಾಗಿ ಶಿಕ್ಷಕರು ಭಾಗವಹಿಸಬೇಕಾಗಿದೆ. ಶಿಕ್ಷಕರು ಪ್ರಮುಖವಾಗಿ ವಿದ್ಯಾರ್ಥಿಗಳು, ಕುಟುಂಬಗಳು ಮತ್ತು ಸಮುದಾಯಗಳ ಮೇಲೆ ಗಮನಾರ್ಹ ಪ್ರಭಾವವನ್ನು ಹೊಂದಿದ್ದಾರೆ. ಶಾಲೆಗಳಲ್ಲಿ ಕ್ಯಾನ್ಸರ್ ಜಾಗೃತಿಯನ್ನು ಉತ್ತೇಜಿಸುವ ಮೂಲಕ, ಶಿಕ್ಷಕರು ಕ್ಯಾನ್ಸರ್




ಅಪಾಯಗಳು, ತಡೆಗಟ್ಟುವ ತಂತ್ರಗಳು ಮತ್ತು ಆರಂಭಿಕ ಪತ್ತೆಯ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ಮೂಡಿಸಿ, ಮುಂದಿನ ಪೀಳಿಗೆಯನ್ನು ಬೆಳೆಸಲು ಸಹಾಯ ಮಾಡಬಹುದು. ನಾನು ಕೂಡ ಒಬ್ಬ ಪ್ರಶಿಕ್ಷಕ ಮತ್ತು ಕ್ಯಾನ್ಸರ್‌ಗೆ ತುತ್ತಾಗಿ ಚಿಕಿತ್ಸೆ ಪಡೆದು, ಸಂಪೂರ್ಣ ಗುಣಮುಖನಾಗಿ ಈ ಲೇಖನ ಬರೆದಿದ್ದೇನೆ. ಈ ಲೇಖನವು ಕ್ಯಾನ್ಸರ್ ಜಾಗೃತಿಯ ಪ್ರಾಮುಖ್ಯತೆಯನ್ನು ಬೆಳೆಸುವುದರ ಜೊತೆಗೆ ಜಾಗೃತಿಯನ್ನು ಹೇಗೆ ಅಭಿವೃದ್ಧಿಪಡಿಸಬಹುದು ಮತ್ತು ಈ ಆಂದೋಲನದಲ್ಲಿ ಶಿಕ್ಷಕರು ವಹಿಸುವ ನಿರ್ಣಾಯಕ ಪಾತ್ರವನ್ನು ತಿಳಿಸುತ್ತದೆ. ಭಾರತದಲ್ಲಿ, ಕ್ಯಾನ್ಸರ್ ಸಾವಿನ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ, ಪ್ರತಿ ವರ್ಷ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ICMR) ಪ್ರಕಾರ, ವಯಸ್ಸಾದ ಜನಸಂಖ್ಯೆ, ಬದಲಾಗುತ್ತಿರುವ ಜೀವನಶೈಲಿ, ಪರಿಸರ ಅಂಶಗಳು ಮತ್ತು ನಗರೀಕರಣದಂತಹ ಅಂಶಗಳಿಂದ ಮುಂಬರುವ ವರ್ಷಗಳಲ್ಲಿ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ.

**ಕ್ಯಾನ್ಸರ್ ಜಾಗೃತಿಯ ಪ್ರಾಮುಖ್ಯತೆ:**

**ಜಾಗತಿಕವಾಗಿ ಬೆಳೆಯುತ್ತಿರುವ ಕ್ಯಾನ್ಸರ್ ಹೊರೆ :** ವಿಶ್ವ ಆರೋಗ್ಯ ಸಂಸ್ಥೆ (WHO) ಪ್ರಕಾರ, ಕ್ಯಾನ್ಸರ್ ವಿಶ್ವಾದ್ಯಂತ ಸಾವಿಗೆ ಪ್ರಮುಖ ಕಾರಣವಾಗಿದೆ, 2020 ರಲ್ಲಿ ಸುಮಾರು 10 ಮಿಲಿಯನ್ ಸಾವುಗಳಿಗೆ ಕಾರಣವಾಗಿದೆ. ಅತ್ಯಂತ ಸಾಮಾನ್ಯವಾದ ಕ್ಯಾನ್ಸರ್‌ಗಳಲ್ಲಿ ಸ್ತನ, ಶ್ವಾಸಕೋಶ, ಕರಳು ಮತ್ತು ಪ್ರಾಸ್ಟೇಟ್ ಕ್ಯಾನ್ಸರ್ ಸೇರಿವೆ. 2040 ರ ವೇಳೆಗೆ, ಜಾಗತಿಕ ಕ್ಯಾನ್ಸರ್ ಪ್ರಕರಣಗಳು 47% ರಷ್ಟು ಹೆಚ್ಚಾಗುತ್ತವೆ ಎಂದು ಅಂದಾಜಿಸಲಾಗಿದೆ, ಭಾರತದಂತಹ ಕಡಿಮೆ ಮತ್ತು ಮಧ್ಯಮ-ಆದಾಯದ ದೇಶಗಳು ಈ ಹೆಚ್ಚಳದ ಭಾರವನ್ನು ಹೊಂದುತ್ತವೆ. ಭಾರತವು ತನ್ನ ದೊಡ್ಡ ಮತ್ತು ವಯಸ್ಸಾದ ಜನಸಂಖ್ಯೆಯೊಂದಿಗೆ, ಕ್ಯಾನ್ಸರ್ ಪ್ರಕರಣಗಳಲ್ಲಿ ತ್ವರಿತ ಏರಿಕೆಯನ್ನು ಅನುಭವಿಸುತ್ತಿದೆ. ಬದಲಾಗುತ್ತಿರುವ ಜೀವನ ಶೈಲಿ, ತಂಬಾಕು ಬಳಕೆ, ಮದ್ಯಪಾನ, ಕಳಪೆ ಆಹಾರ ಪದ್ಧತಿ ಮತ್ತು ಆರೋಗ್ಯ ಸೇವೆಗಳಿಗೆ ಸೀಮಿತ ಪ್ರವೇಶವನ್ನು ಪ್ರಮುಖ ಕೊಡುಗೆದಾರರು ಒಳಗೊಂಡಿರುತ್ತಾರೆ. ಹೆಚ್ಚುತ್ತಿರುವ ಕ್ಯಾನ್ಸರ್ ಹೊರೆಯು ಅಗಾಧವಾದ ಆರೋಗ್ಯ ವ್ಯವಸ್ಥೆಗಳಾಗಿದ್ದು, ಕ್ಯಾನ್ಸರ್ ತಡೆಗಟ್ಟುವಿಕೆ ಮತ್ತು ಆರಂಭಿಕ ಪತ್ತೆ ಹಚ್ಚುವಿಕೆಯ ಬಗ್ಗೆ ಸಾರ್ವಜನಿಕ ಜಾಗೃತಿಗೆ ತುರ್ತು ಅಗತ್ಯವನ್ನು ಸೃಷ್ಟಿಸುತ್ತದೆ.

**ಆರಂಭಿಕ ಪತ್ತೆ ಜೀವಗಳನ್ನು ಉಳಿಸುತ್ತದೆ :** ಕ್ಯಾನ್ಸರ್‌ನ ಆರಂಭಿಕ ಪತ್ತೆ ಗಮನಾರ್ಹವಾಗಿ ಬದುಕುಳಿಯುವಿಕೆಯ ಪ್ರಮಾಣವನ್ನು ಸುಧಾರಿಸುತ್ತದೆ. ಸ್ತನ, ಗರ್ಭಕಂಠ ಮತ್ತು ಬಾಯಿಯ ಕ್ಯಾನ್ಸರ್‌ನಂತಹ ಅನೇಕ ಕ್ಯಾನ್ಸರ್‌ಗಳು ಆರಂಭಿಕ ಹಂತಗಳಲ್ಲಿ ಸಿಕ್ಕಿಬಿದ್ದರೆ ಯಶಸ್ವಿಯಾಗಿ ಚಿಕಿತ್ಸೆ ನೀಡಬಹುದು. ಉದಾಹರಣೆಗೆ, ಆರಂಭಿಕ ಪತ್ತೆಯಾದರೆ ಸ್ತನ ಕ್ಯಾನ್ಸರ್ ಬದುಕುಳಿಯುವಿಕೆಯ ಪ್ರಮಾಣವು 90% ಅನ್ನು ಮೀರುತ್ತದೆ, ಆದರೆ ನಂತರದ ಹಂತದಲ್ಲಿ ರೋಗನಿ ರ್ಣಯ ಮಾಡಿದರೆ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವು ನಿಯಮಿತ ಪರೀಕ್ಷೆಗಳಿಗೆ ಆದ್ಯತೆ ನೀಡಲು, ಕ್ಯಾನ್ಸರ್‌ನ ಎಚ್ಚರಿಕೆ ಚಿಹ್ನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ತ್ವರಿತವಾಗಿ ವೈದ್ಯಕೀಯ ಆರೈಕೆಯನ್ನು ಪಡೆಯಲು ವ್ಯಕ್ತಿಗಳನ್ನು ಪ್ರೋತ್ಸಾಹಿಸುತ್ತದೆ. ಶಿಕ್ಷಣ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯ ಕೇಂದ್ರಗಳಾಗಿ ಶಾಲೆಗಳು ಈ ಜೀವ ಉಳಿಸುವ ಸಂದೇಶವನ್ನು ಹರಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

**ಜೀವನ ಶೈಲಿಯ ಆಯ್ಕೆಗಳ ಮೂಲಕ ಕ್ಯಾನ್ಸರ್ ತಡೆಗಟ್ಟುವಿಕೆ :** (4ನೇ ಪುಟಕ್ಕೆ)

# ಕ್ಯಾನ್ಸರ್ ಜಾಗೃತಿ ಮೂಡಿಸುವಲ್ಲಿ ಶಾಲೆ - ಶಿಕ್ಷಕರ ಪಾತ್ರ

**(3ನೇ ಪುಟದಿಂದ)** ಸರಿಸುಮಾರು 30-50% ಕ್ಯಾನ್ಸರ್‌ಗಳನ್ನು ಜೀವನ ಶೈಲಿಯ ಮಾರ್ಪಾಡುಗಳ ಮೂಲಕ ತಡೆಗಟ್ಟಬಹುದು. ತಂಬಾಕು ಸೇವನೆಯಿಂದ ದೂರವಿರುವುದು, ಆರೋಗ್ಯಕರ ಆಹಾರವನ್ನು ಕಾಪಾಡಿಕೊಳ್ಳುವುದು, ನಿಯಮಿತ ದೈಹಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು ಮತ್ತು ಆಲ್ಕೋಹಾಲ್ ಸೇವನೆಯನ್ನು ಕಡಿಮೆ ಮಾಡುವುದು ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡಲು ಸಾಬೀತಾಗಿರುವ ತಂತ್ರಗಳಾಗಿವೆ. ಕ್ಯಾನ್ಸರ್ ಜಾಗೃತಿ ಅಭಿಯಾನಗಳು ಸಾಮಾನ್ಯವಾಗಿ ಈ ತಡೆಗಟ್ಟುವ ಕ್ರಮಗಳನ್ನು ಎತ್ತಿ ತೋರಿಸುತ್ತವೆ, ತಿಳುವಳಿಕೆಯುಳ್ಳ ಆರೋಗ್ಯ ನಿರ್ಧಾರಗಳನ್ನು ಮಾಡುವ ಮಹತ್ವವನ್ನು ಒತ್ತಿ ಹೇಳುತ್ತವೆ. ಶಿಕ್ಷಕರು ತಮ್ಮ ಪಠ್ಯಕ್ರಮದಲ್ಲಿ ಆರೋಗ್ಯ ಶಿಕ್ಷಣವನ್ನು ಸಂಯೋಜಿಸುವ ಮೂಲಕ ಮತ್ತು ಚಿಕ್ಕ ವಯಸ್ಸಿನಿಂದಲೇ ಆರೋಗ್ಯಕರ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಮೂಲಕ ಈ ಸಂದೇಶಗಳನ್ನು ಇನ್ನಷ್ಟು ವರ್ಧಿಸಬಹುದು.

**ಕ್ಯಾನ್ಸರ್ ಸುತ್ತವಿರುವ ಕಳಂಕ ಮತ್ತು ಪುರಾಣಗಳನ್ನು ತಿಳಿಸುವುದು :** ಅನೇಕ ಸಮುದಾಯಗಳಲ್ಲಿ ಕ್ಯಾನ್ಸರ್ ಇನ್ನೂ ಕಳಂಕ, ಭಯ ಮತ್ತು ತಪ್ಪು ಮಾಹಿತಿಯಿಂದ ಮುಚ್ಚಿಹೋಗಿದೆ. ಕೆಲವು ಜನರು ಕ್ಯಾನ್ಸರ್ ಅನ್ನು ಮರಣದಂಡನೆ ಎಂದು ನಂಬುತ್ತಾರೆ ಅಥವಾ ಅದನ್ನು ತಡೆಯಲು ಅಥವಾ ಚಿಕಿತ್ಸೆ ನೀಡಲು ಸಾಧ್ಯವಿಲ್ಲವೆಂದು ನಂಬಿದ್ದಾರೆ. ಸಾರ್ವಜನಿಕ ಜಾಗೃತಿ ಅಭಿಯಾನಗಳು ಈ ಪುರಾಣಗಳನ್ನು ಹೋಗಲಾಡಿಸಲು ಮತ್ತು ಕ್ಯಾನ್ಸರ್ ಬಗ್ಗೆ ಮುಕ್ತತೆ ಮತ್ತು ತಿಳುವಳಿಕೆಯ ಸಂಸ್ಕೃತಿಯನ್ನು ಬೆಳೆಸುವ ಗುರಿಯನ್ನು ಹೊಂದಿವೆ. ನಿಖರವಾದ ಮಾಹಿತಿಯನ್ನು ಪ್ರಚಾರ ಮಾಡುವ ಮೂಲಕ, ಕ್ಯಾನ್ಸರ್ ಜಾಗೃತಿ ಉಪಕ್ರಮಗಳು ಭಯವನ್ನು ಕಡಿಮೆ ಮಾಡುತ್ತವೆ. ಮತ್ತು ಅವರ ಆರೋಗ್ಯದ ಜವಾಬ್ದಾರಿಯನ್ನು ತೆಗೆದುಕೊಳ್ಳಲು ವ್ಯಕ್ತಿಗಳಿಗೆ ಅಧಿಕಾರ ನೀಡುತ್ತದೆ. ಶಿಕ್ಷಕರು, ಸಮಾಜದಲ್ಲಿ ವಿಶ್ವಾಸಾರ್ಹ ವ್ಯಕ್ತಿಗಳಾಗಿ, ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳಿಗೆ ವಿಶ್ವಾಸಾರ್ಹ ಮಾಹಿತಿಯನ್ನು ಒದಗಿಸುವ ಮೂಲಕ ಈ ಪ್ರಯತ್ನದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಬಹುದು.

**ಕ್ಯಾನ್ಸರ್ ಜಾಗೃತಿಯನ್ನು ಅಭಿವೃದ್ಧಿ ಪಡಿಸುವುದು : ಹಂತ-ಹಂತದ ವಿಧಾನ**

**ಶಾಲಾ-ಆಧಾರಿತ ಕ್ಯಾನ್ಸರ್ ಶಿಕ್ಷಣ ಕಾರ್ಯಕ್ರಮಗಳು :** ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಶಾಲೆಗಳು ಸೂಕ್ತ ವೇದಿಕೆಯನ್ನು ಒದಗಿಸುತ್ತವೆ. ಶಾಲಾ ಪಠ್ಯಕ್ರಮದಲ್ಲಿ ಕ್ಯಾನ್ಸರ್ ಶಿಕ್ಷಣವನ್ನು ಸೇರಿಸುವ ಮೂಲಕ, ಶಿಕ್ಷಕರು ಆರೋಗ್ಯಕರ ಜೀವನ ಶೈಲಿಯ ಪ್ರಾಮುಖ್ಯತೆ, ಕ್ಯಾನ್ಸರ್‌ನ ಎಚ್ಚರಿಕೆ ಚಿಹ್ನೆಗಳು ಮತ್ತು ನಿಯಮಿತ ಸ್ಕ್ರೀನಿಂಗ್‌ಗಳ ಮೌಲ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಬಹುದು. ಈ ಜ್ಞಾನವು ವಿದ್ಯಾರ್ಥಿಗಳಿಗೆ ಪ್ರಯೋಜನವನ್ನು ಮಾತ್ರವಲ್ಲದೆ ಅವರ ಕುಟುಂಬಗಳಿಗೂ ವಿಸ್ತರಿಸುತ್ತದೆ, ಸಮುದಾಯದೊಳಗೆ ಅಲೆಗಳ ಪರಿಣಾಮವನ್ನು ಉಂಟು ಮಾಡುತ್ತದೆ. ಜೀವಶಾಸ್ತ್ರ, ಆರೋಗ್ಯ ಶಿಕ್ಷಣ ಮತ್ತು ದೈಹಿಕ ಶಿಕ್ಷಣದಂತಹ ವಿಷಯಗಳಲ್ಲಿ ಕ್ಯಾನ್ಸರ್ ತಡೆಗಟ್ಟುವಿಕೆ ಮತ್ತು ಆರಂಭಿಕ ಪತ್ತೆಯ ಕುರಿತು ವಯಸ್ಸಿಗೆ ಸೂಕ್ತವಾದ ಪಾಠಗಳನ್ನು ಸೇರಿಸಿಕೊಳ್ಳಬಹುದು. ಕಿರಿಯ ವಿದ್ಯಾರ್ಥಿಗಳಿಗೆ, ಚಟುವಟಿಕೆಗಳು, ಆರೋಗ್ಯಕರ ಆಹಾರ ಮತ್ತು ಧೂಮಪಾನದ ಅಪಾಯಗಳ ಮೇಲೆ ಕೇಂದ್ರೀಕರಿಸಬಹುದು. ಹಳೆಯ ವಿದ್ಯಾರ್ಥಿಗಳಿಗೆ, ಶಿಕ್ಷಕರು ಕ್ಯಾನ್ಸರ್ ಅಪಾಯದ ಅಂಶಗಳು, ಪರೀಕ್ಷೆಗಳ ಪ್ರಾಮುಖ್ಯತೆ, ಸ್ತನ ಮತ್ತು ವೃಷಣ ಕ್ಯಾನ್ಸರ್‌ನಂತಹ ಕ್ಯಾನ್ಸರ್‌ಗಳಿಗೆ ಸ್ವಯಂ-ಪರೀಕ್ಷೆಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಕುರಿತು ಆಳವಾಗಿ ಅಧ್ಯಯನ ಮಾಡಬಹುದು.

**ಕ್ಯಾನ್ಸರ್ ಜಾಗೃತಿಗಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು :** ಇಂದಿನ ಡಿಜಿಟಲ್ ಯುಗದಲ್ಲಿ, ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವಲ್ಲಿ ತಂತ್ರಜ್ಞಾನವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳನ್ನು ಕ್ಯಾನ್ಸರ್ ಜಾಗೃತಿ ಅಭಿಯಾನಗಳಲ್ಲಿ ತೊಡಗಿಸಿಕೊಳ್ಳಲು ಶಿಕ್ಷಕರು ಆನ್‌ಲೈನ್ ಸಂಪನ್ಮೂಲಗಳು, ಶೈಕ್ಷಣಿಕ ಅಪ್ಲಿಕೇಶನ್‌ಗಳು ಮತ್ತು ಅಂತರ್ಜಾಲ ಆಧಾರಿತ ಕಾರ್ಯಾಗಾರಗಳನ್ನು ಬಳಸಿಕೊಳ್ಳಬಹುದು. ಕ್ಯಾನ್ಸರ್ ತಡೆಗಟ್ಟುವಿಕೆ, ಪರೀಕ್ಷೆ ಮತ್ತು ಚಿಕಿತ್ಸೆಯ ಆಯ್ಕೆಗಳಂತಹ ವಿಷಯಗಳನ್ನು ಚರ್ಚಿಸಲು ಶಾಲೆಗಳು ಆರೋಗ್ಯ ವೃತ್ತಿಪರರು, ಬದುಕುಳಿದವರು ಅಥವಾ ಕ್ಯಾನ್ಸರ್ ವಕೀಲರೊಂದಿಗೆ ವೆಬ್‌ನಾರ್‌ಗಳನ್ನು ಆಯೋಜಿಸಬಹುದು. ಸಾಮಾಜಿಕ ಮಾಧ್ಯಮ ವೇದಿಕೆಗಳು ಹೆಚ್ಚಿನ ಪ್ರೇಕ್ಷಕರನ್ನು ತಲುಪಲು ಪ್ರಬಲ ಸಾಧನವನ್ನು ಸಹ ಒದಗಿಸುತ್ತವೆ. ಕ್ಯಾನ್ಸರ್ ಜಾಗೃತಿ ಭಿತ್ತಿಪತ್ರಗಳನ್ನು ಹಂಚಿಕೊಳ್ಳಲು, ವರ್ಚುವಲ್ ಕಾರ್ಯಕ್ರಮಗಳಿಗೆ ಹಾಜರಾಗಲು ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಪ್ರೋತ್ಸಾಹಿಸುವ ಸಾಮಾಜಿಕ ಮಾಧ್ಯಮ ಅಭಿಯಾನಗಳನ್ನು ಶಾಲೆಗಳು ನಡೆಸಬಹುದು. ಕ್ಯಾನ್ಸರ್ ತಡೆಗಟ್ಟುವಿಕೆ ಮತ್ತು ಆರಂಭಿಕ ಪತ್ತೆಯ ಬಗ್ಗೆ ಜನರಿಗೆ ಶಿಕ್ಷಣ ನೀಡುವಾಗ ಈ ಅಭಿಯಾನಗಳು ಸಮುದಾಯದ ಪ್ರಜ್ಞೆಯನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ.

**ಆರೋಗ್ಯ ವೃತ್ತಿಪರರೊಂದಿಗೆ ಸಹಯೋಗ :** ಆರೋಗ್ಯ ಪೂರೈಕೆದಾರರು, ಸ್ಥಳೀಯ ಚಿಕಿತ್ಸಾಲಯಗಳು ಮತ್ತು ಕ್ಯಾನ್ಸರ್ ಸಂಸ್ಥೆಗಳೊಂದಿಗೆ ಸಹಯೋಗವು ಪರಿಣಾಮಕಾರಿ ಕ್ಯಾನ್ಸರ್ ಜಾಗೃತಿ ಉಪಕ್ರಮಗಳನ್ನು ಅಭಿವೃದ್ಧಿಪಡಿಸಲು ಪ್ರಮುಖವಾಗಿದೆ. ಶಾಲೆಗಳಲ್ಲಿ ವೈದ್ಯರು, ದಾದಿಯರು ಅಥವಾ ಸಾರ್ವಜನಿಕ ಆರೋಗ್ಯ ಅಧಿಕಾರಿಗಳನ್ನು ಕ್ಯಾನ್ಸರ್ ತಡೆಗಟ್ಟುವಿಕೆಯ ಕುರಿತು ಮಾತುಕತೆಗಳನ್ನು ನೀಡಲು, ಪ್ರಶ್ನೆಗಳಿಗೆ ಉತ್ತರಿಸಲು ಮತ್ತು ಪರೀಕ್ಷೆಗಳು ಮತ್ತು ಲಸಿಕೆಗಳ ಕುರಿತು ಮಾರ್ಗದರ್ಶನ ನೀಡಲು ಆಹ್ವಾನಿಸಬಹುದು. ಕೆಲವು ಸಂದರ್ಭಗಳಲ್ಲಿ, ಶಾಲೆಗಳಿಗೆ ಭೇಟಿ ನೀಡಿ ಆನ್-ಸೈಟ್ ಆರೋಗ್ಯ ತಪಾಸಣೆ ಅಥವಾ ಮೊಬೈಲ್ ಕ್ಯಾನ್ಸರ್ ಸ್ಕ್ರೀನಿಂಗ್ ಘಟಕಗಳಿಗೆ ವ್ಯವಸ್ಥೆ ಮಾಡಬಹುದು. ಇದು ವಿದ್ಯಾರ್ಥಿಗಳು, ಪೋಷಕರು ಮತ್ತು ಸಿಬ್ಬಂದಿಗೆ ಅಗತ್ಯ ಆರೋಗ್ಯ ಸೇವೆಗಳನ್ನು ತಿಳಿಸಲು ಸುಲಭಗೊಳಿಸುತ್ತದೆ. ಹೆಚ್ಚುವರಿಯಾಗಿ, ಆರೋಗ್ಯ ವೃತ್ತಿಪರರು ಅಮೂಲ್ಯವಾದ ಸಂಪನ್ಮೂಲಗಳನ್ನು ಒದಗಿಸಬಹುದು, ಉದಾಹರಣೆಗೆ ಮಾಹಿತಿ ಕರಪತ್ರಗಳು ಅಥವಾ ಪ್ರತಿಷ್ಠಿತ ಜಾಲತಾಣಗಳ ಲಿಂಕ್‌ಗಳನ್ನು ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ವಿತರಿಸಬಹುದು.

**ಕ್ಯಾನ್ಸರ್ ಜಾಗೃತಿಯಲ್ಲಿ ಪೋಷಕರು ಮತ್ತು ಕುಟುಂಬಗಳನ್ನು ಒಳಗೊಳ್ಳುವುದು :** ಕ್ಯಾನ್ಸರ್ ಜಾಗೃತಿ ಅಭಿಯಾನದ ಪರಿಣಾಮವನ್ನು ಹೆಚ್ಚಿಸುವ ಸಂಭಾಷಣೆಯಲ್ಲಿ ಪೋಷಕರು ಮತ್ತು ಕುಟುಂಬಗಳನ್ನು ಒಳಗೊಳ್ಳುವುದು ಮುಖ್ಯವಾಗಿದೆ. ಶಾಲೆಗಳು ವಿಶೇಷವಾಗಿ ಪೋಷಕರಿಗಾಗಿ ಕಾರ್ಯಾಗಾರಗಳು, ಸೆಮಿನಾರ್‌ಗಳು ಅಥವಾ ಆರೋಗ್ಯ ಮೇಳಗಳನ್ನು ಆಯೋಜಿಸಬಹುದು, ಅಲ್ಲಿ ಅವರು ಕ್ಯಾನ್ಸರ್ ತಡೆಗಟ್ಟುವಿಕೆ, ಆರಂಭಿಕ ಪತ್ತೆ ಮತ್ತು ನಿಯಮಿತ ಪರೀಕ್ಷೆಗಳ ಪ್ರಾಮುಖ್ಯತೆಯ ಬಗ್ಗೆ ಕಲಿಯಬಹುದು. ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್‌ಗಳಂತಹ ಪುರುಷರು ಮತ್ತು ಮಹಿಳೆಯರ ಮೇಲೆ ಪರಿಣಾಮ ಬೀರುವ ಕ್ಯಾನ್ಸರ್‌ಗಳಿಗೆ ಇದು ವಿಶೇಷವಾಗಿ ಮುಖ್ಯವಾಗಿದೆ. ಶಿಕ್ಷಕರು ತಮ್ಮ ಕುಟುಂಬಗಳೊಂದಿಗೆ ಕ್ಯಾನ್ಸರ್ ತಡೆಗಟ್ಟುವಿಕೆಯನ್ನು ಚರ್ಚಿಸಲು ಅಗತ್ಯವಿರುವ ಆರೋಗ್ಯ-ಸಂಬಂಧಿತ ಯೋಜನೆಗಳನ್ನೂ ಸಹ ನಿಯೋಜಿಸಬಹುದು. ಉದಾಹರಣೆಗೆ, ವಿದ್ಯಾರ್ಥಿಗಳು ಕುಟುಂಬದ ಆರೋಗ್ಯ ಇತಿಹಾಸದ ಬಗ್ಗೆ ತಮ್ಮ ಪೋಷಕರನ್ನು ಸಂದರ್ಶಿಸಬಹುದು ಅಥವಾ ಕ್ಯಾನ್ಸರ್-ತಡೆಗಟ್ಟುವ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಅಥವಾ ತಂಬಾಕು ಸೇವನೆಯನ್ನು ಕಡಿಮೆಗೊಳಿಸುವಂತಹ ಕೌಟುಂಬಿಕ ಆರೋಗ್ಯ ಸವಾಲಿಗೆ ಸಹಕರಿಸಬಹುದು.

**ಕ್ಯಾನ್ಸರ್ ಜಾಗೃತಿಯಲ್ಲಿ ಶಿಕ್ಷಕರ ಪಾತ್ರ :** ಶಾಲೆಯಲ್ಲಿ ಆರೋಗ್ಯಕರ ನಡವಳಿಕೆಯನ್ನು ಉತ್ತೇಜಿಸುವುದು. ಶಾಲೆಗಳು ಜೀವನ ಶೈಲಿಯ ಅಭ್ಯಾಸಗಳನ್ನು ರೂಪಿಸುವ ಪರಿಸರಗಳಾಗಿವೆ. ಸಾಮಾನ್ಯ ದೈಹಿಕ ಚಟುವಟಿಕೆ, ಜಂಕ್ ಫುಡ್ ತಪ್ಪಿಸುವುದು ಮತ್ತು ತಂಬಾಕು ಮತ್ತು ಆಲ್ಕೋಹಾಲ್ ಅನ್ನು ದೂರವಿಡುವುದು ಮುಂತಾದ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡುವ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಮೂಲಕ ಶಿಕ್ಷಕರು ಆರೋಗ್ಯಕರ ನಡವಳಿಕೆಗಳನ್ನು ಸಕ್ರಿಯವಾಗಿ ಉತ್ತೇಜಿಸಬಹುದು. ಮ್ಯಾರಥಾನ್‌ಗಳು, ಯೋಗ ಅವಧಿಗಳು ಮತ್ತು ಪೌಷ್ಟಿಕಾಂಶ ಕಾರ್ಯಾಗಾರಗಳನ್ನು ಆಯೋಜಿಸುವಂತಹ ಆರೋಗ್ಯ-ಸಂಬಂಧಿತ ಚಟುವಟಿಕೆಗಳು ಈ ಪಾಠಗಳನ್ನು ಬಲಪಡಿಸಬಹುದು. ಜೊತೆಗೆ, ಶಿಕ್ಷಕರು ಚರ್ಮದ ಕ್ಯಾನ್ಸರ್ ತಡೆಗಟ್ಟಲು ಸೂರ್ಯನ ರಕ್ಷಣೆ ಬಗ್ಗೆ ಜಾಗೃತಿ ಮೂಡಿಸಬಹುದು. ಸನ್‌ಸ್ಕ್ರೀನ್ ಅಥವಾ ರಕ್ಷಣಾತ್ಮಕ ಉಡುಪುಗಳನ್ನು ಧರಿಸುವಂತಹ ಸರಳ ಕ್ರಿಯೆಗಳೊಂದಿಗೆ, ವಿದ್ಯಾರ್ಥಿಗಳು ಹಾನಿಕಾರಕ ಯುವಿ ಕಿರಣಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಕಲಿಯಬಹುದು.

**ಕ್ಯಾನ್ಸರ್ ಜಾಗೃತಿ ಅಭಿಯಾನಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದು :** ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದಂದು, ಶಾಲೆಗಳು ಕ್ಯಾನ್ಸರ್ ಜಾಗೃತಿ ಅಭಿಯಾನಗಳಿಗೆ ಕೇಂದ್ರ ಬಿಂದುವಾಗಿ ಕಾರ್ಯನಿರ್ವಹಿಸುತ್ತವೆ. ಪೋಸ್ಟರ್ ಸ್ಪರ್ಧೆಗಳು, ಪ್ರಬಂಧ ಬರವಣಿಗೆ ಮತ್ತು ಕ್ಯಾನ್ಸರ್ ತಡೆಗಟ್ಟುವಿಕೆಯ ಮೇಲೆ ಕೇಂದ್ರೀಕರಿಸಿದ ಆರೋಗ್ಯ ಮಾತುಕತೆಗಳಂತಹ ಚಟುವಟಿಕೆಗಳನ್ನು ಶಿಕ್ಷಕರು ಆಯೋಜಿಸಬಹುದು. ಆರಂಭಿಕ ಪತ್ತೆ, ಪರೀಕ್ಷೆಗಳು ಮತ್ತು ಆರೋಗ್ಯಕರ ಜೀವನ ಶೈಲಿಯ ಪ್ರಾಮುಖ್ಯತೆಯ ಕುರಿತು ಮಾತನಾಡಲು ಆರೋಗ್ಯ ವೃತ್ತಿಪರರನ್ನು ಆಹ್ವಾನಿಸುವುದು ಸಂಭಾಷಣೆಗೆ ತಜ್ಞರ ಒಳನೋಟಗಳನ್ನು ಸೇರಿಸಬಹುದು. ಶಿಕ್ಷಕರು ಶಾಲಾ ಸುದ್ದಿ ಪತ್ರಗಳು ಅಥವಾ ಕಾರ್ಯಕ್ರಮಗಳ ಮೂಲಕ ಪೋಷಕರನ್ನು ತೊಡಗಿಸಿಕೊಳ್ಳಬಹುದು, ಕ್ಯಾನ್ಸರ್ ತಡೆಗಟ್ಟುವಿಕೆಯ ಕುರಿತು ಪ್ರಮುಖ ಮಾಹಿತಿಯನ್ನು ಹಂಚಿಕೊಳ್ಳಬಹುದು ಮತ್ತು ಜಾಗೃತಿ ಅಭಿಯಾನಗಳಲ್ಲಿ ತೊಡಗಿಸಿಕೊಳ್ಳಲು ಕುಟುಂಬಗಳನ್ನು ಪ್ರೋತ್ಸಾಹಿಸಬಹುದು. ಇದು ಏರಿಳಿತದ ಪರಿಣಾಮವನ್ನು ಉಂಟುಮಾಡಬಹುದು, ಏಕೆಂದರೆ ವಿದ್ಯಾರ್ಥಿಗಳು ತಮ್ಮ ಕುಟುಂಬಗಳೊಂದಿಗೆ ಶಾಲೆಯಲ್ಲಿ ಕಲಿಯುವುದನ್ನು ಆಗಾಗ್ಗೆ ಚರ್ಚಿಸುತ್ತಾರೆ, ಹೀಗಾಗಿ ವಿಶಾಲ ಸಮುದಾಯಕ್ಕೆ ಜಾಗೃತಿಯನ್ನು ಹರಡುತ್ತಾರೆ.

**ಭಾವನಾತ್ಮಕ ಬೆಂಬಲ ಮತ್ತು ಸಹಾನುಭೂತಿಯನ್ನು ಒದಗಿಸುವುದು :** ಕ್ಯಾನ್ಸರ್ ಒಂದು ಸೂಕ್ಷ್ಮ ವಿಷಯವಾಗಿದೆ, ವಿಶೇಷವಾಗಿ ಅವರ ಕುಟುಂಬ ಸದಸ್ಯರು ರೋಗದಿಂದ ಪ್ರಭಾವಿತರಾಗಬಹುದಾದ ವಿದ್ಯಾರ್ಥಿಗಳಿಗೆ. ಶಿಕ್ಷಕರು ತಮ್ಮ ಕಾಳಜಿ ಮತ್ತು ಭಾವನೆಗಳನ್ನು ಚರ್ಚಿಸಲು ವಿದ್ಯಾರ್ಥಿಗಳು ಹಾಯಾಗಿರುವಂತಹ ಬೆಂಬಲ ವಾತಾವರಣವನ್ನು ರಚಿಸಬಹುದು. ಕೌನ್ಸೆಲಿಂಗ್ ಸೇವೆಗಳು ಅಥವಾ ಶಾಲಾ ಬೆಂಬಲ ಗುಂಪುಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದರಿಂದ ವಿದ್ಯಾರ್ಥಿಗಳು ತಮ್ಮ ಅಥವಾ ಅವರ ಕುಟುಂಬದ ಮೇಲೆ ಕ್ಯಾನ್ಸರ್‌ನ ಭಾವನಾತ್ಮಕ ಪ್ರಭಾವವನ್ನು ನಿಭಾಯಿಸಲು ಸಹಾಯ ಮಾಡಬಹುದು. ಹೆಚ್ಚುವರಿಯಾಗಿ, ಶಿಕ್ಷಕರು ಸಹಾನುಭೂತಿ ಮತ್ತು ದಯೆಯನ್ನು ರೂಪಿಸಬಹುದು, ಕ್ಯಾನ್ಸರ್ ವಿರುದ್ಧ ಹೋರಾಡುವವರಿಗೆ ಹೇಗೆ ಬೆಂಬಲವನ್ನು ನೀಡಬೇಕೆಂದು ವಿದ್ಯಾರ್ಥಿಗಳಿಗೆ ಕಲಿಸಬೇಕು. ಶಾಲೆಗಳು ನಿಧಿ ಸಂಗ್ರಹಣೆ ಅಥವಾ ಸಮುದಾಯ ಸೇವಾ ಚಟುವಟಿಕೆಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸಬಹುದು, ಅಲ್ಲಿ ವಿದ್ಯಾರ್ಥಿಗಳು ಕ್ಯಾನ್ಸರ್ ಸಂಶೋಧನೆಗೆ ಕೊಡುಗೆ ನೀಡಬಹುದು ಅಥವಾ ಕ್ಯಾನ್ಸರ್ ರೋಗಿಗಳು ಮತ್ತು ಬದುಕುಳಿದವರನ್ನು ಬೆಂಬಲಿಸಬಹುದು.

ಒಟ್ಟಾರೆಯಾಗಿ ಈ ಲೇಖನವು ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವು ಕ್ಯಾನ್ಸರ್ ತಡೆಗಟ್ಟುವಿಕೆ, ಆರಂಭಿಕ ಪತ್ತೆ ಮತ್ತು ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸಲು ಒಂದು ಪ್ರಮುಖ ಅವಕಾಶವಾಗಿದೆ. ಶಾಲೆಗಳು, ಶಿಕ್ಷಣ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯ ಕೇಂದ್ರಗಳಾಗಿ, ಈ ಪ್ರಯತ್ನದಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತವೆ ಎಂಬುದನ್ನು ತಿಳಿಸುತ್ತದೆ. ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳಲ್ಲಿ ಕ್ಯಾನ್ಸರ್ ಜಾಗೃತಿಯನ್ನು ಬೆಳೆಸುವಲ್ಲಿ ಶಿಕ್ಷಕರು ಪ್ರಮುಖರಾಗಿದ್ದಾರೆ. ಶಾಲಾ-ಆಧಾರಿತ ಶಿಕ್ಷಣ ಕಾರ್ಯಕ್ರಮಗಳು, ಆರೋಗ್ಯ ವೃತ್ತಿಪರರೊಂದಿಗೆ ಸಹಯೋಗ ಮತ್ತು ಸಮುದಾಯ ಉಪಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ, ಶಿಕ್ಷಕರು ತರಗತಿಯ ಆಚೆಗೆ ವಿಸ್ತರಿಸಿರುವ ಆರೋಗ್ಯ ಮತ್ತು ಕ್ಷೇಮದ ಸಂಸ್ಕೃತಿಯನ್ನು ರಚಿಸಲು ಸಹಾಯ ಮಾಡಬಹುದು.

- ಡಾ.ಕೌಶಿಕ್ ಎಂ.ಸಿ.,
ಸಹಾಯಕ ಪ್ರಾಧ್ಯಾಪಕರು,
ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ,
ದಾವಣಗೆರೆ. 9886701926

# ಚಳ್ಳಕೆರೆ : ನಾಡು ನುಡಿ ಕನ್ನಡತನ ಬಿಟ್ಟು ಬದುಕಲು ಸಾಧ್ಯವಿಲ್ಲ



**ಶಾಸಕ ಟಿ. ರಘುಮೂರ್ತಿ**

ಚಳ್ಳಕೆರೆ, ನ. 6- ಕನ್ನಡ ಭಾಷೆ ನಮ್ಮೆಲ್ಲರ ಆಡಳಿತ ಭಾಷೆ. ಕನ್ನಡ ಮತ್ತು ನಾಡು ನುಡಿ ಕನ್ನಡತನ ಬಿಟ್ಟು ಬದುಕಲು ಸಾಧ್ಯವಿಲ್ಲ ಎಂದು ಶಾಸಕ ಟಿ. ರಘುಮೂರ್ತಿ ತಿಳಿಸಿದರು.

ಇಲ್ಲಿನ ಬಿ.ಎಂ. ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜ್ಞಾನಪೀಠ ಪಡೆದ ಎಲ್ಲಾ ಸಾಹಿತಿಗಳು ಕನ್ನಡ ಮಣ್ಣಿನಲ್ಲಿ ಹುಟ್ಟಿ ಬೆಳೆದು, ನಮ್ಮ ಕನ್ನಡಕ್ಕೆ ಕೀರ್ತಿ ತಂದಿದ್ದಾರೆ ಎಂದು ತಿಳಿಸುತ್ತಾ, ಅತಿ ಶೀಘ್ರದಲ್ಲಿ ಕನ್ನಡಿಗರಿಗೆ ಕನ್ನಡ ಭವನ ನಿರ್ಮಿಸುವುದಾಗಿ ಹೇಳಿದರು

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಜೈತುಂಬಿ, ಉಪಾಧ್ಯಕ್ಷರಾದ ಪಾಲಮ್ಮ ತಿಪ್ಪೇಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ. ವೀರಭದ್ರಯ್ಯ, ತಹಶೀಲ್ದಾರ್ ರೆಹಾನ್ ಪಾಶಾ, ನಗರಸಭೆ ಆಯುಕ್ತ ಜಗ್ಗುರೆಡ್ಡಿ, ಗ್ಯಾರಂಟಿ ಯೋಜನೆ ಅಧ್ಯಕ್ಷ ಗದ್ದಿಗೆ ತಿಪ್ಪೇಸ್ವಾಮಿ, ಎಸ್. ಹೆಚ್. ಸೈಯದ್, ಸಿದ್ದಾಪುರ ಶೇಖರ್, ನಾಮ ನಿರ್ದೇಶನ ಸದಸ್ಯರುಗಳಾದ ಹಳೇ ಟೌನ್ ವೀರಭದ್ರ, ಪಾಪಣ್ಣ, ಡಿ.ಕೆ. ಅನ್ವರ್, ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಪಿ. ಬೋರಯ್ಯ, ವಿ. ಶಿವನಪ್ಪ (ಸಾಂಸ್ಕೃತಿಕ ಕ್ಷೇತ್ರ), ಸಿ.ವೈ. ಗಂಗಾಧರ (ಮಾಧ್ಯಮ ಕ್ಷೇತ್ರ - ಜನತಾವಾಣಿ ವರದಿಗಾರ), ನಿವೃತ್ತ ಶಿಕ್ಷಕ ಗುರುಮೂರ್ತಿ, ಕೃಷಿ ಕೇತ್ರದಲ್ಲಿ ಪಗಡಲ ಬಂಡೆ ಸಿದ್ದೇಶ್ವರ ರೆಡ್ಡಿ, ಕಂದಾಯ ಇಲಾಖೆಯ ರಾಜ್ಯ ನಿರೀಕ್ಷಕ ಚೇತನ್‌ಕುಮಾರ್, ಕ್ರೀಡಾ ಕ್ಷೇತ್ರ ಪದ್ಮಾವತಿ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

# ನಾವು ಕನ್ನಡಮುಖಿಗಳಾಗಬೇಕು



**ದಾಗಿನಕಟ್ಟೆ ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ಎಂ.ಆರ್.ಲೋಕೇಶ್ವರಯ್ಯ**

ಚನ್ನಗಿರಿ, ನ.6- ನಾಡು ಉಳಿಯಬೇಕೆಂದರೆ ಭಾಷೆ ಉಳಿಯಬೇಕು. ಭಾಷೆ ಉಳಿಯಬೇಕೆಂದರೆ ನಾವು ಪಡೆದುಕೊಂಡ ಜ್ಞಾನವನ್ನು ಕನ್ನಡಕ್ಕಾಗಿ ಮೀಸಲಿಡಬೇಕು. ನಾವು ಸಂವಹನಕ್ಕಾಗಿ ಬಳಸಲ್ಪಡುವ ಭಾಷೆ ಮೊದಲು ಕನ್ನಡವಾಗಿ, ನಂತರ ಇತರೆ ಭಾಷೆಯಾಗಿರಬೇಕು. ಆ ಮೂಲಕ ನಾವು ಕನ್ನಡಮುಖಿಗಳಾಗಬೇಕು ಎಂದು ಜಿ.ಕೆ.ಹಳ್ಳಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಂ.ಆರ್.ಲೋಕೇಶ್ವರಯ್ಯ ತಿಳಿಸಿದರು.

ಚನ್ನಗಿರಿ ತಾ. ದಾಗಿನಕಟ್ಟೆಯ ವಾಲ್ಮೀಕಿ ಪ್ರೌಢಶಾಲೆಯಲ್ಲಿ ಬುಧವಾರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ 'ಶಾಲಾ ಅಂಗಳದಲ್ಲಿ ನುಡಿ ತೋರಣ' ಕಾರ್ಯಕ್ರಮದಲ್ಲಿ 'ಕನ್ನಡ ನಾಡು-ನುಡಿ' ವಿಷಯ ಕುರಿತು ಅವರು ಮಾತನಾಡಿದರು.

ಕನ್ನಡದಲ್ಲಿ ಲಭ್ಯವಿರದ್ದನ್ನು ಲಭ್ಯವಾಗುವ ಹಾಗೆ ನಮ್ಮ ಕೌಶಲ್ಯ ಹಾಗೂ ಸಾಮರ್ಥ್ಯಗಳು ರೂಪುಗೊಳ್ಳಬೇಕು. ಇದಕ್ಕಾಗಿ ಕನ್ನಡಿಗರಾದವರು ಅನಿವಾರ್ಯವಾಗಿ ಬೇರೆ ಭಾಷೆಯಲ್ಲಿ ಶಿಕ್ಷಣವನ್ನು ಪಡೆದರೂ ಸಾಮರ್ಥ್ಯವನ್ನು ಗಳಿಸಿದ ಮೇಲೆ ಕನ್ನಡದ ಬಳಕೆಯ ವಿಸ್ತರಣೆಗೆ ಅವಶ್ಯವಿರುವ ಕೆಲಸವನ್ನು ಮೊದಲ ಆದ್ಯತೆಯಾಗಿ ನಿರ್ವಹಿಸಬೇಕಾಗಿದೆ ಎಂದರು.

ವಾಲ್ಮೀಕಿ ವಿದ್ಯಾಸಂಸ್ಥೆಯ ಖಜಾಂಚಿ ಹನುಮಂತಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಕಸಾಪ ಅಧ್ಯಕ್ಷ ಎಲ್. ಜಿ.ಮಧುಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯಶಿಕ್ಷಕ ಹೆಚ್.ಎಸ್. ರಂಗಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಬಿ.ಜಿ. ಅಮಿತ್, ಡಿ.ಆರ್. ರಾಮಚಂದ್ರಪ್ಪ, ದೈಹಿಕ ಶಿಕ್ಷಕ ಸಂತೋಷ್ ಮತ್ತಿತರರು ಇದ್ದರು.

# ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ

ದಾವಣಗೆರೆ, ನ.6- ಪರಿಶಿಷ್ಟ ಜಾತಿಗೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ಮಾಧ್ಯಮ ಕ್ಷೇತ್ರದಲ್ಲಿ ಮತ್ತು ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯ ಅವಧಿಯಲ್ಲಿ ಪ್ರತಿ ತಿಂಗಳು 15 ಸಾವಿರ ರೂ. ಗಳ ಪ್ರೋತ್ಸಾಹ ಧನ ನೀಡಲಿದ್ದು, ತರಬೇತಿಯು 2025ರ ಜನವರಿಯಿಂದ ಪ್ರಾರಂಭವಾಗಲಿದೆ.

ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತ್ತಕೋತ್ತರ ಪದವಿ ಪೂರ್ಣಗೊಳಿಸಿದ ಪರಿಶಿಷ್ಟ ಜಾತಿಗೆ ಸೇರಿದ 35 ವರ್ಷದೊಳಗಿನ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಡಿಸೆಂಬರ್ 5 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ. ಮಾಹಿತಿಗಾಗಿ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಥವಾ 9480841218 ಸಂಪರ್ಕಿಸುವಂತೆ ಹಿರಿಯ ಸಹಾಯಕ ನಿರ್ದೇಶಕ ಬಿ. ಧನಂಜಯ ತಿಳಿಸಿದ್ದಾರೆ.

# 24ರಂದು ಹಿಮೋಫಿಲಿಯಾ ಸೊಸೈಟಿ 34ನೇ ವಾರ್ಷಿಕ ಮಹಾಸಭೆ

ದಾವಣಗೆರೆ, ನ.6- ನಗರದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿನ ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯ 34ನೇ ವಾರ್ಷಿಕ ಸಭೆ ಇದೇ ದಿನಾಂಕ 24ರ ಭಾನುವಾರ ಬೆಳಗ್ಗೆ 10ಗಂಟೆಗೆ ಸೊಸೈಟಿ ಕಛೇರಿಯಲ್ಲಿ ನಡೆಯಲಿದೆ.


**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 30x50 East, 50x80 North, 40x60 North, 120 ಅಡಿ ರೋಡಿಗಿದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಖರೀದಿ & ಮಾರಾಟಕ್ಕೆ**
ಹಗೇದಿಬ್ಬ ಸರ್ಕಲ್ ನಲ್ಲಿ ವಾಣಿಜ್ಯ ಸೈಟ್, ದೇವರಾಜ್ ಅರಸು ಬಡಾವಣೆಯಲ್ಲಿ ಸೈಟ್, ವಿಜಯನಗರ ಬಡಾವಣೆಯಲ್ಲಿ ಮನೆ, ಅಶೋಕ ನಗರದಲ್ಲಿ ಸೈಟ್, ಮಾರಾಟಕ್ಕೆ ಇದೆ ಹಾಗೂ ಸೈಟ್, ಮನೆ ಜಮೀನು ಹೊಲ, ತೋಟ ಖರೀದಿ ಮತ್ತು ಮಾರಾಟಕ್ಕೆ ಸಂಪರ್ಕಿಸಿ :
88675 15890, 72592 22590

**RAJASTHAN TOUR**
Dep: 29th NOV, Duration: 10 Days
Premium PKG Rs 59,600 pp
DVG WORLD TOURS
P J Exten, Davanagere.
99006 66122

**ಬೇಕಾಗಿದ್ದಾರೆ**
ವೈನ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಶಾಮನೂರು ರೋಡ್, ದಾವಣಗೆರೆ.
98861 66432

**ಕೆಲಸಕ್ಕೆ ಬೇಕಾಗಿದ್ದಾರೆ**
ರೋಟಿ, ಚಾಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಉಚಿತವಾಗಿ ಕೊಡಲಾಗುವುದು. ದಾವಣಗೆರೆ.
95914 97918

**ಬಾಡಿಗೆಗೆ ಇದೆ**
ದಾವಣಗೆರೆ ಪ್ರಮುಖ ವಾಣಿಜ್ಯ ಪ್ರದೇಶದಲ್ಲಿ ಇರುವ ಹೋಟೆಲ್ ಬಾಡಿಗೆಗೆ ಇದೆ (ಅಡುಗೆ ಪಾತ್ರೆ ಹಾಗೂ ಫರ್ನೀಚರ್ ಸೇರಿ). ಸಂಪರ್ಕಿಸಿ:
ಮೊ: 78923 94915

**DOUBLE ROOMS ಮನೆ ಲೀಸ್‌ಗೆ ಇರುತ್ತದೆ**
ಎಲ್ಲಾ ಸೌಲಭ್ಯವುಳ್ಳ ಹೊಸ ಮನೆ ಲೀಸ್‌ಗೆ ಇದೆ. ಕೊಂಡಜ್ಜಿ ರಸ್ತೆ, ವಿನಾಯಕ ಪಬ್ಲಿಕ್ ಸ್ಕೂಲ್ ಹಿಂಭಾಗ ಅಶೋಕ್ ನಗರ, ದಾವಣಗೆರೆ.
95356 10817, 74060 70957

**ಬೇಕಾಗಿದ್ದಾರೆ**
ಆಟೋ ಮೊಬೈಲ್ಸ್ ಅಂಗಡಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
73380 33337

**TELECALLERS REQUIRED FOR BANKING SERVICES**
CONTACT :
76761 03084

**ಬೇಕಾಗಿದ್ದಾರೆ**
ಸಸ್ಯಹಾರಿ ಅಡುಗೆ ಮಾಡಲು ಲಿಂಗಾಯತ/ಬ್ರಾಹ್ಮಣ ಮಹಿಳೆ ಕೂಡಲೇ ಬೇಕಾಗಿದ್ದಾರೆ.
ವಿದ್ಯಾನಗರ ಕೊನೆಯ ಬಸ್ ನಿಲ್ದಾಣ
88678 30252, 08192 260128

**WANTED**
ಮನೆಯಲ್ಲಿ ಸಸ್ಯಹಾರಿ ಅಡುಗೆ ಮಾಡಲು ಅನುಭವವುಳ್ಳ ಅಡುಗೆ ಕೆಲಸದವರು ಬೇಕಾಗಿದ್ದಾರೆ. ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
87622 21696

**ನೇರ ಪರೀಕ್ಷೆಗಳು**
SSLC, PUC, NTC, BA, B.COM, MA, M.COM, MBA, DIPLOMA, BTECH.
CONTACT : SGET (R)
ಗಾಂಧಿ ಸರ್ಕಲ್, ಪಿ.ಬಿ ರೋಡ್, ಮೋತಿ ಸ್ವೀಟ್ಸ್, ಟ್ರೆಂಡ್ಸ್ ಪಕ್ಕ, ದಾವಣಗೆರೆ.
86602 35013

**ತಕ್ಷಣ ಬೇಕಾಗಿದ್ದಾರೆ**
PUC ಪಾಸ್ / 25 ವರ್ಷದೊಳಗಿನ ಯುವಕ, ಯುವತಿಯರು ದಾವಣಗೆರೆ ನ್ಯೂರೋಥೆರಪಿ ಕೇಂದ್ರದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಆಸಕ್ತರು ಇಂದೇ ಸಂಪರ್ಕಿಸಿ.
99726 00713

**ಬೇಕಾಗಿದ್ದಾರೆ**
ಎಸ್ ಎಸ್.ಎಲ್ ಸಿ ಪಾಸ್/ ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಪಾರ್ಟ್ ಟೈಂ/ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**FOR RENT**
ಶಿವ-ಪಾರ್ವತಿ ದೇವಸ್ಥಾನದ ಎದುರು 1400 ಚದರ ಅಡಿ ಇಂಟೀರಿಯರ್ಸ್ ಸಮೇತ ಬಾಡಿಗೆಗೆ ಇದೆ. ವಿದ್ಯಾನಗರ ಮುಖ್ಯರಸ್ತೆ, ಮೊದಲನೇ ಮಹಡಿ.
72047 48919, 98444 43242

**ಸೈಟು ಮಾರಾಟಕ್ಕಿದೆ**
54x40 ದಕ್ಷಿಣ ಮುಖ, ಇ-ಸ್ವತ್ತು ಡೋ.ನಂ. ಇರುವ ಸೈಟು ಹದಡಿ ರಸ್ತೆ, ಶ್ರೀನಿವಾಸ ನಗರ, 4ನೇ ಕ್ರಾಸ್ ದಾವಣಗೆರೆ. ಮಹಾಂತೇಶ ಗೌಡ್ರು
83105 03746

**ಮಳಿಗೆ ಬಾಡಿಗೆಗಿದೆ Shop For Rent**
ಬೆಳ್ಳುಳ್ಳಿ ಬಿಲ್ಡಿಂಗ್, ಪಿ.ಬಿ. ರೋಡ್, ಶ್ರೀ ಲಾಡ್ಜ್ ಎದುರು, ಗ್ರೌಂಡ್ ಫ್ಲೋರ್, 1400 ಚ.ಅ., 1ನೇ ಮಹಡಿ - 1400 ಚ.ಅ., 2ನೇ ಮಹಡಿ, 1400 ಚ.ಅ.
99022 79003

**REQUIRED**
Accountant for construction office minimum 4 to 5 years experience in GST & Tally
8050222047, 8951938228

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು (ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿಗಳಿಗೆ ಫೈನಾನ್ಸ್ ನೀಡಲಾಗುವುದು
ಶಿವಪ್ಪಯ್ಯ ಸರ್ಕಲ್, ದಾವಣಗೆರೆ..
96860 22969

**ವಾಟರ್ ಟ್ಯಾಂಕ್ & ಸಂಪ್ ಕ್ಲೀನಿಂಗ್**
ಸೋಲಾರ್ ಸೇಲ್ಸ್ ಮತ್ತು ಸರ್ವೀಸ್ ಮನೆ & ಅಪಾರ್ಟ್‌ಮೆಂಟ್‌ಗಳ ತೊಟ್ಟಿಗಳನ್ನು ಯಂತ್ರಗಳ ಮೂಲಕ ಕ್ಲೀನ್ ಮಾಡುತ್ತೇವೆ.
9740007212, 8861961622

**ಬೇಕಾಗಿದ್ದಾರೆ**
ವಿ. ಟ್ರಾನ್ಸ್‌ಪೋರ್ಟ್
ಎಪಿಎಂಸಿ ಮಾರ್ಕೆಟ್, ದಾವಣಗೆರೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
84948 07489
78991 94298

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಮಾಯಕೊಂಡ ಡಿ.ಟಿ.ಪಿ. ಮತ್ತು ಜೆರಾಕ್ಸ್ ಸೆಂಟರ್**
• G-ಸೇವಾಕೇಂದ್ರ • ಆನ್‌ಲೈನ್ ಸರ್ವೀಸ್ • ಇ-ಸ್ಟಾಂಪ್ ಪೇಪರ್ • ಕನ್ನಡ, • ಇಂಗ್ಲಿಷ್ ಟೈಪಿಂಗ್ • ಪ್ರಮಾಣ ಪತ್ರ • ಅಗ್ರಿಮೆಂಟ್ಸ್ • ವಾಟ್ಸ್‌ಅಫ್ ಪ್ರಿಂಟ್ ಔಟ್ • ಲ್ಯಾಮಿನಿಷನ್ • ಲಗ್ನ ಪತ್ರಿಕೆ • ಲೇಟರ್ಸ್ ಪ್ಯಾಡ್ • ಕಲರ್ ಜೆರಾಕ್ಸ್ ಮಾಡಿಕೊಡಲಾಗುತ್ತದೆ.
#181/1 ತೋ 3EF, ರವಿ ನರ್ಸಿಂಗ್ ಹೋಮ್, ಡಾ|| ಕೆಂಚಪ್ಪ ಆಸ್ಪತ್ರೆ ಪಕ್ಕ ನರಸರಾಜ ರೋಡ್, ದಾವಣಗೆರೆ-577001.
ಮೊ. : 98444 38007

**ಖಾಲಿ ಸೈಟು ಮಾರಾಟಕ್ಕಿದೆ**
ನೂತನ ಕಾಲೇಜು ಮುಖ್ಯ ರಸ್ತೆ ಕೃಷಿ ವಿಜ್ಞಾನ ಕೇಂದ್ರದ ಎದುರು 25x50 ಅಳತೆಯ ದಕ್ಷಿಣ ಮುಖವಾಗಿ ಇರುವ ಸೈಟು ಮಾರಾಟಕ್ಕಿದೆ.
89047 10839, 91415 93259

**WANTED**
* Milling and Turning Operator
* Wire EDM Operator
BRANCS INDIA TOOLS PVT LTD., Karur Industri Davangere.
99026 97197
97395 65940

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ & ಮಗು ನೋಡಿಕೊಳ್ಳಲು
ಬೆಳಗ್ಗೆ 8 ರಿಂದ ಸಂಜೆ 6 ಗಂಟೆಯವರೆಗೆ ಬೇಕಾಗಿದ್ದಾರೆ. ದಾವಣಗೆರೆ. ಸಂಪರ್ಕಿಸಿ :
74066 68446

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಕೆಲಸಕ್ಕೆ ಬೇಕಾಗಿದ್ದಾರೆ**
ಸಮ್ಯಕ್ ಸೆರಾಮಿಕ್ಸ್ & ಗ್ರ್ಯಾನೈಟ್ಸ್ ನಗರದ ಪ್ರತಿಷ್ಠಿತ ಟೈಲ್ಸ್ ಶೋರೂಮ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿರುತ್ತಾರೆ. ಜಾಬ್ ವಿವರ : ಸೇಲ್ಸ್ (Sales) ರಿಸೆಪ್ಷನಿಸ್ಟ್ (Receptionist) ಮಾರ್ಕೆಟಿಂಗ್ (Marketing) ಸಂಪರ್ಕಿಸುವ ಮೊ.ನಂ.
80501 80487

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ, ಫೈನಾನ್ಸ್,**
GST & Income Tax
ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
Mob: 94838 62779

**ಕೆಲಸಕ್ಕೆ ಬೇಕಾಗಿದ್ದಾರೆ**
ಟಿವಿ ಅಂಗಡಿಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ದಾವಣಗೆರೆ.
84535 30199

**ರಕ್ತ ದಾನ ಶ್ರೇಷ್ಠ ದಾನ**

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**ಮಳಿಗೆ ಬಾಡಿಗೆಗೆ ಇದೆ**
1ನೇ ಮಹಡಿ ಮಾನಸ ಕಾಂಪ್ಲೆಕ್ಸ್, ಜಯದೇವ ಸರ್ಕಲ್ ಹತ್ತಿರ, ನಿಟ್ಟುವಳ್ಳಿ ರೋಡ್, ದಾವಣಗೆರೆ.
98454 56639
84535 30199

**ಬೇಕಾಗಿದ್ದಾರೆ**
1) ಸೇಲ್ಸ್ ಮನ್ 2) ಟ್ಯಾಲಿ ಆಪರೇಟರ್
ಅನುಭವವುಳ್ಳವರು ಮಾತ್ರ ಸಂಪರ್ಕಿಸಿ.
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
9900438052, 9740153513

**ಬೆಂಗಳೂರಿನಲ್ಲಿ ಬೇಕಾಗಿದ್ದಾರೆ**
ಮನೆ ಕೆಲಸದ ಮಹಿಳೆ ಬೇಕಾಗಿದ್ದಾರೆ. ಸಂಬಳ 15000 ವಸತಿ ಉಚಿತ. ಸಂಪರ್ಕಿಸಿ :
97400 98047

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere 2) Charlie Pailwan Road, Davangere.
Contact: 99167 36057, 95350 51589

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ರಾಜಸ್ಥಾನ ಪ್ರವಾಸ**
ದಿನಾಂಕ : 29ನೇ ನವೆಂಬರ್ 10 ದಿನಗಳು
ವೀಕ್ಷಿಸುವ ಸ್ಥಳಗಳು : ಜೈಪುರ್, ಪುಷ್ಕರ್, ಜೋಧ್‌ಪುರ್, ಜೈಸಲ್ಮೇರ್, ಮೌಂಟ್‌ಅಬು, ನಾಥ್‌ದ್ವಾರ್, ಉದಯ್‌ಪುರ್
ಪ್ರವಾಸದ ಮೊತ್ತ : ರೂ. 59,600/-
ಸೇರ್ಪಡೆಗಳು : *ವಿಮಾನ ದರ * 3 ಸ್ಟಾರ್ ಹೋಟೆಲ್ಸ್ * ಸೌತ್ ಇಂಡಿಯನ್ ಮೀಲ್ಸ್ * ವೋಲ್ವೋ ಬಸ್ * ಟೂರ್ ಗೈಡ್
ಸಂಪರ್ಕಿಸಿ : ಡಿವಿಜಿ ವರ್ಲ್ಡ್ ಟೂರ್ ಪಿಜೆ ಬಡಾವಣೆ, ದಾವಣಗೆರೆ.
9900666122, 9986230333

**ಕಛೇರಿ ಉಪಯೋಗಕ್ಕಾಗಿ ವಾಣಿಜ್ಯ ಕಟ್ಟಡ ಬಾಡಿಗೆಗಿದೆ**
ಲಿಫ್ಟ್, ಪ್ರತೀ ಫ್ಲೋರ್‌ಗೂ ವಾಷ್ ರೂಂ, 24 ಗಂಟೆ ನೀರಿನ ಸೌಕರ್ಯವಿರುವ, ವಾಣಿಜ್ಯ ಉಪಯೋಗದ ವಿದ್ಯುತ್ ಸೌಲಭ್ಯವುಳ್ಳ 5080 ಚ.ಅಡಿ ಅಳತೆಯ ಹೊಸದಾಗಿ ಕಟ್ಟಿರುವ 3 ಅಂತಸ್ತಿನ ವಾಣಿಜ್ಯ ಕಟ್ಟಡ ದಾವಣಗೆರೆ ನರಸರಾಜ ರಸ್ತೆಯಲ್ಲಿ ಕಛೇರಿ ಉಪಯೋಗಕ್ಕೆ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :
ಮೊ. 94812 62505

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**HOUSE FOR RENT**
# 5628/D-23, "Shivaratna", 2 BHK, ground floor, 4th main, 6th cross (left) East facing, Near, Indoor Neharu Stadium, SS Badavane, 'B' blcok,
94489 29509

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಶೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಚುರುಕಾದ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ, ಅನುಭವ ಇಲ್ಲದವರು ಸಂಪರ್ಕಿಸಬಹುದು.
80733 01110

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿನಾಂಕ 7.11.2024ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ)
ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

# ಸಿರಿಗೆರೆಯಲ್ಲಿ ನಾಳೆಯಿಂದ 3 ದಿನಗಳ ತರಳಬಾಳು ನುಡಿಹಬ್ಬ - 2024

ದಾವಾಗೆರೆ, ನ.6- ಕನ್ನಡ ರಾಜ್ಯೋತ್ಸವ ನಿಮಿತ್ತ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ (ಸಿರಿಗೆರೆ) ಹಾಗೂ ಕನ್ನಡ ಸಾಹಿತ್ಯ ಪರಿಷತ್ತು (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ಮಂಟಪದಲ್ಲಿ 'ತರಳಬಾಳು ನುಡಿಹಬ್ಬ-2024' ಅನ್ನು ನಾಡಿದ್ದು ದಿನಾಂಕ 8, 9 ಹಾಗೂ 10 ರಂದು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ಈ ನುಡಿಹಬ್ಬವು ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಾಡಾಗಿದೆ. ಮೂರು ದಿನಗಳ ಕಾಲ ವಿಚಾರ ಗೋಷ್ಠಿಗಳು, ಕವಿಗೋಷ್ಠಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ, ನಾಟಕ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು, ನಾಡಿನ ಹೆಸರಾಂತ ವಿದ್ವಾಂಸರು, ಕವಿಗಳು, ಕಲಾವಿದರು ಭಾಗವಹಿಸಲಿದ್ದಾರೆ.

ನಾಡಿದ್ದು ದಿನಾಂಕ 8 ರ ಶುಕ್ರವಾರ ಬೆಳಗ್ಗೆ 9 ಗಂಟೆಗೆ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ಡಾ. ಪ್ರದೀಪ್ ಕುಮಾರ್ ಹೆಬ್ರಿ ತರಳಬಾಳು ನುಡಿಹಬ್ಬಕ್ಕೆ ಚಾಲನೆ ನೀಡಲಿದ್ದಾರೆ. ಅದಕ್ಕೂ ಮುನ್ನ ಬೆಳಗ್ಗೆ 8 ಗಂಟೆಗೆ ಪ್ರಭಾತ್ ಫೇರಿ ಮತ್ತು ವಿವಿಧ ಕಲಾತಂಡಗಳೊಂದಿಗೆ ಭುವನೇಶ್ವರಿ ದೇವಿ ಮೆರವಣಿಗೆ ನಡೆಯಲಿದೆ. ಬೆಳಗ್ಗೆ 9 ಗಂಟೆಗೆ ಕನ್ನಡ ಧ್ವಜಾರೋಹಣ ನೆರವೇರಲಿದೆ. ಇದೇ ವೇಳೆ ಸಿರಿಗೆರೆ ಶಾಲಾ-ಕಾಲೇಜುಗಳ 4000 ವಿದ್ಯಾರ್ಥಿಗಳಿಂದ 'ಸಹಸ್ರ ಕಂಠ ಕನ್ನಡ ಗೀತ ಗಾಯನ' ನೆರವೇರಲಿದೆ.

ಅಂದು ಬೆಳಿಗ್ಗೆ 10 ಗಂಟೆಗೆ 'ಕನ್ನಡ ಸಾಹಿತ್ಯ ಮತ್ತು ಪರಂಪರೆ' ವಿಷಯ ಕುರಿತು ಮೊದಲ ಗೋಷ್ಠಿ ನಡೆಯಲಿದೆ. ಡಾ. ಕುಮಾರಚಲ್ಯ, ನೀಲಾವರ ಸುರೇಂದ್ರ ಅಡಿಗ, ಡಾ. ಭೀಮಾಶಂಕರ ಜೋಷಿ ಅವರು ವಿಷಯ ಮಂಡಿಸುವರು. ಸರ್ವಜ್ಞ ಕವಿಯ ತ್ರಿಪದಿಗಳು ಮತ್ತು ಡಿವಿಜಿ ಯವರ 'ಮಂಕುತಿಮ್ಮನ ಕಗ್ಗ'ದ ಮೊಬೈಲ್ ತಂತ್ರಾಂಶ (ಆಫ್) ವನ್ನು ಈ ನುಡಿಹಬ್ಬದಲ್ಲಿ ಪ್ರಸಿದ್ಧ ಕವಿ ಡಾ. ಪ್ರದೀಪ್ ಕುಮಾರ್ ಹೆಬ್ರಿ ಲೋಕಾರ್ಪಣೆ ಮಾಡಲಿದ್ದಾರೆ. ನೇ.ಭ. ರಾಮಲಿಂಗಾ ಶೆಟ್ಟಿ ಹಾಗೂ ಡಾ. ಪದ್ಮಿನಿ ನಾಗರಾಜು ಉಪಸ್ಥಿತರಿರುವರು.

ಮಧ್ಯಾಹ್ನ 2.30ಕ್ಕೆ ದಾವಣಗೆರೆ ವಿವಿಯ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗೆ 'ಕನ್ನಡದ ಅಸ್ಮಿತೆ ಕನ್ನಡಿಗರಿಂದ ಸಾಧ್ಯ' ಹಾಗೂ 'ಕನ್ನಡ ಮಾಧ್ಯಮದ ಕಲಿಕೆ ಉದ್ಯೋಗಕ್ಕೆ ಪೂರಕ' ವಿಷಯ ಕುರಿತು ಚರ್ಚಾ ಸ್ಪರ್ಧೆ ನಡೆಯಲಿದೆ. ಎಂ.ಜಿ. ರಂಗಸ್ವಾಮಿ, ಡಾ. ವಿ. ಜಯರಾಮಯ್ಯ ಎಂ. ಪ್ರಕಾಶಮೂರ್ತಿ ಪಾಲ್ಗೊಳ್ಳುವರು. ಸಂಜೆ 6.30 ಕ್ಕೆ ನಡೆಯುವ ನಾಟಕೋತ್ಸವದಲ್ಲಿ ರೈತರ ಧ್ವನಿ, ಬೆಟ್ಟದ ಮೇಲೊಂದು ಮನೆಯ ಮಾಡಿ ಹಾಗೂ ಟ್ಯಾಬ್ಲೆಟ್ ನಾಟಕಗಳು ಪ್ರದರ್ಶನಗೊಳ್ಳಲಿವೆ.

ತರಳಬಾಳು ಕನ್ನಡ ನುಡಿಹಬ್ಬದ ಸಂಚಾಲಕರಾದ ನಾಗರಾಜ ಸಿರಿಗೆರೆ ಮಾತನಾಡಿ, ದಿನಾಂಕ 9 ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಕವಿಗೋಷ್ಠಿ ನಡೆಯಲಿದ್ದು, ಡಾ. ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸುವರು. ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾ.ವೆಂ. ಶ್ರೀನಿವಾಸಮೂರ್ತಿ, ಆರಿಫ್ ರಜಾ, ಲಿಂಗಯ್ಯ ಬಿ. ಹಿರೇಮಠ, ಕೆ.ಎಂ. ಶಿವಸ್ವಾಮಿ ಪಾಲ್ಗೊಳ್ಳಲಿದ್ದಾರೆ. ಕವಿಗೋಷ್ಠಿಯಲ್ಲಿ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯ ಕವಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಅಂದು ಮಧ್ಯಾಹ್ನ 2.30 ಕ್ಕೆ 4ನೇ ಗೋಷ್ಠಿಯಲ್ಲಿ 'ಜಾನಪದ ಸಂಸ್ಕೃತಿಯ ತಾಯಿಬೇರು' ವಿಷಯ ಕುರಿತು ಗೋಷ್ಠಿ ನಡೆಯಲಿದ್ದು, ಡಾ.ಚಿಕ್ಕಣ್ಣ ಎಣ್ಣೆಕಟ್ಟೆ, ಡಾ. ಕುರುವ ಬಸವರಾಜ್, ಡಾ. ನಾಗಪುಷ್ಪಲತಾ ವಿಷಯ ಮಂಡಿಸಲಿದ್ದು, ಎಂ. ಶೈಲಕುಮಾರ್, ಬಿ.ಟಿ. ನಾಗೇಶ್ ಉಪಸ್ಥಿತರಿರುವರು.

ಸಂಜೆ 6.30 ಕ್ಕೆ 'ಸುಗಮ ಸಂಗೀತ ಮತ್ತು ಕವಿ ನಮನ' ಕಾರ್ಯಕ್ರಮದಲ್ಲಿ ಹಾಸನದ ಬನುಮ ಗುರುದತ್ತ ಮತ್ತು ತಂಡದವರು ಸುಗಮ ಸಂಗೀತ ನಡೆಸಿಕೊಡಲಿದ್ದಾರೆ. ನಂತರ ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಕನ್ನಡದ ಪ್ರಖ್ಯಾತ ಕವಿಗಳ ಕವಿತೆಗಳಿಗೆ ನೃತ್ಯ ಸಂಯೋಜನೆ ನಡೆಯಲಿದೆ.

ದಿನಾಂಕ 10 ಭಾನುವಾರ ಬೆಳಿಗ್ಗೆ 10 ಗಂಟೆಗೆ 'ಮಹಿಳೆ ಮತ್ತು ಯುವಜನತೆ' ವಿಷಯ ಕುರಿತು ಗೋಷ್ಠಿ ನಡೆಯಲಿದ್ದು, ಶ್ರೀ ಅಭಿನವ ಚೆನ್ನಬಸವ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದು, ಡಾ. ಗೀತಾ ಬಸವರಾಜ್, ಸಂಧ್ಯಾ ಶೆಣೈ, ಅಶೋಕ ಎಸ್. ಹಂಚಲಿ ವಿಷಯ ಮಂಡನೆ ಮಾಡಲಿದ್ದಾರೆ. ಡಾ. ಎಚ್.ಎಲ್. ಮಲ್ಲೇಶ್ ಗೌಡ ಹಾಗೂ ನಿಷ್ಠಿ ರುದ್ರಪ್ಪ ಉಪಸ್ಥಿತರಿರುವರು.

## ಪುಸ್ತಕ ದರ್ಶನ ಏರ್ಪಾಡು

ತರಳಬಾಳು ನುಡಿಹಬ್ಬದಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಪುಸ್ತಕಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ಪ್ರಸ್ತಕಗಳು, ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯದ ಪುಸ್ತಕಗಳ ದರ್ಶನ ಏರ್ಪಡಿಸಲಾಗಿದೆ.

## ಉಚಿತ ಬಸ್ ವ್ಯವಸ್ಥೆ

ನುಡಿಹಬ್ಬದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಮತ್ತು ಸಾರ್ವಜನಿಕರಿಗೆ ದಾವಣಗೆರೆ ಕುವೆಂಪು ಕನ್ನಡ ಭವನದಿಂದ ಬಸ್ ವ್ಯವಸ್ಥೆ ಮಾಡಲಾಗಿದೆ. ಪಾಲ್ಗೊಳ್ಳುವವರು ನಾಳೆ ದಿನಾಂಕ 7 ಗುರುವಾರದೊಳಗೆ ಕನ್ನಡ ಸಾಹಿತ್ಯ ಪರಿಷತ್ತಿನ ಬಿ. ದಿಳ್ಳೆಪ್ಪ (94492 46195), ಜಗದೀಶ್ ಕೊಲಂಬಿ (94493 20703) ಅವರ ಬಳಿ ನೋಂದಾಯಿಸಿಕೊಳ್ಳುವುದು.

ಭಾನುವಾರ ಮಧ್ಯಾಹ್ನ 2.30ಕ್ಕೆ 'ಮರೆಯಲಾಗದ ಮಹನೀಯರು' ವಿಷಯ ಕುರಿತು 6ನೇ ಗೋಷ್ಠಿ ನಡೆಯಲಿದೆ. ಶ್ರೀ ಅಭಿನವ ಚನ್ನಬಸವ ಸ್ವಾಮಿಗಳು, ಡಾ. ಮಹಾಂತೇಶ ಬಿರಾದಾರ್, ಅನಂತ ದೇಶಪಾಂಡೆ, ಡಾ. ಎಚ್.ಟಿ, ಶೈಲಜಾ ಅವರು ಅಕ್ಕಮಹಾದೇವಿ, ಫ.ಗು. ಹಳಕಟ್ಟಿ, ಬೇಂದ್ರೆ ದರ್ಶನ ಹಾಗೂ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ಕುರಿತು ವಿಷಯ ಮಂಡನೆ ಮಾಡಲಿದ್ದಾರೆ. ಡಾ. ಲಿಂಗರಾಜ ಅಂಗಡಿ, ಸೂರಿ ಶ್ರೀನಿವಾಸ್ ಉಪಸ್ಥಿತರಿರುವರು.

ಭಾನುವಾರ ಸಂಜೆ 6.30 ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಡಿ, ಕುಂಬಾರ ಸಮಾರೋಪ ನುಡಿಗಳನ್ನು ಡಾ. ಎಚ್.ಎಸ್. ಹರಿಶಂಕರ್ ಆಡಲಿದ್ದಾರೆ. ಡಾ. ಬಿ.ಎಂ. ಪಟೇಲ್ ಪಾಂಡು, ಬಿ. ವಾಮದೇವಪ್ಪ. ಕೆ.ಎಸ್. ಸಿದ್ಧಲಿಂಗಪ್ಪ, ಉಪಸ್ಥಿತರಿರುವರು.

## ಶಿಕ್ಷಕರಿಗೆ ಒಒಡಿ ಸೌಲಭ್ಯ

2004ರ ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ ನೂರಕ್ಕೆ ನೂರು ಅಂಕ ಪಡೆದ ವಿದ್ಯಾಸಂಸ್ಥೆಯ ಪದವಿ ಪೂರ್ವ ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು. ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪಿ.ಯು. ಕಾಲೇಜು ಕನ್ನಡ ಶಿಕ್ಷಕರು, ಉಪನ್ಯಾಸಕರುಗಳಿಗೆ ಇಲಾಖೆಯಿಂದ ಅನ್ಯ ಕಾರ್ಯ ನಿಮಿತ್ತ (ಒಒಡಿ) ಸೌಲಭ್ಯವನ್ನು ಕಲ್ಪಿಸಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ದಾವಣಗೆರೆಯಿಂದ ಬಸ್ ಸೌಲಭ್ಯ ಒದಗಿಸಿದೆ ಎಂದು ಸಿರಿಗೆರೆ ನಾಗರಾಜ ತಿಳಿಸಿದರು.

## ನಾಳೆ ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದಿಂದ ರಾಜ್ಯ ಸಮ್ಮೇಳನ

ದಾವಣಗೆರೆ, ನ. 6- ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ (ಎಐಆರ್‌ಡಿಎಂ)ಪ್ರಥಮ ರಾಜ್ಯ ಸಮ್ಮೇಳನ ನಾಳೆ ದಿನಾಂಕ 8 ಮತ್ತು 9 ರಂದು ದಾವಣಗೆರೆಯಲ್ಲಿ ನಡೆಯಲಿದೆ ಎಂದು ಎಐಡಿಆರ್ ರಾಷ್ಟ್ರೀಯ ಮಂಡಳಿ ಸದಸ್ಯ ಡಾ. ಮಹೇಶ್ ಕುಮಾರ್ ರಾಠೋಡ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗ್ರಾಮೀಣ ಮತ್ತು ನಗರದ ಸಾರ್ವಜನಿಕ ಆಸ್ತಿ ದಲಿತರಿಗೆ ಸಮಾನವಾಗಿ ದೊರೆಯುವಂತೆ ಅಗತ್ಯ ಕಾಯ್ದೆಯನ್ನು ರಚಿಸಿ, ಕಟ್ಟುನಿಟ್ಟಾಗಿ ಜಾರಿಗೆ ತರುವುದು ಒಳಗೊಂಡಂತೆ, ಒಟ್ಟು 15 ಪ್ರಮುಖ ಅಂಶಗಳ ಬಗ್ಗೆ ಚರ್ಚಿಸಿ, ಸೂಕ್ತ ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದರು.

ಮಹಿಳೆಯರ ಆರೋಗ್ಯ ಮತ್ತು ರಕ್ಷಣೆ ಖಚಿತಪಡಿಸಲು ಅವರ ಹಕ್ಕುಗಳಿಗೆ ರಕ್ಷಣೆ ಮತ್ತು ಜೀವನ ಕ್ರಮವನ್ನು ಸಮಾನವಾಗಿಸುವ ಬಗ್ಗೆ ಸಮ್ಮೇಳನದಲ್ಲಿ ವಿಸ್ತೃತ ಚರ್ಚೆ ನಡೆಸಲಾಗುವದು. 1976 ರ ಜೀತ ಪದ್ಧತಿ ನಿರ್ಮೂಲನಾ ಜಾರಿ ಕಾಯ್ದೆ, ಬಾಲದುಡಿಮೆ ಪದ್ಧತಿ ರದ್ಧತಿ, ನೂತನ ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸುವುದು ಒಳಗೊಂಡಂತೆ ಹಲವಾರು ವಿಷಯಗಳ ಬಗ್ಗೆ ರಚನಾತ್ಮಕವಾಗಿ ಚರ್ಚೆ ಮಾಡಲಾಗುವುದು ಎಂದು ತಿಳಿಸಿದರು.

ರಾಜ್ಯ ಸಂಚಾಲಕ ಆವರಗೆರೆ ವಾಸು ಮಾತನಾಡಿ, ನಾಡಿದ್ದು ದಿನಾಂಕ 8 ರಂದು ನಗರದ ಜಯದೇವ ವೃತ್ತ ಸಮೀಪದ ಬ್ರಾಹ್ಮಣ ವಿದ್ಯಾರ್ಥಿ ನಿಲಯದ ರಸ್ತೆಯಲ್ಲಿ ಬಹಿರಂಗ ಸಭೆ ನಡೆಯಲಿದೆ. ಬಹಿರಂಗ ಸಭೆಗೂ ಮುನ್ನ ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ನಡೆಸಲಾಗುವುದು. 9 ರಂದು ಹರಿಹರದ ಬೈಪಾಸ್ ರಸ್ತೆಯಲ್ಲಿನ ಮೈತ್ರಿ ವನದಲ್ಲಿ ಪ್ರತಿನಿಧಿಗಳ ಸಮಾವೇಶ ನಡೆಯಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘಟನೆಯ ಪದಾಧಿಕಾರಿಗಲಾದ ಆವರಗೆರೆ ಪಿ.ಬಿ. ಚಂದ್ರು, ಟಿ.ಎಸ್.ನಾಗರಾಜ್, ಎಂ.ಬಿ. ಶಾರದಮ್ಮ, ಗುರುಮೂರ್ತಿ, ಎಸ್. ಚಂದ್ರಪ್ಪ, ಹನುಮಂತಪ್ಪ, ಪಿ.ಷಣ್ಮುಖ ಸ್ವಾಮಿ, ರಾಜು ಕೆರೆಯಾಗಳಹಳ್ಳಿ, ನರೇಗಾ ರಂಗನಾಥ, ವಿ. ಲಕ್ಷ್ಮಣ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಪುರುಷ ಮತ್ತು ಮಹಿಳೆಯರ ಕುಸ್ತಿ ಪಂದ್ಯಾವಳಿ

ಬಾಪೂಜಿ ವಿದ್ಯಾಸಂಸ್ಥೆಯ ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು ದಾ.ವಿ.ವಿ. ದೈಹಿಕ ಶಿಕ್ಷಣ ನಿರ್ದೇಶಕರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್-ಕಾಲೇಜುಗಳ ಪುರುಷ ಮತ್ತು ಮಹಿಳೆಯರ ಕುಸ್ತಿ ಪಂದ್ಯಾವಳಿ ಮತ್ತು ದಾ.ವಿ.ವಿ. ತಂಡದ ಆಯ್ಕೆ ಕಾರ್ಯಕ್ರಮವು ಇಂದು ಬೆಳಗ್ಗೆ 10.30ಕ್ಕೆ ಆಂಜನೇಯ ಬಡಾವಣೆ ಕುಸ್ತಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ.

ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿಶ್ವವಿದ್ಯಾನಿಲಯ ದೈ.ಶಿ. ವಿಭಾಗದ ನಿವೃತ್ತ ನಿರ್ದೇಶಕ ಎಂ.ಎಸ್. ರಾಜಕುಮಾರ್, ಪ್ರಧಾನ ಕಾರ್ಯದರ್ಶಿ ವಿರೇಂದ್ರ ಕೆ.ಎಂ., ಕ್ರೀಡಾಧಿಕಾರಿ ಡಾ. ವೀರಪ್ಪ ಬಿ.ಹೆಚ್. ಆಗಮಿಸುವರು.

ಬಹುಮಾನ ವಿತರಣೆ: ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯದ ಆಡಳಿತಾಧಿಕಾರಿ ಪ್ರೊ. ವೈವೃಷಬೇಂದ್ರಪ್ಪ. ಗೌರವ ಉಪಸ್ಥಿತಿಯಲ್ಲಿ ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯದ ಹಿರಿಯ ಉಪನ್ಯಾಸಕರಾದ ಆರ್. ಎಲ್.ಶೈಲಜ, ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಕೌಶಿಕ್ ಎಂ.ಸಿ., ನಿಶಾಂತ ಟಿ.ಎನ್., ಡಾ. ರಾಜೇಶ್ ಎನ್.ಎಂ. ಇರುವರು.

ಅಧ್ಯಕ್ಷತೆಯನ್ನು ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ನೀತಾ ಎ.ಜೆ. ಅವರು ವಹಿಸಲಿದ್ದಾರೆ.

## ಸಮಾಜ ಕಲ್ಯಾಣ ಕಚೇರಿ ಸ್ಥಳಾಂತರ

ದಾವಣಗೆರೆ,ನ.6-ನಗರದ ಎಂ.ಸಿ ಕಾಲೋನಿಯಲ್ಲಿ ಬಾಡಿಗೆ ಕಟ್ಟಡದಲ್ಲಿದ್ದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯನ್ನು ನೂತನ ಕಾಲೇಜು ರಸ್ತೆಯಲ್ಲಿರುವ ಸರೂರ್ ಆರ್ಕೇಡ್‌ನ ಎರಡನೇ ಮಹಡಿಗೆ ಇದೇ ನ. 11ರಿಂದ ಸ್ಥಳಾಂತರಿಸಲಾಗುವುದು ಎಂದು ಇಲಾಖೆ ಸಹಾಯಕ ನಿರ್ದೇಶಕಿ ರೇಣುಕಾ ದೇವಿ ತಿಳಿಸಿದ್ದಾರೆ.

## ಭದ್ರಾ ಡ್ಯಾಂ ರಕ್ಷಣೆಗಾಗಿ ಜಿಲ್ಲಾ ಬಿಜೆಪಿ ರೈತ ಮೋರ್ಚಾದಿಂದ ಜಿಲ್ಲಾಧಿಕಾರಿಗಳಿಗೆ ಮನವಿ



ದಾವಣಗೆರೆ, ನ.6- ಭದ್ರಾ ಡ್ಯಾಂ ಬಫರ್ ಜೋನ್ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ವಿರೋಧಿಸಿ ಜಿಲ್ಲಾಧಿಕಾರಿ ಯವರಿಗೆ ಜಿಲ್ಲಾ ಬಿಜೆಪಿ ರೈತ ಮೋರ್ಚಾದಿಂದ ಮನವಿ ಪತ್ರ ಸಲ್ಲಿಸಲಾಯಿತು.

ಮಧ್ಯ ಕರ್ನಾಟಕದ ಜನರ ಜೀವನಾಡಿಯಾಗಿ ರುವ ಭದ್ರಾ ಜಲಾಶಯ 6 ಜಿಲ್ಲೆಗಳ ಸುಮಾರು 4.5 ಲಕ್ಷ ಎಕರೆ ಕೃಷಿಗೆ ಮತ್ತು ಕುಡಿಯುವ ನೀರಿನ ನೀರಾವರಿ ಮೂಲವಾಗಿದೆ. ಈ ನೀರನ್ನು ನಂಬಿ ಲಕ್ಷಾಂತರ ರೈತರು ಬದುಕು ಕಟ್ಟಿಕೊಂಡಿದ್ದಾರೆ.

ಆದರೆ ಭದ್ರಾ ಜಲಾಶಯದ ಬುಡದಲ್ಲಿ ಸುಮಾರು 16 ಎಕರೆ ಬಫರ್ ಜೋನ್ ಪ್ರದೇಶದಲ್ಲಿ ಕುಡಿಯುವ ನೀರಿನ ಶುದ್ಧೀಕರಣ ಘಟಕ ಮತ್ತು ವಸತಿ ಸಮುಚ್ಚಯಗಳ ನಿರ್ಮಾಣ ಕಾಮಗಾರಿ ಗಳನ್ನು ಸದ್ದಿಲ್ಲದೆ ಮಾಡಲಾಗುತ್ತಿದೆ. ಇದನ್ನು ತರೀಕೆರೆ ಮತ್ತು ಹೊಸದುರ್ಗ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಲು ಜೆ.ಜೆ.ಎಂ. (ಜಲ ಜೀವನ ಮಿಷನ್) ಯೋಜನೆಯಡಿ ಸುಮಾರು 500 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಇದು ಭದ್ರಾ ಜಲಾಶಯದ ಅಭದ್ರತೆಗೆ ಕಾರಣ ವಾಗಿದೆ ಹಾಗೂ ಸಂಪೂರ್ಣ ಅವೈಜ್ಞಾನಿಕವಾಗಿದೆ.

**ಭದ್ರಾ ಡ್ಯಾಂ ರಕ್ಷಣೆಗಾಗಿ ಮನವಿ ಪತ್ರದಲ್ಲಿ ಸಲ್ಲಿಸಿದ ಪ್ರಮುಖ ಬೇಡಿಕೆಗಳು:**

ಭದ್ರಾ ಡ್ಯಾಂ ತಳಭಾಗದಲ್ಲಿ ಜೆಜೆಎಂ ಯೋಜನೆಯಡಿ ಕೈಗೊಳ್ಳಲಾದ ಅವೈಜ್ಞಾನಿಕ ಕಾಮಗಾರಿಯನ್ನು ತಕ್ಷಣ ನಿಲ್ಲಿಸಬೇಕು. ಜಲಾಶಯ ಸುರಕ್ಷತೆಯಲ್ಲಿ ನಿರ್ಲಕ್ಷ್ಯ ಸಲ್ಲದು. ಭದ್ರಾ ಡ್ಯಾಂ ಸುರಕ್ಷತೆ ಬಗ್ಗೆ ಸಮೀಕ್ಷೆ ಮಾಡಿ, ಸೂಕ್ತ ಭದ್ರತೆ ಕ್ರಮಗಳನ್ನು ಕೈಗೊಳ್ಳಬೇಕು.

1962ರಲ್ಲಿ ಗಾರೆ, ಸುಣ್ಣ ಮತ್ತು ಕಲ್ಲು ಬಳಸಿ ಭದ್ರಾ ಡ್ಯಾಂ ನಿರ್ಮಿಸಲಾಗಿದೆ. ಸಹಜವಾಗಿ ಡ್ಯಾಂನ ತಳಭಾಗದಲ್ಲಿ ನೀರು ಸೋರಿಕೆಯಾಗು ತ್ತಿದೆ. ಈ ಸೋರಿಕೆ ತಡೆಗಟ್ಟಬೇಕು.

ಹಳೆಯದಾಗಿರುವ ಡ್ಯಾಂ ಗೇಟ್‌ಗಳನ್ನು ಸರಿಪಡಿಸಿ, ಗಟ್ಟಿಗೊಳಿಸಬೇಕು.

ಜರ್ಮನ್ ತಂತ್ರಜ್ಞಾನದಡಿ ಸಿದ್ಧಪಡಿಸಿರುವ ಡ್ಯಾಂ ನಿರ್ವಹಣೆ ಕ್ರೇನ್‌ಗಳನ್ನು ರೀ ಕಂಡೀಷನ್ ಮಾಡಿಸಬೇಕು. ಸೇತುವೆ ಬಳಿ ಆಗಾಗ ಕುಸಿಯುವ ತಡೆಗೋಡೆ ಗಳನ್ನು ಸರಿಪಡಿಸಿ, ಭದ್ರಗೊಳಿಸಬೇಕು.

ಡ್ಯಾಂನ ಸುತ್ತಲೂ ಬೇಲಿ ನಿರ್ಮಿಸಿ, ಸುಭದ್ರತೆ ಕಾಪಾಡಬೇಕು.

ಡ್ಯಾಂನ ಸುರಕ್ಷತೆಯ ಮೇಲ್ವಿಚಾರಣೆ ನಡೆಸುವ ಕೇಂದ್ರದ ಜಲ ಆಯೋಗ್ಯ ಡ್ಯಾಂನ ಪುನರುತ್ಥಾನ ಮತ್ತು ಅಭಿವೃದ್ಧಿ ಯೋಜನೆ (ಅಣೆಕಟ್ಟು ಪುನರ್ವಸತಿ ಮತ್ತು ಸುಧಾರಣೆ ಯೋಜನೆ) ಅಡಿಯಲ್ಲಿ ಡ್ಯಾಂನ ಸುರಕ್ಷತೆಗೆ ರೂ.100 ಕೋಟಿಗಳ ಅನುದಾನಕ್ಕಾಗಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ರಾಜ್ಯ ಸರ್ಕಾರ ರೂ.100 ಕೋಟಿ ಅನುದಾನ ಬಿಡುಗಡೆ ಮಾಡಿ, ಡ್ಯಾಂನ ಸುರಕ್ಷತೆ ಕಾಪಾಡಬೇಕು ಎಂದು ಕೋರಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ರೈತ ಮೋರ್ಚಾ ನಿಯೋಗದಲ್ಲಿ ಜಿಲ್ಲಾ ಬಿಜೆಪಿ ವಕ್ತಾರ ಕೊಳೇನಹಳ್ಳಿ ಬಿ ಎಂ ಸತೀಶ್, ಮಾಜಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಎ.ವೈ. ಪ್ರಕಾಶ್, ಮಾಜಿ ಮೇಯರ್ ಹೆಚ್.ಎನ್. ಗುರುನಾಥ್, ಜಿಲ್ಲಾ ಬಿಜೆಪಿ ಮುಖಂಡರಾದ ಎ.ಬಿ.ಹನುಮಂತಪ್ಪ, ಹೆಚ್.ಎನ್. ಶಿವಕುಮಾರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ವಿ.ಚನ್ನಪ್ಪ, ವಕೀಲ ಕೆ.ಹೆಚ್. ಧನಂಜಯ, ಪುಲಿಯ, ಕೊಂಡಜ್ಜಿ ಹನುಮಂತಪ್ಪ, ರಾಜುಗೌಡ ಮತ್ತಿತರರಿದ್ದರು.

## ಜಿಲ್ಲಾ ಮಟ್ಟದ ಮಕ್ಕಳ ದಿನಾಚರಣೆಯ ಸ್ಪರ್ಧೆಗಳಿಗೆ ಅರ್ಜಿ

ದಾವಣಗೆರೆ,ನ.6-ನಗರದ ಜಿಲ್ಲಾ ಬಾಲಭವನ ಸೊಸೈಟಿಯಿಂದ ಮಕ್ಕಳ ದಿನಾಚರಣೆಯ ಪ್ರಯುಕ್ತ 6 ರಿಂದ 16 ವರ್ಷದ ಮಕ್ಕಳಿಗೆ ಇದೇ ದಿನಾಂಕ 12ರಂದು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಅರ್ಜಿ ಆಹ್ವಾನಿಸಲಾಗಿದೆ.

ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ವಾದ್ಯ ಸಂಗೀತ, ತಬಲಾ, ಮೃದಂಗ, ಕೀ ಬೋರ್ಡ್, ಕೊಳಲು, ಡೊಳ್ಳು ಮತ್ತು ನಗಾರಿ, ವಿಜ್ಞಾನದಲ್ಲಿ ಸೃಜನಾತ್ಮಕ ಆವಿಷ್ಕಾರ ಹಾಗೂ ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಿದ್ದು, ಆಸಕ್ತರು ಇದೇ ದಿನಾಂಕ 11 ರೊಳಗಾಗಿ ತಮ್ಮ ಹೆಸರುಗಳನ್ನು ಜಿಲ್ಲಾ ಬಾಲಭವನ, ಜೆ.ಹೆಚ್ ಪಟೇಲ್ ಬಡಾವಣೆ, ಇಲ್ಲಿ ನೋಂದಾಯಿಸಬಹುದು. ಹೆಚ್ಚಿನ ಮಾಹಿತಿಗೆ (9964496242) ಸಂಪರ್ಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.

## ಆರ್ಯ ವೈಶ್ಯ ಅಭಿವೃದ್ಧಿ ನಿಗಮದಿಂದ ಶೈಕ್ಷಣಿಕ ಸಾಲ ಯೋಜನೆಗೆ ಅರ್ಜಿ

ದಾವಣಗೆರೆ,ನ.6- ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿನಲ್ಲಿ ಸಿ.ಇ.ಟಿ, ಹಾಗೂ ಎನ್.ಇ.ಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೃತ್ತಿಪರ ಕೋರ್ಸ್ ಹಾಗೂ ಪಿ.ಹೆಚ್.ಡಿ ವ್ಯಾಸಂಗ ಮಾಡುವ ಆರ್ಯ ವೈಶ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.1,00,000/-ಗಳ ಸಾಲವನ್ನು ಶೇ.2ರ ಬಡ್ಡಿ ದರದಲ್ಲಿ ನೀಡಲಾಗುವುದು.

18 ರಿಂದ 35 ವರ್ಷದ ಒಳಗಿನವರಾಗಿದ್ದು, ಕುಟುಂಬದ ವಾರ್ಷಿಕ ಆದಾಯ ರೂ.6 ಲಕ್ಷಗಳ ಮಿತಿಯೊಳಗಿರಬೇಕು.

ವಿದ್ಯಾಭ್ಯಾಸ ಪೂರ್ಣಗೊಂಡ 4 ತಿಂಗಳ ನಂತರ ಸಾಲವನ್ನು 36 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು.

ಆಸಕ್ತರು ಡಿಸೆಂಬರ್ 15 ರೊಳಗಾಗಿ kacdc.karnataka.gov.ind ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ 08192230934 ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ವ್ಯವಸ್ಥಾಪಕಿ ರೂಪ ಎಸ್.ಟಿ ತಿಳಿಸಿದ್ದಾರೆ.


## ವೀರಪ್ಪ ಭಾವಿ ನಿಧನಕ್ಕೆ ನಾಗರಾಜ್ ಶೋಕ

ದಾವಣಗೆರೆ, ನ.6- ಹಿರಿಯ ಪತ್ರಕರ್ತವೀರಪ್ಪ ಎಂ. ಭಾವಿ ಅವರ ನಿಧನಕ್ಕೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಸಂತಾಪ ವ್ಯಕ್ತಪಡಿಸಿದ್ದಾರೆ. ಪತ್ರಿಕೋದ್ಯಮದಲ್ಲಿ ವೀರಣ್ಣ ಅವರು ಸಲ್ಲಿಸಿದ ಸೇವೆ ಅನನ್ಯ ಎಂದು ನಾಗರಾಜ್ ಶ್ಲಾಘಿಸಿದ್ದಾರೆ.

## ವೀರಪ್ಪ ಭಾವಿ ನಿಧನಕ್ಕೆ ಹೆಚ್‌ಬಿಎಂ ಸಂತಾಪ

ದಾವಣಗೆರೆ, ನ.6- ಇಂದಿನ ಸುದ್ದಿ ಸಂಪಾದಕ ವೀರಪ್ಪ ಎಂ. ಭಾವಿ ಅವರ ನಿಧನಕ್ಕೆ ಹಿರಿಯ ವ್ಯಂಗ್ಯ ಚಿತ್ರಕಾರ ಹೆಚ್.ಬಿ. ಮಂಜುನಾಥ್ ಸಂತಾಪ ವ್ಯಕ್ತಪಡಿಸಿದ್ದಾರೆ. ಪತ್ರಿಕೋದ್ಯಮದ ಜೊತೆ-ಜೊತೆಗೆ ಸಾಮಾಜಿಕ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ವೀರಣ್ಣ ಸೇವೆ ಶ್ಲಾಘನೀಯ ಎಂದವರು ಹೇಳಿದ್ದಾರೆ.

## ರಾಜಕೀಯ ಒತ್ತಡದಲ್ಲಿ ಸರ್ಕಾರಿ ನೌಕರರು



ಬೆಂಗಳೂರು, ನ. 6 - ಸರ್ಕಾರಿ ನೌಕರರು ರಾಜಕೀಯ ಒತ್ತಡದಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಇಡೀ ವ್ಯವಸ್ಥೆ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಬಕಾರಿ ಇಲಾಖೆಯಲ್ಲಿ ಕಮೀಷನ್ ಆರೋಪ ಕೇಳಿಬಂದಿದೆ. ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ, ಅಬಕಾರಿ ಲೈಸೆನ್ಸ್ ನೀಡಲು ಎಷ್ಟು ಕಮೀಷನ್‌ಗೆ ಬೇಡಿಕೆ ಇಡಲಾಗಿದೆ ಎಂಬುದನ್ನು ತಿಳಿಸಬೇಕು ಎಂದರು.

ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂಬುದಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಪ್ತ ಸಹಾಯಕನ ವಿರುದ್ಧ ಡೆತ್‌ನೋಟ್ ಬರೆದಿಟ್ಟು ಸರ್ಕಾರಿ ನೌಕರರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವುದು ಇದಕ್ಕೆ ಸಾಕ್ಷಿಯಾಗಿದ್ದು, ಪ್ರಕರಣದ ತನಿಖೆಯಾಗಬೇಕು ಎಂದವರು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಸರ್ಕಾರಿ ನೌಕರರು ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಂದಲೂ ತಿಂಗಳಿಗೆ ಕಮೀಷನ್ ವಸೂಲಿಗೆ ಫಿಕ್ಸ್ ಮಾಡುವ ಹಂತಕ್ಕೆ ಹೋಗಿದ್ದಾರೆಂದರೆ, ಭ್ರಷ್ಟಾಚಾರ ಯಾವ ಮಟ್ಟಕ್ಕೆ ತಲುಪಿದೆ ಎಂಬುದನ್ನು ಊಹಿಸಬಹುದಾಗಿದೆ ಎಂದು ಟೀಕಿಸಿದರು.

ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಜನರು ಅಭಿವೃದ್ಧಿ ಕಾರ್ಯಗಳ ಫಲ ಅನುಭವಿಸುತ್ತಿದ್ದಾರೆ. ಮುಖ್ಯಮಂತ್ರಿ ಆರೋಪಿಸಿದಂತೆ ಕ್ಷೇತ್ರ ಅಭಿವೃದ್ಧಿ ಶೂನ್ಯವಾಗಿಲ್ಲ ಎಂದು ಸಮರ್ಥಿಸಿಕೊಂಡರು.

## ಕಾಲರ್ ಐ.ಡಿ. ಮಾಹಿತಿ ನಂಬದಂತೆ ಅಧಿಕಾರಿಗಳಿಗೆ ಎಚ್ಚರಿಕೆ

ನವದೆಹಲಿ, ನ. 6 – ಮೊಬೈಲ್‌ಗೆ ಕರೆ ಬಂದಾಗ ಕಂಡು ಬರುವ ಕಾಲರ್ ಐ.ಡಿ. ಮಾಹಿತಿಯನ್ನು ನಂಬಬಾರದು. ಕಾಲರ್ ಐ.ಡಿ. ಮಾಹಿತಿ ದುರ್ಬಳಕೆ ಮಾಡಿಕೊಂಡು ವಂಚಿಸುವ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಸರ್ಕಾರಿ ಅಧಿಕಾರಿಗಳಿಗೆ ಸೈಬರ್ ಸುರಕ್ಷತಾ ಸಲಹೆ ನೀಡಲಾಗಿದೆ.

ಹಿರಿಯ ಸರ್ಕಾರಿ ಅಧಿಕಾರಿಗಳು, ಕಾನೂನು ಜಾರಿ ಸಂಸ್ಥೆಗಳು ಇಲ್ಲವೇ ತಾಂತ್ರಿಕ ಸಲಹಾ ಸಿಬ್ಬಂದಿ ಸೋಗಿನಲ್ಲಿ ಸೈಬರ್ ದಾಳಿಕೋರರು ಕರೆ ಮಾಡುತ್ತಿದ್ದಾರೆ. ನಂತರ ಅಧಿಕೃತ ವ್ಯವಸ್ಥೆಯಲ್ಲಿ ಅನಧಿಕೃತ ಪ್ರವೇಶ ಪಡೆಯುತ್ತಿದ್ದಾರೆ ಎಂದು ನ್ಯಾಷನಲ್ ಇನ್ಫಾರ್ಮೆಟಿಕ್ಸ್ ಸೆಂಟರ್ (ಎನ್.ಐ.ಸಿ.) ತಿಳಿಸಿದೆ.

ವಂಚಕರು ಕಾಲರ್ ಐ.ಡಿ. ಮಾಹಿತಿಯನ್ನು ತಿರುಚುವ ಮೂಲಕ, ಅಸಲಿ ಸರ್ಕಾರಿ ಸಂಖ್ಯೆಯಿಂದಲೇ ಕರೆ ಮಾಡುತ್ತಿರುವ ರೀತಿ ಬಿಂಬಿಸುತ್ತಿದ್ದಾರೆ. ಈ ಬಗ್ಗೆ ಹಲವು ಸರ್ಕಾರಿ ಸಚಿವಾಲಯಗಳು ಹಾಗೂ ಇಲಾಖೆಗಳಿಗೆ ಎನ್.ಐ.ಸಿ. ತಿಳಿಸಿದೆ. ಸರ್ಕಾರಿ ಅಧಿಕಾರಿಗಳನ್ನು ಗುರಿಯಾಗಿಟ್ಟುಕೊಂಡು ನಡೆಸಲಾಗುವ ಈ ರೀತಿಯ ವಿಶಿಂಗ್ ದಾಳಿಗಳ ಸಂಖ್ಯೆ ಕೆಲ ತಿಂಗಳುಗಳಲ್ಲಿ ಹೆಚ್ಚಾಗಿದೆ. ಕರೆಯ ಮೂಲಕ ವಂಚನೆ ಮಾಡುವುದನ್ನು ವಿಶಿಂಗ್ ಎಂದು ಕರೆಯಲಾಗುತ್ತದೆ.

## ಕೆ.ಎಸ್.ಟಿ.ಎ ವಾರ್ಷಿಕ ಬಹುಮಾನಕ್ಕೆ ಅರ್ಜಿ ಆಹ್ವಾನ


ದಾವಣಗೆರೆ, ನ.6- ಪ್ರಸಕ್ತ ಸಾಲಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ಕೃಷಿ ಮತ್ತು ವೈದ್ಯಕೀಯ ವಿಷಯಗಳ ಸಂವಹನಕ್ಕೆ ದಿವ್ಯಾಂಗ ವ್ಯಕ್ತಿಯ ಅತ್ಯುತ್ತಮ ಪ್ರಯತ್ನಗಳನ್ನು ಗುರುತಿಸುವ ಕೆ.ಎಸ್.ಟಿ.ಎ ವಾರ್ಷಿಕ ಬಹುಮಾನ ಮತ್ತು ಪ್ರಶಸ್ತಿ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳಾಗಿ ಅಕಾಡೆಮಿಯ ವೆಬ್ ಸೈಟ್ www.kstacademy.in ಇಲ್ಲಿ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದಾಗಿದೆ. 2025ರ ಜನವರಿ 28 ಅರ್ಜಿ ಸಲ್ಲಿಕೆಗೆ ಕೊನೆ ದಿನವಾಗಿದೆ ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಎಂ.ರಮೇಶ್ ತಿಳಿಸಿದ್ದಾರೆ.

## ನಗರದಲ್ಲಿ ಪಶುಸಂಗೋಪನಾ ಚಟುವಟಿಕೆಗಳ ತರಬೇತಿ

ಇಲ್ಲಿನ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶು ಸಂಗೋಪನಾ ಚಟುವಟಿಕೆಗಳ ತರಬೇತಿ ಆಯೋಜಿಸಲಾಗಿದೆ. ಇದೇ ದಿನಾಂಕ 29, 30ರಂದು ಆಧುನಿಕ ಹೈನುಗಾರಿಕೆ ತರಬೇತಿ, ದಿನಾಂಕ 11 ಮತ್ತು 12ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಹಾಗೂ ದಿನಾಂಕ 15 ಮತ್ತು 16ರಂದು ಕೋಳಿ ಸಾಕಾಣಿಕೆ ತರಬೇತಿ ನಡೆಯಲಿದೆ. ಮಾಹಿತಿಗಾಗಿ 08192-233787 ಸಂಪರ್ಕಿಸಿ.

## ಸಹಕಾರ ಸಂಘಗಳನ್ನು ಸುಸ್ಥಿತಿಯಲ್ಲಿ ಇರಿಸುವ ಕೆಲಸವಾಗಬೇಕು



ನೂತನ ವಾಣಿಜ್ಯ ಸಂಕೀರ್ಣ ಉದ್ಘಾಟನೆಯಲ್ಲಿ ಎಸ್.ಎ. ರವೀಂದ್ರನಾಥ್

ದಾವಣಗೆರೆ, ನ. 6- ಅಧಿಕಾರವಧಿಯಲ್ಲಿ ನಿಷ್ಠೆಯಿಂದ ಉತ್ತಮ ಕೆಲಸ ಮಾಡಬೇಕು. ಆಗ ಸಹಕಾರ ಸಂಘಗಳು ಉದ್ಧಾರ ಆಗಲಿವೆ ಎಂದು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಹೇಳಿದರು.

ಶಿರಮಗೊಂಡನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಎಸ್.ಎ. ರವೀಂ ದ್ರನಾಥ್ ನಗರದಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ನೂತನ ವಾಣಿಜ್ಯ ಸಂಕೀರ್ಣ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಸಂಘಗಳನ್ನು ಸುಸ್ಥಿತಿಯಲ್ಲಿ ಇರಿಸುವ ಕೆಲಸ ಮಾಡಬೇಕು. ಶಿರಮಗೊಂಡನಹಳ್ಳಿ ಕೃಷಿ ಪತ್ತಿನ ಸಂಘವು ಜಿಲ್ಲೆಯಲ್ಲೇ ಉತ್ತಮ ಸಂಘ ಎಂಬ ಹೆಸರು ಪಡೆಯಲಿ ಎಂದು ಹಾರೈಸಿದರು.

ನಬಾರ್ಡ್ ಜಿಲ್ಲಾ ವ್ಯವಸ್ಥಾಪಕರಾದ ರಶ್ಮಿ ರೇಖಾ ಮಾತನಾಡಿ, ಸಹಕಾರ ಸಂಘಗಳನ್ನು ಗಣಕೀಕರಣಕ್ಕೆ ಒಳಪಡಿಸಲಾಗುತ್ತಿದೆ. ಇನ್ನು ಮುಂದಿನ ದಿನಗಳಲ್ಲಿ ಡಿಸಿಸಿ ಬ್ಯಾಂಕ್ ಜೊತೆಗೆ ಇತರೆ ಸಹಕಾರ ಸಂಘಗಳು ಆನ್‌ಲೈನ್ ಮೂಲ ಕವೇ ವ್ಯವಹಾರ ನಡೆಸಬೇಕಾಗಲಿದೆ ಎಂದರು.

ಸಹಕಾರ ಕ್ಷೇತ್ರದಲ್ಲಿ ಅನೇಕ ರೀತಿಯ ಸವಲತ್ತುಗಳಿವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯರು ಇದರ ಲಾಭ ಪಡೆಯಬೇಕು. ಅಲ್ಲದೇ ಹೊಸ ಮಾರ್ಪಾಡುಗಳ ಕುರಿತಂತೆಯೂ ಸಲಹೆಗಳನ್ನು ನೀಡಬಹುದು ಎಂದು ಹೇಳಿದರು.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಮಾತನಾಡಿ, ವಾಣಿಜ್ಯ ಸಂಕೀರ್ಣದ 7 ಮಳಿಗೆಗಳು ಸುಂದರವಾಗಿ ನಿರ್ಮಾಣಗೊಂಡಿವೆ. ಇವನ್ನು ಸುಸ್ಥಿತಿಯಲ್ಲಿ ಇರಿಸಬೇಕು ಎಂದು ಹೇಳಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ. ಶೇಖರಪ್ಪ ಮಾತನಾಡಿ, ಮಳಿಗೆಗಳ ಆದಾಯೋತ್ಪನ್ನ ದಿಂದಲೂ ಪತ್ತಿನ ಸಂಘಗಳನ್ನು ಸುಸ್ಥಿತಿಯಲ್ಲಿ ಇರಿಸಬಹುದು ಎಂದರಲ್ಲದೇ, ರೈತರೂ ಸಕಾಲಕ್ಕೆ ಮರುಪಾವತಿಸಿ ಬಡ್ಡಿ ರಹಿತ ಸಾಲದ ಸೌಲಭ್ಯ ಪಡೆಯಬಹುದು.

ಅನುತ್ಪಾದಿತ ಸಾಲವನ್ನು ನಿಗದಿತ ಅವಧಿಯಲ್ಲಿ ಶೇ. 3ರ ಬಡ್ಡಿ ದರದಲ್ಲಿ ಕಟ್ಟಬೇಕು. ಇಲ್ಲದಿದ್ದರೆ ಸುಸ್ತಿ ಬಡ್ಡಿ ಸಮಸ್ಯೆ ಎದುರಿಸಬೇಕಾದೀತು ಎಂದು ಎಚ್ಚರಿಸಿದರು.

ಮುಖಂಡ ವೀರೇಂದ್ರ ಪಾಟೀಲ್ ಮಾತನಾಡಿ, ವಾಣಿಜ್ಯ ಮಳಿಗೆಗಳನ್ನು ಕಾನೂನು ಚೌಕಟ್ಟಿನಡಿ ಪ್ರಸ್ತುತ ದರಕ್ಕೆ ಬಾಡಿಗೆ ರೂಪದಲ್ಲಿ ವಿತರಿಸಬೇಕು. ಸ್ನೇಹಿತರು, ಸಂಬಂಧಿಕರಿಗೆ ಮಳಿಗೆ ನೀಡುವ ಮುಲಾಜು ಬೇಡ ಎಂದು ಸಲಹೆ ನೀಡಿದರು.

ರೈತ ಎ.ಬಿ. ಕರಿಬಸಪ್ಪ ಮಾತನಾಡಿ, ಪ್ರಾಥಮಿಕ ಕೃಷಿ ಪತ್ತಿನ ಸಂಘದಲ್ಲಿ ಈ ಹಿಂದೆ ಪಡೆದ ಅಡಿಕೆ ಸಂಬಂಧಿತ ಸಾಲ ಮರುಪಾವತಿಸಿದಾಗ ನವೀಕರಣ ಮಾಡಿ ಮರುಸಾಲ ನೀಡಲು ಗಮನ ಹರಿಸಬೇಕು ಎಂದು ಹೇಳಿದರು.

ಚಿಗಟೇರಿ ಆಸ್ಪತ್ರೆಯ ಜಿಲ್ಲಾ ರಕ್ಷಾ ಸಮಿತಿ ಸದಸ್ಯ ಎಸ್. ಎಂ. ರುದ್ರೇಶ್ ಮಾತನಾಡಿ, ಪತ್ತಿನ ಸಂಘದ ಬೆಳವಣಿಗೆಯಲ್ಲಿ ಮಾಜಿ ಸಚಿವ ರವೀಂದ್ರನಾಥ್ ಸಹಕಾರ ನೀಡಿದ್ದಾರೆ. ಪಕ್ಷ ಭೇದ ಇಲ್ಲದಿದ್ದಲ್ಲಿ ಅಭಿವೃದ್ಧಿ ಕಾಣಬಹುದು ಎಂದು ತಿಳಿಸಿದರು.

ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆ ಸುಶೀಲಮ್ಮ ರಾಯಪ್ಪ ರಾಜಪ್ಪ, ಶಿರಮಗೊಂಡನಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಲಲಿತಮ್ಮದೇವೇಂದ್ರಪ್ಪ, ಉಪಾಧ್ಯಕ್ಷೆ ವಿನುತಾ ಸುರೇಶ್‌ಬಾಬು, ಗೌಡ್ರು ಜಯಮ್ಮ, ನೀರು ಬಳಕೆದಾರರ ಸಂಘದ ಅಧ್ಯಕ್ಷ ಜಯಪ್ಪ, ಉಪಾಧ್ಯಕ್ಷ ಡಿ. ಮಂಜುನಾಥ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ. ಮಲ್ಲೇಶಪ್ಪ, ಉದ್ಯಮಿ ಆನಂದ, ಮುಖಂಡರಾದ ಎ.ಎಂ. ಮಂಜುನಾಥ್, ಹೆಚ್.ಜಿ. ಗುಡ್ಡೇಶಪ್ಪ, ಜಿ.ಎನ್. ಸ್ವಾಮಿ, ಶಿವಮೂರ್ತಪ್ಪ ಇತರರಿದ್ದರು.


**ಮಾನ್ಯ ಪ್ರಧಾನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

ಪಿ.ಅಂಡ್.ಎಸ್.ಸಿ. ನಂ. 47/2024

ಅರ್ಜಿದಾರರು : 1) ಅಂಜಿತ್ ಕುಮಾರ್ ಬಿ. ಬಿನ್ ಲಕ್ಷ್ಮಿ ನಾರಾಯಣ, ವಯಸ್ಸು 38 ವರ್ಷ, ವಾಸ : ಬುಳ್ಳಾಪುರ ಕ್ಯಾಂಪ್, ಕುರ್ಕಿ ಅಂಚೆ, ದಾವಣಗೆರೆ ತಾ।। ಜಿ।। 2) ಶ್ರೀಮತಿ ಕೆ. ಜ್ಯೋತಿ ಕೋಂ ಸಾಯಿಕೃಷ್ಣ ವಯಸ್ಸು 42 ವರ್ಷ, ಮನೆ ನಂ : 286-ಎ, ರಾಜಾವಲ ನೋವಿಲ್, ನಾವಲ್ಲಿ, ಬಳ್ಳಾರಿ ಜಿಲ್ಲೆ-583219. 3) ಎಂ. ಮಣಿ ಯಾನೆ ನಾಗಮಣಿ ಎಂ ಬಿನ್ ಸತ್ಯ ನಾರಾಯಣ ಬಿ. ಕೋಂ ಎಂ. ಬ್ಯಾನರ್ಜಿ, ವಯಸ್ಸು 40 ವರ್ಷ ವಾಸ : ನಂ. 466, ಅಶೋಕ ನಗರ ಕ್ಯಾಂಪ್, ನಲ್ಕುದುರೆ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ - 577544. ವಿರುದ್ಧ ಎದುರುದಾರರು : ಇಲ್ಲ

**ಪ್ರಕಟಣೆ**

1 ರಿಂದ 3ನೇ ಅರ್ಜಿದಾರರ ಅಜ್ಜನವರಾದ ಶ್ರೀ ರಾಮರಾವ್ ಯಾನೆ ರಾಮಜ್ಜ ಬಿನ್ ತಿರುಪಯ್ಯ ಇವರು ದಿನಾಂಕ : 1.2.2024 ರಂದು ಮರಣ ಹೊಂದಿರುತ್ತಾರೆ. ಸದರಿಯವರು ತಮ್ಮ ಮರಣಕ್ಕೂ ಮುಂಚಿತವಾಗಿ ಒಂದು ನೋಂದಾಯಿತ ಮರಣ ಶಾಸನ ಪತ್ರವನ್ನು ಬರೆದಿದ್ದು, ಸದರಿ ಮರಣ ಶಾಸನ ಪತ್ರವು ಉಪ ನೋಂದಣಾಧಿಕಾರಿಗಳವರ ಕಚೇರಿ ಹೂವಿನ ಹಡಗಲಿ 3ನೇ ಪುಸ್ತಕದ ದಸ್ತಾವೇಜು ನಂ. HDL-3-00024-2022-23 C.C.NO. HDLD-954 DT.08.07.2022 ರಲ್ಲಿ ಮೇಲ್ಕಂಡ ಅರ್ಜಿದಾರರಿಗೆ ವಿಲ್ ಯಾನೆ ಮರಣ ಶಾಸನ ಪತ್ರವನ್ನು ಬರೆದು ಸಾಕ್ಷಿಗಳ ಸಹಿತ ನೋಂದಾವಣಿ ಮಾಡಿಸಿದ್ದು ಇರುತ್ತದೆ, ಸದರಿ ಶ್ರೀ ರಾಮ ರಾಮ್ ಯಾನೆ ರಾಮಜ್ಜ ಇವರು ದಿನಾಂಕ : 01.02.2024 ರಲ್ಲಿ ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ ಇಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು, ಈಗ ಪ್ರೊಬೇಟ್ ಸಕ್ಸೇಷನ್ ಸರ್ಟಿಫಿಕೇಟ್ ಪಡೆಯಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಈ ಪ್ರಕರಣದಲ್ಲಿ ಬೇರೆ ಯಾರಿಗಾದರೂ ಹಕ್ಕು ಇದ್ದಲ್ಲಿ ಅವರು ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ದಿನಾಂಕ : 06.12.2024 ರಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಘನ ನ್ಯಾಯಾಲಯಕ್ಕೆ ಹಾಜರಾಗಿ ಏನಾದರೂ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಕಾನೂನು ಪ್ರಕಾರ ಏಕತರ್ಫೀಯವಾಗಿ ತೀರ್ಮಾನಿಸಲಾಗುತ್ತದೆ. ನ್ಯಾಯಾಲಯದ ಮೊಹರು ಹಾಗೂ ದಸ್ಕತ್ತಿನೊಂದಿಗೆ ದಿನಾಂಕ : 04.11.2024 ರಂದು ಕೊಡಲಾಗಿದೆ.

ದಾವಣಗೆರೆ, ದಿನಾಂಕ : 30.10.2024
**ಜಯವಿಭವ ಹೆಚ್.ಕೆ. ಕೊಟ್ರೇಶ್ ಎಂ. ಮಳಿಮಠ**
#4758/33 'Sri Guru Nilaya' **ಮೊ. 94485 40161**

ನ್ಯಾಯಾಲಯದ ಆದೇಶದ ಮೇರೆಗೆ,
ಮುಖ್ಯ ಆಡಳಿತಾಧಿಕಾರಿಗಳು, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ



ಚಿತ್ರ: ರಫೀಕ್, ಜನತಾವಾಣಿ

ದಾವಣಗೆರೆ: ಟಿವಿ ಸ್ಟೇಷನ್ ಬಳಿಯ ಅರಣ್ಯ ಇಲಾಖೆ ಆವರಣದಲ್ಲಿ ಸಸಿಗಳ ಪೋಷಣೆಯಲ್ಲಿ ತೊಡಗಿರುವ ಸಿಬ್ಬಂದಿಗಳು.

# ಕಾಯಕದಿಂದ ಮಾತ್ರ ಜೀವನದಲ್ಲಿ ಯಶಸ್ಸು ಸಾಧ್ಯ

ಸಾಣೇಹಳ್ಳಿ, ನ.6- ಜೀವನದಲ್ಲಿ ಯಶಸ್ವಿಯಾಗಬೇಕಾದರೆ ಕಾಯಕ ಶ್ರದ್ಧೆ, ಸದ್ಭಾವನೆ, ಇಚ್ಛಾಶಕ್ತಿ, ಸತತ ಪರಿಶ್ರಮ ಬೇಕು. ಆದರೆ ಕಾಟಾಚಾರಕ್ಕಾಗಿ, ಒತ್ತಡಕ್ಕಾಗಿ, ಭಯಕ್ಕಾಗಿ ಮಾಡಿದರೆ ಯಶಸ್ಸು ಕಾಣಲು ಸಾಧ್ಯವಿಲ್ಲ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದಿಸಿದರು.

ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಇಲ್ಲಿನ ಶಿವಕುಮಾರ ರಂಗಮಂದಿರದಲ್ಲಿ ನಿನ್ನೆ ಆಯೋಜಿಸಿದ್ದ ಚಿಂತನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ನಾವೆಲ್ಲರೂ ಯಶಸ್ಸನ್ನು ಬಯಸುವವರೇ. ಜನರು ಗುರುತಿಸಬೇಕೆಂದು ಬಯಸುವುದು ಸಹಜ. ಆದರೆ ಕಷ್ಟಪಡಬೇಕು, ನಿತ್ಯ ದುಡಿಮೆ ಮಾಡಬೇಕು. ಆಗ ಸಂಪಾದನೆ ಹಾಗೂ ಯಶಸ್ಸು ಸಾಧ್ಯ. ಇದಕ್ಕಾಗಿ ಕ್ರಿಯಾಶೀಲತೆ ಬೆಳೆಸಿಕೊಳ್ಳಬೇಕು. ಯಶಸ್ಸು ಬೇರೆಯವರ ಸಾಧನೆ ನೋಡಿ ಬರುವುದಿಲ್ಲ. ನಾವೇ ಸಾಧನೆಯ ಹೆಜ್ಜೆಗಳನ್ನಿಡ ಬೇಕು ಎಂದು ಶ್ರೀಗಳು



ಕಿವಿಮಾತು ಹೇಳಿದರು.

ಕನಸುಗಳನ್ನು ಕಾಣುವುದು ಬೇರೆ, ಕಟ್ಟೋದು ಬೇರೆ. ಹಗಲು ಹೊತ್ತಿನಲ್ಲಿ ಕಂಡ ಕನಸು ನನಸಾಗಬೇಕಾದರೆ ನಿರಂತರ ಪ್ರಯತ್ನ ಮುಖ್ಯ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಬಹುದೊಡ್ಡ ಕನಸು ಕಂಡರು. ಶಾಲೆ ತೆರೆಯಬೇಕು, ನೂರಾರು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಬೇಕು ಎನ್ನುವ ಕನಸನ್ನು ನನಸಾಗಿಸಲು ಸತತವಾಗಿ ದುಡಿದರು. ಸಮಾಜವನ್ನು ಜಾಗೃತಿಗೊಳಿಸಬೇಕು, ಜನರನ್ನು ದುಡಿಮೆಗೆ ಹಚ್ಚಬೇಕು ಎಂದು ರಾಜ್ಯದ ವಿವಿಧೆಡೆ ಶಾಲೆಗಳನ್ನು ತೆರೆದರು. ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತಲೆ ಎತ್ತುವಂತೆ ಮಾಡಿದರು ಎಂದು ವಿವರಿಸಿದರು.

ಪತ್ರಿಕೆ ಮಾರುತ್ತಿದ್ದ ಅಬ್ದುಲ್ ಕಲಾಂ ರಾಷ್ಟ್ರಪತಿಯಾದರು. ಸತ್ಯ, ಪ್ರಾಮಾಣಿಕತೆ, ಮನೋಬಲ, ಛಲದ ಮೂಲಕ ಅದ್ಭುತ ಯಶಸ್ಸು ಸಾಧಿಸಲು ಸಾಧ್ಯ ಎಂಬುದನ್ನು ಅಬ್ದುಲ್ ಕಲಾಂ ಸಾಬೀತುಪಡಿಸಿದರು. ಅವರ ಹಾಗೆ ವಿದ್ಯಾರ್ಥಿಗಳು ಕನಸು ಕಾಣಬೇಕು. ಜೊತೆಗೆ ನನಸು ಮಾಡಿ ಕೊಳ್ಳಲು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಎಂ.ಯಶೋಧರಮ್ಮ ಕರಿಯಪ್ಪ 'ಯಶಸ್ಸಿನ ಗುಟ್ಟು' ಕುರಿತು ಮಾತನಾಡಿದರು. ಸಂಗೀತ ಶಿಕ್ಷಕ ಎಚ್.ಎಸ್.ನಾಗರಾಜ್ ಪ್ರಾರ್ಥಿಸಿದರು. ಸಿ.ಆರ್. ಸೋಮ ಶೇಖರಪ್ಪ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ವೀರಶೈವ ಧರ್ಮದ ಗುರಿ ಮನುಕುಲದ ಉದ್ಧಾರ



## ಶ್ರೀಶೈಲ ಜಗದ್ಗುರು

ದಾವಣಗೆರೆ, ನ. 6- ಯಾವುದೇ ಜಾತಿ, ಮತ, ಪಂಥ, ವರ್ಣ, ವರ್ಗ, ಲಿಂಗಬೇಧವಿಲ್ಲದೇ ಭೂಮಿಯಲ್ಲಿ ಜನ್ಮ ತಾಳಿದ ಸಮಸ್ತ ಮನುಕುಲದ ಉದ್ಧಾರವೇ ವೀರಶೈವ ಲಿಂಗಾಯತ ಧರ್ಮದ ಪ್ರಮುಖ ಗುರಿಯಾಗಿದೆ ಎಂದು ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ನಗರದ ಡಾ. ಸದ್ಯೋಜಾತ ಶಿವಾ ಚಾರ್ಯ ಸ್ವಾಮೀಜಿಯವರ ಹಿರೇಮಠದ ಆವರಣದಲ್ಲಿ ಹಮ್ಮಿಕೊಂಡಿದ್ದ ಶ್ರೀಶೈಲ ಜಗದ್ಗುರು ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ 38 ನೇ ವಾರ್ಷಿಕ ಸ್ಮರಣೋತ್ಸವ ಹಾಗೂ ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ 13 ನೇ ಪುಣ್ಯಾರಾಧನೆಯ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ವೀರಶೈವ ಧರ್ಮ ಸನಾತನ ಕಾಲದಿಂದಲೂ ಎಲ್ಲರ ಉದ್ಧಾರಕ್ಕಾಗಿ ಶ್ರಮಿಸುತ್ತಾ ಬಂದಿದೆ. ಹುಟ್ಟಿದ ಜಾತಿಯನ್ನು ನೋಡದೇ ಧರ್ಮ ದೀಕ್ಷೆ ನೀಡುವುದಿಲ್ಲ. ಬದಲಾಗಿ ಅಳವಡಿಸಿಕೊಂಡಿರುವ ನೀತಿಯನ್ನು ನೋಡಿ ವೀರಶೈವ ಧರ್ಮ ಪ್ರವೇಶ ನೀಡಲಾಗುತ್ತದೆ ಎಂದರು.

ಪುರುಷರಿಗೆ ಯಾವ ಯಾವ ಧರ್ಮ ಸಂಸ್ಕಾರಗಳನ್ನು ಪಡೆದುಕೊಳ್ಳುವ ಅಧಿಕಾರವಿದೆಯೋ ಆ ಎಲ್ಲಾ ಅಧಿಕಾರಗಳನ್ನು ಮಹಿಳೆಯರಿಗೂ ನೀಡಲಾಗಿದೆ. ಈ ಧರ್ಮದಲ್ಲಿ ಹುಟ್ಟಿದ ನಂತರ ಧರ್ಮ ಸಂಸ್ಕಾರವನ್ನು ಪ್ರಾರಂಭಿಸುವುದಿಲ್ಲ. ಪ್ರಸವ ಪೂರ್ವದಲ್ಲಿಯೇ ಎಂಟನೇ ತಿಂಗಳು ಗರ್ಭವತಿ ತಾಯಿಯ ಉದರದಲ್ಲಿರುವ ಮಗುವಿಗೆ ಲಿಂಗಧಾರಣೆ ಮಾಡುವ ವೈಜ್ಞಾನಿಕ ಪದ್ಧತಿ ಈ ಧರ್ಮದಲ್ಲಿ ರೂಢಿಯಲ್ಲಿದೆ ಎಂದು ಹೇಳಿದರು.

ಧರ್ಮವನ್ನು ಬಿಟ್ಟುವನು ಇತರೆ ಪ್ರಾಣಿಗಳಿಗೆ ಸಮನಾಗಿ, ಮನುಷ್ಯ ದೇಹದ ಪಶು ಎಂದು ಕರೆಯಲ್ಪಡುತ್ತಾನೆ. ಬಿದ್ದವರನ್ನು, ಬೀಳುತ್ತಿರುವವರನ್ನು ಮತ್ತು ಬೀಳಲಿರುವವರನ್ನು ಹಿಡಿದು ಮೇಲೆತ್ತುವುದೇ ನಿಜವಾದ ಧರ್ಮವಾಗಿದೆ. ಧರ್ಮವನ್ನು ಬಿಟ್ಟರೆ ಅಧೋಗತಿ ನಿಶ್ಚಿತ ಎಂದು ಹೇಳಿದರು.

ಕಾರ್ಯಕ್ರಮದ ಸಮ್ಮುಖ ವಹಿಸಿದ್ದ ಬಸವನ ಬಾಗೇವಾಡಿಯ ಡಾ. ಒಡೆಯರ್ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪಂಚಪೀಠಗಳಲ್ಲಿ ಅತ್ಯಂತ ಹೆಚ್ಚು ಭಕ್ತರನ್ನು ಹೊಂದಿದ ಪೀಠವೇ ಶ್ರೀಶೈಲ ಪೀಠವಾಗಿದೆ. ಭಕ್ತಿಯ ನಗರ, ದಾನಿಗಳ ತವರೂರು ಎಂದೇ ಖ್ಯಾತಿ ಹೊಂದಿರುವ ದಾವಣಗೆರೆಯಲ್ಲಿ ಲಿಂ. ವಾಗೀಶ ಪಂಡಿತಾರಾಧ್ಯ ಶ್ರೀ ಹಾಗೂ ಲಿಂ. ಉಮಾಪತಿ ಪಂಡಿತಾರಾಧ್ಯ ಶ್ರೀಗಳ ಕರ್ತೃ ಗದ್ದುಗೆ ಇರುವುದರಿಂದ 'ಅಭಿನವ ಶ್ರೀಶೈಲ' ಎಂದು ಕರೆಯಲಾಗುತ್ತದೆ ಎಂದರು.

'ಸಮಾಜ ಮತ್ತು ಪಂಚಪೀಠಗಳ ಮಹತ್ವ' ಕುರಿತು ಬಳ್ಳಾರಿ ಚಿಕ್ಕಾಟೆ ಮಠದ ವೀರಭದ್ರಯ್ಯ ವಿಷಯ ಮಂಡಿಸಿ ದರು. ತೊಗರ್ಸಿ ಮಳೆ ಹಿರೇಮಠದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಅಂಬಿಕಾನಗರದ ಶ್ರೀ ಈಶ್ವರ ಪಂಡಿತಾ ರಾಧ್ಯ ಶಿವಾಚಾರ್ಯ ಸ್ವಾಮೀಜಿ, ನಿಲೋಗಲ್ ಸಂಸ್ಥಾನ ಬೃಹನ್ಮಠದ ಶ್ರೀ ಅಭಿನವ ರೇಣುಕ ಶಾಂತಮಲ್ಲ ಶಿವಾಚಾರ್ಯ ಸ್ವಾಮೀಜಿ, ಹರ್ಲಾಪುರ ಶ್ರೀಗಳು ಸಮ್ಮುಖ ವಹಿಸಿದ್ದರು.

ಹಿಪ್ಪರಗಿಯ ವಿಶ್ರಾಂತ ಪ್ರಾಧ್ಯಾಪಕ ಸಿ.ಜಿ. ಮಠಪತಿ, ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಎಸ್.ಜಿ. ಉಳುವಯ್ಯ, ಬನ್ನಯ್ಯ ಸ್ವಾಮಿ, ಎಂ.ಎನ್. ಹರೀಶ್, ಕೆ.ಎಂ. ಪರಮೇಶ್ವರಯ್ಯ, ರಾಜಶೇಖರ ಗುಂಡಗಟ್ಟಿ, ಹನುಮಂತಪ್ಪ, ಎನ್.ಹೆಚ್. ಪಟೇಲ್ ಮತ್ತಿತರರು ಉಪಸ್ಥಿತರಿದ್ದರು.

ಸಕ್ಕರೆ ಕಾಯಿಲೆ ತಜ್ಞ ಡಾ. ವಿನಯಕುಮಾರ್ ಸ್ವಾಮಿ, ಶ್ಯಾಮಲ ಎನ್.ಎಂ. ಹಾಲಸ್ವಾಮಿ ಮತ್ತಿತರರು ಗುರು ರಕ್ಷೆ ಸ್ವೀಕರಿಸಿದರು.

ಉಪನ್ಯಾಸಕಿ ಸೌಭಾಗ್ಯ ಹಿರೇಮಠ ಪ್ರಾರ್ಥಿಸಿದರು. ಚಿತ್ರದುರ್ಗದ ಸಾಹಿತಿ ನಿರಂಜನ ದೇವರಮನೆ ನಿರೂಪಿಸಿದರು. ಡಿ.ಎಂ. ಹಾಲಸ್ವಾಮಿ ಸ್ವಾಗತಿಸಿದರು. ಪಿ.ಜಿ. ರಾಜಶೇಖರಯ್ಯ ಧ್ವಜವಂದನೆ ನಡೆಸಿಕೊಟ್ಟರು.



ಲಿಂ.ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ಲಿಂ.ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪುಣ್ಯಾರಾಧನೆ ಅಂಗವಾಗಿ ರಜತ ಮೂರ್ತಿಗಳ ಮೆರವಣಿಗೆಯು ಬುಧವಾರ ನಗರದಲ್ಲಿ ವಿಜೃಂಭಣೆಯಿಂದ ನಡೆಯಿತು.

## ನಟ ಸಲ್ಮಾನ್ ಖಾನ್‌ಗೆ ಬೆದರಿಕೆ : ಬಂಧನ


ಮುಂಬೈ, ನ. 6 - ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಜೀವ ಬೆದರಿಕೆ ಹಾಕಿದ್ದ ಕರ್ನಾಟಕದ ವ್ಯಕ್ತಿಯೋರ್ವನನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. 35 ವರ್ಷದ ಭಿಕಾರಾಮ್ ಜಲರಾಮ್ ಬಿಷ್ಣೋಯಿ ಎಂಬ ವ್ಯಕ್ತಿಯನ್ನು ವೊರ್ಲಿ ಪೊಲೀಸ್ ಠಾಣೆಯ ತಂಡ ಬಂಧಿಸಿ ವಿಚಾರಣೆಗೆ ಒಳಪಡಿಸಿದೆ. ರಾಜಸ್ಥಾನದ ಜಲೋರೆ ಮೂಲದ ಬಿಷ್ಣೋಯಿ, ಮುಂಬೈ ಸಂಚಾರಿ ಪೊಲೀಸರ ನಿಯಂತ್ರಣ ಕೋಣೆಯ ವಾಟ್ಸಾಆಪ್ ಸಂಖ್ಯೆಗೆ ಬೆದರಿಕೆಯ ಮೆಸೇಜ್ ಕಳಿಸಿದ್ದ.

## ನಗರದಲ್ಲಿ ನಾಳೆ ಶ್ರೀ ಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವ

ದಾವಣಗೆರೆ, ನ. 6 - ನಗರದ ಪಿ.ಜೆ. ಬಡಾವಣೆ 6ನೇ ಮುಖ್ಯ ರಸ್ತೆ, 6ನೇ ಕ್ರಾಸ್‌ನಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವದ ಪ್ರಯುಕ್ತ ಪಲ್ಲಕ್ಕಿ ಉತ್ಸವ ಮತ್ತು ಕುಂಭ ಮೇಳ ನಾಡಿದ್ದು ದಿನಾಂಕ 8ರ ಶುಕ್ರವಾರ ಜರುಗಲಿದೆ.

ಅಮ್ಮನವರಿಗೆ ಬೆಳಗ್ಗೆ 6 ರಿಂದ ಹೋಮ, ರುದ್ರಾಭಿಷೇಕ ಮತ್ತು ಪೂಜೆ ಹೂವಿನ ಅಲಂಕಾರ ಇರುತ್ತದೆ. ಕುಂಭ ಹೊರುವ ಹೆಣ್ಣು ಮಕ್ಕಳು (ಗೃಹಿಣಿಯರು) ಬೆಳಿಗ್ಗೆ 9ಕ್ಕೆ ಅಮ್ಮನವರ ಮನೆಯ ಹತ್ತಿರ ಬರುವಂತೆ ತಿಳಿಸಲಾಗಿದೆ.

## ದೊಡ್ಡಬಾತಿಯಲ್ಲಿ ನಾಡಿದ್ದು ಶ್ರೀ ಕೋಟೆ ಆಂಜನೇಯ ದೇವಸ್ಥಾನ ಉದ್ಘಾಟನೆ



ದಾವಣಗೆರೆ, ನ. 6 - ಇಲ್ಲಿಗೆ ಸಮೀಪದ ದೊಡ್ಡಬಾತಿ ಗ್ರಾಮದ ಶ್ರೀ ಕೋಟೆ ಆಂಜನೇಯ ದೇವಸ್ಥಾನ ಉದ್ಘಾಟನೆ, ಶಿಲಾಮೂರ್ತಿ, ನವಗ್ರಹ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮವನ್ನು ಇದೇ ದಿನಾಂಕ 9 ರ ಶನಿವಾರ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ. ರಾಮಘಟ್ಟ ಪುರವರ್ಗ ಮಠದ ಶ್ರೀ ರೇವಣಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯಸಾನ್ನಿಧ್ಯದಲ್ಲಿ ಮತ್ತು ಆವರಗೊಳ್ಳದ ಶ್ರೀ ದೊಡ್ಡವೀರಯ್ಯ ಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಇದೇ ದಿನಾಂಕ 8 ರಂದು ಉದ್ಘಾಟನೆ ನಿಮಿತ್ತ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ದೊಡ್ಡಬಾತಿ, ಶ್ರೀ ಆಂಜನೇಯಸ್ವಾಮಿ ಹಳೇಬಾತಿ, ಶ್ರೀ ಸೂಳೆಕೆರೆ ಸಿದ್ದೇಶ್ವರಸ್ವಾಮಿ ಶಾಂತಿಸಾಗರ (ಸೂಳೆಕೆರೆ), ಶ್ರೀ ಆಂಜನೇಯ ಸ್ವಾಮಿ ದೊಗ್ಗಳ್ಳಿ, ಶ್ರೀ ಬೆಟ್ಟದ ಮಲ್ಲಿಕಾರ್ಜುನ ಸ್ವಾಮಿ ಅಮರಾವತಿ, ಶ್ರೀ ಆಂಜನೇಯ ಸ್ವಾಮಿ ಕುಂದುವಾಡ, ಶ್ರೀ ಬೀರಲಿಂಗೇಶ್ವರ ಸ್ವಾಮಿ ದೊಡ್ಡಬಾತಿ, ಶ್ರೀ ಆಂಜನೇಯ ಸ್ವಾಮಿ ಶಾಮನೂರು ದೇವರುಗಳು, ಶ್ರೀ ಕೋಟೆ ಆಂಜನೇಯ ದೇವಸ್ಥಾನ ಉದ್ಘಾಟನೆಗೆ ಆಗಮಿಸುವರು.

## ದಲಿತ ಹಕ್ಕುಗಳ ಆಂದೋಲನಕ್ಕೆ ಕೊಟ್ರೇಶ್



ಕೊಟ್ಟೂರು, ನ.6- ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದ ವಿಜಯನಗರ ಜಿಲ್ಲಾ ಅಧ್ಯಕ್ಷರಾಗಿ ಕೆ. ಕೊಟ್ರೇಶ್ ಕೊಟ್ಟೂರು ನೇಮಕಗೊಂಡಿದ್ದಾರೆ.

## ವಿಜಯೇಂದ್ರ ಅವರಿಗೆ ಸ್ವಾಗತ..



ದಾವಣಗೆರೆ, ನ.6- ಬೆಂಗಳೂರಿನಿಂದ ಶಿಗ್ಗಾಂವ್‌ಗೆ ತೆರಳುವ ಮಾರ್ಗ ಮಧ್ಯೆ ನಗರದ ಪ್ರವಾಸಿ ಮಂದಿರಕ್ಕೆ ಇಂದು ಬೆಳಿಗ್ಗೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ಮುಖಂಡರಾದ ಲೋಕಿಕೆರೆ ನಾಗರಾಜ್, ಪಿ.ಸಿ. ಶ್ರೀನಿವಾಸ್ ಸ್ವಾಗತಿಸಿ, ಬೀಳ್ಕೊಟ್ಟರು.

## ಡಾ. ಮಂಜುನಾಥ ಅವರಿಗೆ ಪ್ರಶಸ್ತಿ



ದಾವಣಗೆರೆ, ನ.6- ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಕನ್ನಡ ಭಾಷಾ ಅಧ್ಯಾಪಕ ಡಾ. ಮಂಜುನಾಥ ಕೆ.ಆರ್. ಅವರಿಗೆ ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಶ್ರೀ ಸುಜ್ಞಾನ ವಿದ್ಯಾಪೀಠ ಮತ್ತು ಸಾಂಸ್ಕೃತಿಕ ರಂಗ ಕಲಾವಿದರ ಸಾಧಕರ ಶ್ರೀ ಮಾತಾ ಪ್ರಕಾಶನ ಕರ್ನಾಟಕ ವತಿಯಿಂದ ಕೊಡಮಾಡುವ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಮಂಜುನಾಥ, ಮೂಲತಃ ದಾವಣಗೆರೆ ತಾಲ್ಲೂಕಿನ ಕುರ್ಕಿ ಗ್ರಾಮದವರು.


ವಾಣಿಜ್ಯ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ



ನಗರದ DCM ಬಡಾವಣೆಯ 60 ಅಡಿ ಮುಖ್ಯ ರಸ್ತೆಯ ಕಾರ್ನರ್ ಜಾಗ ಹಾಗೂ ವಾಟರ್ ಟ್ಯಾಂಕ್ ಬಸ್ ಸ್ಟ್ಯಾಂಡ್‌ಗೆ ಹೊಂದಿಕೊಂಡಿರುವ 12x20/24x22/32x20 ಅಡಿ ವಿವಿಧ ಅಳತೆಯ ಬಹು ಉಪಯೋಗಿ ವಾಣಿಜ್ಯ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. (ಯುಟಿಲಿಟಿ ಸೌಲಭ್ಯ ಹೊಂದಿರುವ)

ಮಂಜುನಾಥ್, ಮೊ : 83175 88730



ಅತೀ ಶೀಘ್ರದಲ್ಲಿ ಪ್ರಾರಂಭ...

FORUM OF PRACTICING ARCHITECTS & CIVIL ENGINEERS (R)

Free Entry Only 3 Days

BUILD MAT - EXPO

ಕಟ್ಟಡ ಸಾಮಾಗ್ರಿಗಳ ಇಂಟೀರಿಯರ್, ಎಕ್ಸ್‌ಟೀರಿಯರ್ ಗೃಹಾಲಂಕಾರಗಳ & ಫರ್ನೀಚರ್

ವಸ್ತು ಪ್ರದರ್ಶನ

STALL BOOKING CONTACT

ಮಳಿಗೆಗಳನ್ನು ಕಾಯ್ದಿರಿಸಲು ಸಂಪರ್ಕಿಸಿರಿ

9480424603 | 9986814680

Date: 15th, 16th & 17th November 2024

Venue: Govt. High School Ground, PB Road, Davangere

A Event by: US COMMUNICATIONS, Bengaluru.


# ಎಲ್‌ಎಂವಿ ಇದ್ದರೆ 7,500 ಕೆಜಿ ಸಾರಿಗೆ ವಾಹನ ಚಲಾಯಿಸಬಹುದು

ನವದೆಹಲಿ, ನ. 6 - ಲಘು ಮೋಟಾರು ವಾಹನ (ಎಲ್.ಎಂ.ವಿ.) ಚಾಲನಾ ಅನುಮತಿ ಹೊಂದಿರುವವರು 7,500 ಕೆ.ಜಿ. ತೂಕದ ಒಳಗಿನ ಸಾರಿಗೆ ವಾಹನಗಳನ್ನು ಚಲಾಯಿಸಬಹುದು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಈ ತೀರ್ಪು ವಾಣಿಜ್ಯ ವಾಹನ ಚಾಲಕರಿಗೆ ನೆರವಾಗಲಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ ಈ ಬಗ್ಗೆ ತೀರ್ಪು ನೀಡಿದೆ.

ಕೋರ್ಟ್ ತೀರ್ಪಿನ ಕಾರಣದಿಂದಾಗಿ ಅನುಮತಿ ನಿಯಮಗಳಲ್ಲಿ ಸ್ಪಷ್ಟತೆ ಬರಲಿದೆ. ಅಪಘಾತ ಸಂಭವಿಸಿದ ಸಂದರ್ಭದಲ್ಲಿ ವಿಮಾ ಕಂಪನಿಗಳು ಕ್ಲೇಮುಗಳನ್ನು ನಿರಾಕರಿಸುವುದು ತಪ್ಪಲಿದೆ.

ಲಘು ಮೋಟಾರು ವಾಹನ ಚಾಲನಾ ಅನುಮತಿ ಹೊಂದಿರುವ ವ್ಯಕ್ತಿ 7,500 ಕೆ.ಜಿ. ತೂಕದವರೆಗಿನ ವಾಹನಗಳನ್ನು ಚಲಾಯಿಸಬಹುದು. ಇದಕ್ಕಾಗಿ ಹೆಚ್ಚುವರಿ ಅನುಮತಿಯ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಲಘು ಮೋಟಾರು ವಾಹನ ಹಾಗೂ ಸಾರಿಗೆ ವಾಹನಗಳು ಪ್ರತ್ಯೇಕ ವರ್ಗಗಳಲ್ಲ. ಎರಡರ ನಡುವೆ ಸಾಮ್ಯತೆ ಇದೆ ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿದೆ. ಪೀಠವು ಸರ್ವಸಮ್ಮತಿಯ ತೀರ್ಪು ಪ್ರಕಟಿಸಿದೆ. ಆದರೆ, ಅಪಾಯಕಾರಿ ಸರಕುಗಳನ್ನು ಸಾಗಿಸುವ ವಾಹನಗಳಿಗೆ ವಿಶೇಷ ಅರ್ಹತೆಯ ಅಗತ್ಯವಿದೆ ಎಂದು ನ್ಯಾಯಮೂರ್ತಿ ಹೃಶಿಕೇಶ್ ರಾಯ್ ಅವರು ಪ್ರತ್ಯೇಕ ತೀರ್ಪು ನೀಡಿದ್ದಾರೆ.

ತೀರ್ಪು ನೀಡಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ, ಪಂಕಜ್ ಮಿತ್ತಲ್ ಹಾಗೂ ಮನೋಜ್ ಮಿಶ್ರ ಅವರೂ ಇದ್ದಾರೆ.

ರಸ್ತೆ ಸುರಕ್ಷತೆ ಜಾಗತಿಕವಾಗಿ ಗಂಭೀರ ವಿಷಯವಾಗಿದೆ. ಭಾರತದಲ್ಲಿ ಪ್ರತಿ ವರ್ಷ ರಸ್ತೆ ಅಪಘಾತಗಳಿಂದ 1.7 ಲಕ್ಷ ಜನರು ಸಾವನ್ನಪ್ಪುತ್ತಿದ್ದಾರೆ. ಲಘು ಮೋಟಾರು ವಾಹನಗಳ ಅನುಮತಿ ಹೊಂದಿರುವವರು ಹಗುರ ಸಾರಿಗೆ ವಾಹನಗಳ ಚಾಲನೆ ಮಾಡುವುದರಿಂದ ಅಪಘಾತಗಳು ಸಂಭವಿಸುತ್ತಿವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಹೇಳಲಾಗಿದೆ.

ಬೇಜವಾಬ್ದಾರಿ ಚಾಲನೆ, ವೇಗದ ಚಾಲನೆ, ರಸ್ತೆ ವಿನ್ಯಾಸ ಹಾಗೂ ಸಂಚಾರ ನಿಯಮಗಳನ್ನು ಪಾಲಿಸದೇ ಇರುವುದು ಸೇರಿದಂತೆ ಹಲವು ಕಾರಣಗಳಿಂದ ಅಪಘಾತಗಳು ಸಂಭವಿಸುತ್ತಿವೆ. ವಾಹನ ಚಲಾಯಿಸುವಾಗ ಮೊಬೈಲ್ ಫೋನ್ ಬಳಸುವುದು ಹಾಗೂ ವಾಹನ ಚಲಾಯಿಸುವಾಗ ಹೆಲ್ಮೆಟ್ ಧರಿಸದೇ ಇರುವುದು ಮತ್ತು ಬೆಲ್ಟ್ ಹಾಕಿಕೊಳ್ಳದೇ ಇರುವುದೂ ಅಪಘಾತಗಳಿಗೆ ಕಾರಣವಾಗುತ್ತಿದೆ ಎಂದು ಪೀಠ ಹೇಳಿದೆ.

ಲಘು ಮೋಟಾರು ವಾಹನದ ಅನುಮತಿ ಹೊಂದಿರುವವರು ವಾಣಿಜ್ಯ ವಾಹನಗಳನ್ನು ಚಲಾಯಿಸುತ್ತಿರುವ ಕಾರಣದಿಂದ ಅಪಘಾತಗಳ ಸಂಖ್ಯೆ ಹೆಚ್ಚಾಗಿದೆ ಎಂಬುದಕ್ಕೆ ಯಾವುದೇ ಆಧಾರಗಳನ್ನು ಕಕ್ಷಿದಾರರು ಒದಗಿಸಿಲ್ಲ ಎಂದು ಪೀಠ ತಿಳಿಸಿದೆ.


ಮೂರನೇ ವರ್ಷದ ಪುಣ್ಯಸ್ಮರಣೆ



ಶ್ರೀ ಜೋಗಪ್ಪನವರ ಬಸಪ್ಪನವರು

ಲಿಂಗೈಕ್ಯ : 07.11.2021

ದೇಹಿನೋ ಸ್ಮಿನ್ಯಥಾ ದೇಹೇ ಕೌಮಾರಂ ಯೌವನಂ ಜರಾ । ತಥಾ ದೇಹಾಂತರ ಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥ ಭಗವದ್ಗೀತಾ ॥ 12-13 ॥


ನೀವು ನಮ್ಮನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಮಾರ್ಗದರ್ಶನದೊಂದಿಗೆ ಮುನ್ನಡೆಯುತ್ತಿರುವ..

ಕುಟುಂಬದವರು : ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಜೋಗಪ್ಪನವರ ವಂಶಸ್ಥರು ಹಾಗೂ ಬಂಧು ಮಿತ್ರರು.

ಮೊ. : 94483 72247, 99023 77557, 90358 25959



ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಸಿಟಿ ಎಂಸಿಸಿ ಬಿ ಬ್ಲಾಕ್ ನಿವಾಸಿಗಳಾದ

ಕಾಸಲ್ ರಾಧಾಕೃಷ್ಣ ಗುಪ್ತ

ಇವರು, ದಿನಾಂಕ 06.11.2024ರ ಬುಧವಾರ ನಿಧನರಾಗಿದ್ದು ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಶ್ರೀಯುತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಎಂದು ಪ್ರಾರ್ಥಿಸುತ್ತೇವೆ.

ಎಸ್.ಟಿ. ಕುಸುಮ ಶ್ರೇಷ್ಠಿ, ವರ್ತಕರು, ದಾವಣಗೆರೆ
ಡಾ. ಎಸ್.ಕೆ. ವೆಂಕಟೇಶ್ ಗುಪ್ತ
ಎಸ್.ಕೆ. ಪ್ರಶಾಂತ ಗುಪ್ತ
ಎಸ್.ಕೆ. ತಿಮ್ಮರಾಜ್ ಗುಪ್ತ


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas